# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ಮೂಲ ಪಠ್ಯ
## BASIC TEXT

ತರಗತಿ

**IX**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - IX (Basic Text)

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾ ಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA - IX BT

**Advisor**

| | |
|---|---|
| Shivashankara P. | Asst. Professor, GPM College, Manjeshwar |

**Chairman**

| | |
|---|---|
| Ram Bhat C.H. | Rtd. HOD, Government College, Kasaragod |

**Experts**

| | |
|---|---|
| Dr. Subbanna Rai | Professor, Kannada University, Hampi |
| Dr. A. Mohana Kuntar | Professor, Kannada University, Hampi |
| Dr. Narendra Rai Derla | Professor, GFW College, Puttur |

**Participants**

| | |
|---|---|
| Veena K. | Rtd. HM, GHSS Bandadka |
| Vishalaksha Puthrakala | Rtd. HST, SGKHS Kudlu |
| Kalavathi B. | HST, SAPHS Agalpady |
| Bhagyalakshmi | HST, GHSS Bekur |
| Ravindra | HST, GHSS Uppala |
| Raina Evet D'Souza | HST, GHSS Paivalike Nagar |
| Shwetha Kumari M | HST, SDPHSS Dharmathadka |
| Savithri M. | HST, SVVHSS Miyapadavu |
| Prashanth Kumar S | HST, SSHSS Sheni |

**Artists**

| | |
|---|---|
| Sathyanarayana Ail | Drawing Teacher, GHSS Mangalpady |
| Prakash P. | Specialist Drawing Teacher, BRC Manjeshwar |
| Jayaprakash Shetty | Drawing Teacher, SATHSS Manjeshwar |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram


ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)

ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | | ಪುಟಗಳು |
|---|---|---|---|
| **ಘಟಕ 1 : ಸಂಸ್ಕೃತಿಯ ತವರು** | | | **7 - 29** |
| • | ಮಂಗಲಗೀತ | ಕವನ | ಕಡೆಂಗೋಡ್ಲು ಶಂಕರಭಟ್ಟ |
| • | ಒಂದು ಮೂಸುಂಬೆ ಇನ್ನೊಂದು ಗೋಸುಂಬೆ! | ಲೇಖನ | ಹಿರೇಮಗಳೂರು ಕಣ್ಣನ್ |
| • | ಭೂಲೋಕದ ಅಮರಾವತಿ-ಶಿಮ್ಲಾ | ಪ್ರವಾಸ ಕಥನ | ಜಯದೇವಪ್ಪ ಜೈನಕೇರಿ |
| **ಘಟಕ 2 : ಸಾಮರಸ್ಯದ ಬೆಳಕು** | | | **30 - 53** |
| • | ಗಂಡು ಜೀವ, ಹೆಣ್ಣು ಭಾವ | ಆತ್ಮಕಥೆ | ಬಿ. ಎಸ್. ಜಯಪ್ರಕಾಶ ನಾರಾಯಣ |
| • | ಹಾಡು, ಕವಿಯೆ, ಹಾಡು | ಕವನ | ಕೆ.ಎಸ್. ನಿಸಾರ್ ಅಹಮದ್ |
| • | ಪೊಲೀಸ್ ಪುಟ್ಟಮ್ಮ | ಕತೆ | ಎಂ.ಕೆ. ಇಂದಿರಾ |
| **ಘಟಕ 3 : ಕಾಯಕವೇ ಕೈಲಾಸ** | | | **54 - 74** |
| • | ಅಗ್ನಿಶಾಮಕರು | ಕವನ | ಡಾ. ಸಿದ್ಧಲಿಂಗಯ್ಯ |
| • | ಕಲ್ಪವೃಕ್ಷದ ಹೋಟೆಲು | ಲಲಿತ ಪ್ರಬಂಧ | ಪ. ರಾಮಕೃಷ್ಣಶಾಸ್ತ್ರಿ |
| • | ನ್ಯಾಯದ ತಕ್ಕಡಿ | ನಾಟಕ | ಕಾರ್ಕಡ ರಾಮಚಂದ್ರ ಉಡುಪ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.







# 1. ಸಂಸ್ಕೃತಿಯ ತವರು

ನಮ್ಮ ದೇಶ ವೈವಿಧ್ಯಪೂರ್ಣವಾದ ಕಲೆ, ಸಂಸ್ಕೃತಿಗಳ ತವರೂರಾಗಿದೆ. ನಮ್ಮ ನಾಡಿನ ಕಲೆ, ಸಂಸ್ಕೃತಿಗಳ ಕುರಿತಾದ ಹಲವು ವಿಚಾರಗಳನ್ನು ನಾವು ಹಿಂದಿನ ತರಗತಿಗಳಲ್ಲೇ ಕವನ ,ಕಥೆ ,ಲೇಖನಗಳ ಮೂಲಕ ತಿಳಿದುಕೊಂಡಿದ್ದೇವೆ. ಕಲೆ ಬಾಹ್ಯವಾಗಿ ಪ್ರಕಟವಾದರೆ ಸಂಸ್ಕೃತಿ ಮಾನವನ ಅಂತರಂಗಕ್ಕೆ ಸಂಬಂಧಿಸಿದ್ದು. ವೇಷಭೂಷಣ, ಆಚಾರ-ವಿಚಾರಗಳಲ್ಲಿ ಸಂಸ್ಕೃತಿ ಪ್ರಕಟವಾಗುವುದಿದ್ದರೂ ಅದು ಮನುಷ್ಯರಲ್ಲಿ ಅಂತರ್ಗತವಾಗಿರುತ್ತದೆ. ಹೂವಿನ ಪರಿಮಳದಂತೆ ಸಂಸ್ಕೃತಿ ಕಾಣಿಸುವುದಿಲ್ಲ, ನಮ್ಮ ಅನುಭವಕ್ಕೆ ಬರುತ್ತದೆ.

ಈ ಘಟಕವು 'ಕರುಣಾಳು ಬಾ ಬೆಳಕೆ' 'ಕೃತಿಯಿಂದ ಆಯ್ದುಕೊಂಡ 'ಕೊಟ್ಟದ್ದು ತನಗೆ' ಎಂಬ ಆಫ್ರಿಕನ್ ಕಥೆಯೊಂದಿಗೆ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಸಮಾಜಕ್ಕೆ ಒಳಿತನ್ನೇ ಮಾಡುವುದು ನಮ್ಮ ಸಂಸ್ಕೃತಿಯಾಗಬೇಕು ಎಂಬ ಸಂದೇಶವನ್ನು ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಅವರು ಈ ಬರಹದ ಮೂಲಕ ನಮಗೆ ನೀಡಿದ್ದಾರೆ.

'ಮಂಗಲ ಗೀತ' ಎನ್ನುವ ಕವನದಲ್ಲಿ ಕಡೆಂಗೋಡ್ಲು ಶಂಕರ ಭಟ್ಟರು ಬಾದಾಮಿ, ಬನವಾಸಿ, ಹಂಪೆ, ಹಳೆಬೀಡುಗಳ ಹಿರಿಮೆಯನ್ನೂ ಕನ್ನಡ ನಾಡಿನ ಸಂಸ್ಕೃತಿಯನ್ನೂ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

'ಒಂದು ಮೂಸುಂಬೆ ಇನ್ನೊಂದು ಗೋಸುಂಬೆ!' ಎನ್ನುವ ಲೇಖನದಲ್ಲಿ ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್ ನಮ್ಮ ಸಂಸ್ಕೃತಿ ಹೇಗಿರಬೇಕೆಂದು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಉದಾಹರಣೆಯೊಂದಿಗೆ ವಿವರಿಸಿದ್ದಾರೆ.

'ಭೂಲೋಕದ ಅಮರಾವತಿ-ಶಿಮ್ಲಾ ' ಎನ್ನುವ ಪ್ರವಾಸ ಕಥನದಲ್ಲಿ ಜಯದೇವಪ್ಪ ಜೈನಕೇರಿಯವರು ಶಿಮ್ಲಾ ಮತ್ತು ಬದರಿಯ ಕಲೆ, ಸಂಸ್ಕೃತಿ ಮತ್ತು ಸೌಂದರ್ಯಗಳನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ.

# ಕೊಟ್ಟದ್ದು ತನಗೆ

**ಇದೊಂದು ಆಫ್ರಿಕನ್ ಕಥೆ.**

ಎಷ್ಟೋ ವರ್ಷಗಳ ಹಿಂದೆ ಒಂದು ಸಣ್ಣ ಊರಿನ ಹೊರಗೆ ಒಮ್ಮೆ ದೊಡ್ಡ ರಾಕ್ಷಸ ಬಂದು ವಸತಿ ಹೂಡಿದ್ದನಂತೆ. ಊರಿನವರೆಲ್ಲ ಎದೆಯೊಡೆದುಕೊಂಡರು. ತಮ್ಮ ಊರಿನ ಬದಿಯಲ್ಲಿ ಇಂಥ ಭಯಂಕರ ರಾಕ್ಷಸ ಬದುಕಿದ್ದರೆ ತಾವು ಕ್ಷೇಮವಾಗಿರುವುದು ಹೇಗೆ ಸಾಧ್ಯ? ಬಹಳಷ್ಟು ಜನ ಗಾಬರಿಯಿಂದ ಹೆದರಿ ಮನೆಯಲ್ಲಿ ಅವಿತು ಕುಳಿತುಕೊಂಡರೆ, ಕೆಲವರು ಧೈರ್ಯಶಾಲಿ ಯುವಕರು ಈ ರಾಕ್ಷಸನನ್ನು ಹೆದರಿಸಿ ಓಡಿಸುವ ಪ್ರಯತ್ನ ಮಾಡಿದರು.

ಒಬ್ಬ ತರುಣ ಧೈರ್ಯದಿಂದ ಆ ರಾಕ್ಷಸನನ್ನು ಕೊಂದೇ ಬರುವುದಾಗಿ ಹೊರಟ. ಕೈಯಲ್ಲಿ ಹರಿತ ವಾದ ಖಡ್ಗವನ್ನು ಹಿಡಿದುಕೊಂಡು ಹೋದವನೇ ರಾಕ್ಷಸನ ಮೇಲೆ ಪ್ರಹಾರ ಮಾಡಿದ. ಖಡ್ಗ ಮೈಮೇಲೆ ಬೀಳುತ್ತಿದ್ದಂತೆ ರಾಕ್ಷಸ ಜೋರಾಗಿ ನಕ್ಕು ಆ ಖಡ್ಗವನ್ನು ಅವನ ಕೈಯಿಂದ ಸೆಳೆದುಕೊಂಡು ಬಿಟ್ಟನು. ಕ್ಷಣಮಾತ್ರದಲ್ಲಿ ಮಂತ್ರ ಮಾಡಿದಂತೆ ತನಗೆ ಹೊಡೆದ ಖಡ್ಗದ ಎರಡು ಪಟ್ಟು ಗಾತ್ರದ ಖಡ್ಗವನ್ನು ಹೊರ ತೆಗೆದು ಸರ್‍ರನೆ ಬೀಸಿ ತರುಣನನ್ನು ಕತ್ತರಿಸಿ ಹಾಕಿದನು. ಊರ ಜನಕ್ಕೆ ಭಯ ಮತ್ತಷ್ಟು ಹೆಚ್ಚಾಯಿತು.

ಕೆಲ ದಿನಗಳ ನಂತರ ಮತ್ತೊಬ್ಬ ತರುಣ ಕೈಯಲ್ಲೊಂದು ಮರದ ದಿಮ್ಮಿಯನ್ನು ಹಿಡಿದು ರಾಕ್ಷಸನನ್ನು ಕೊಲ್ಲಲು ಹೊರಟನು. ತನ್ನ ಶಕ್ತಿಯನ್ನೆಲ್ಲ ಬಳಸಿ ದಿಮ್ಮಿಯನ್ನು ಮೇಲೆತ್ತಿ ರಾಕ್ಷಸನ ತಲೆಯ ಮೇಲೆ ಬಲವಾಗಿ ಹೊಡೆದನು. ರಾಕ್ಷಸನಿಗೆ ಏನೂ ಆಗಲಿಲ್ಲ! ಅವನು ಇನ್ನಷ್ಟು ಘೋರವಾಗಿ ನಕ್ಕು ತಕ್ಷಣ ತನ್ನನ್ನು ಹೊಡೆದ ದಿಮ್ಮಿಯ ಎರಡು ಪಟ್ಟು ಗಾತ್ರದ ದಿಮ್ಮಿಯನ್ನು ಸೃಷ್ಟಿಸಿ ಅದರಿಂದ ತರುಣನನ್ನು ಅಪ್ಪಳಿಸಿ ಹೊಸಕಿ ಹಾಕಿಬಿಟ್ಟನು. ಊರಿನ ಜನ ಕಂಗಾಲಾದರು. ತಮ್ಮ ತಮ್ಮ ಮಕ್ಕಳಿಗೆ ರಾಕ್ಷಸನ ವಿರುದ್ಧ ಜಗಳಕ್ಕೆ ಹೋಗದಂತೆ ತಾಕೀತು ಮಾಡಿದರು. ತಮ್ಮ ಊರಿನ ದುರ್ದೈವದಿಂದ ಇಂತಹ ಕ್ರೂರ ರಾಕ್ಷಸ ಬಂದು ನೆಲೆಯಾಗಿದ್ದಾನೆ. ಆಯ್ತು, ಹೇಗಾಗುತ್ತದೆ ಆಗಲಿ, ರಾಕ್ಷಸನ ಮನಸ್ಸಿನ ವಿರುದ್ಧ ಹೋಗುವುದು ಬೇಡ ಎಂದು ನಿರ್ಧಾರ ಮಾಡಿ ಹೆದರಿಕೆಯಲ್ಲೇ ಜೀವನ ಕಳೆಯತೊಡಗಿದರು.

ಕೆಲವು ತಿಂಗಳುಗಳ ನಂತರ ಬೇರೆ ಊರಿನ ತರುಣನೊಬ್ಬ ಬಂದನು. ಜನ ಹೆದರಿಕೆಯಿಂದ ಬದುಕುತ್ತಿರುವುದನ್ನು ಕಂಡನು. ರಾಕ್ಷಸನ ಬಗ್ಗೆ ಜನರು ಹೇಳಿದ ಕಥೆಗಳನ್ನು ಕೇಳಿದನು. ತಾನು

ರಾಕ್ಷಸನನ್ನು ಸೋಲಿಸುವುದಾಗಿ ಹೇಳಿ ನಡೆದನು. ಹಿರಿಯರು ಅವನನ್ನು ತಡೆಯಲು ಪ್ರಯತ್ನಿಸಿದರೂ ಕೇಳದೆ ಹೊರಟನು.

ಊರ ಜನರೆಲ್ಲ ಅವನ ಗತಿ ಏನಾದೀತೋ ಎಂದು ನೋಡಲು ಹೊರಟು ಊರ ಹೊರಗೆ ಸೇರಿದರು. ಈ ತರುಣ ತನ್ನ ಜೊತೆಗೆ ಯಾವ ಆಯುಧವನ್ನೂ ತಂದಿರಲಿಲ್ಲ. ನಿಧಾನವಾಗಿ ಹೋಗಿ ರಾಕ್ಷಸನ ಮುಂದೆ ನಿಂತನು. ರಾಕ್ಷಸನನ್ನು ದಿಟ್ಟಿಸಿ ನೋಡಿ ಮೆಲುವಾಗಿ ನಕ್ಕು ತನ್ನ ಜೇಬಿನಿಂದ ಒಂದು ಸುಂದರವಾದ ಕೆಂಪು ಸೇಬು ಹಣ್ಣನ್ನು ತೆಗೆದು ಅವನತ್ತ ಚಾಚಿದನು. ರಾಕ್ಷಸ ಗಬಕ್ಕನೆ ಆ ಸೇಬು ಹಣ್ಣನ್ನು ಕಿತ್ತುಕೊಂಡು ತಿಂದು ಸುಂದರವಾಗಿ ನಕ್ಕನು. ಕ್ಷಣಮಾತ್ರದಲ್ಲಿ ತನ್ನ ಕೈ ಚಾಚಿ ಅವನು ನೀಡಿದ್ದ ಹಣ್ಣಿಗಿಂತ ಎರಡು ಪಟ್ಟು ದೊಡ್ಡದಾದ ಬಹು ಸುಂದರವಾದ ಎರಡು ಹಣ್ಣುಗಳನ್ನು ಅವನಿಗೆ ನೀಡಿದನು. ಜನ ಬೆರಗಾದರು. ತರುಣ ಹಿಂದೆ ಬಂದು ಮಣ್ಣಿನ ಮಡಿಕೆಯಲ್ಲಿ ಶುದ್ಧವಾದ ನೀರನ್ನು ತುಂಬಿ ಮತ್ತೆ ರಾಕ್ಷಸನ ಹತ್ತಿರ ಹೋಗಿ ನಗುತ್ತ ನೀಡಿದನು. ರಾಕ್ಷಸ ಮತ್ತಷ್ಟು ಚೆನ್ನಾಗಿ ನಕ್ಕು ನೀರನ್ನು ಗಟಗಟನೆ ಕುಡಿದನು. ಮತ್ತೆ ಒಂದು ಕ್ಷಣದಲ್ಲಿ ತನ್ನ ಬೃಹತ್ ಕೈಗಳನ್ನು ಚಾಚಿ, ತರುಣ ನೀಡಿದ್ದ ಮಡಿಕೆಯ ಬದಲು ಅದಕ್ಕಿಂತ ಎರಡು ಪಟ್ಟು ದೊಡ್ಡದಾದ ಎರಡು ಬಂಗಾರದ ಪಾತ್ರೆಗಳಲ್ಲಿ ಬಹಳ ರುಚಿಯಾದ ಹಣ್ಣಿನ ರಸವನ್ನು ಕೊಟ್ಟನು. ಜನ ಸಂತೋಷದಿಂದ ಹುಚ್ಚೆದ್ದರು. ಇವನು ರಾಕ್ಷಸನಲ್ಲ, ಪರಮ ಸ್ನೇಹಿತ. ನಾವು ನೀಡಿದ್ದರ ಎರಡು ಪಟ್ಟು ಮರಳಿ ಕೊಡುತ್ತಾನೆ ಎಂದು ಅರ್ಥವಾಯಿತು. ಅವನಿಗೆ ಏನು ನೀಡಿದರೂ ದ್ವಿಗುಣವಾಗಿ ಕೊಡುತ್ತಾನೆ ಎಂಬುದು ಮನವರಿಕೆಯಾಯಿತು.

ಈ ಕತೆ ನೂರಾರು ವರ್ಷ ಹಿಂದಿನದಾದರೂ ಆ ರಾಕ್ಷಸ ಇನ್ನೂ ಇದ್ದಾನೆ ನಮ್ಮ ಸಮಾಜದಲ್ಲಿ, ನಮ್ಮ ಮನೆಗಳಲ್ಲಿ, ನಮ್ಮ ಹೃದಯಗಳಲ್ಲಿ. ನೀವು ಏನು ಕೊಡುತ್ತೀರೋ ಅದನ್ನು ದ್ವಿಗುಣವಾಗಿ ಮರಳಿ ಕೊಡುತ್ತಾನೆ. ದ್ವೇಷವನ್ನು ನೀಡಿದರೆ ಅದು ಎರಡು ಪಟ್ಟಾಗಿ ಮರಳುತ್ತದೆ, ಪ್ರೀತಿ ನೀಡಿದರೆ ಪ್ರೀತಿಯ ಮಳೆಯನ್ನೇ ಸುರಿಸುತ್ತದೆ. ಸಮಾಜಕ್ಕೆ ನಾವು ಕೊಟ್ಟದ್ದು ಬಹುಪಟ್ಟಾಗಿ ಮರಳಿ ಬರುತ್ತದೆ. ಆದ್ದರಿಂದ ನಾವು ಸಂತೋಷವಾಗಿ ,ಸುಖದಿಂದ ಬದುಕಬೇಕಾದರೆ ಅದನ್ನೇ ಸಮಾಜಕ್ಕೆ ನೀಡಬೇಕು. ಸಮಾಜಕ್ಕೆ ಒಳ್ಳೆಯದನ್ನೇ ನೀಡುವುದು ನಮ್ಮ ಸಂಸ್ಕೃತಿಯಾಗಬೇಕು.ಬೇರೆ ದಾರಿ ಇಲ್ಲ.

**- ಡಾ. ಗುರುರಾಜ ಕರ್ಜಗಿ**

- ಮೇಲಿನ ಕತೆಯನ್ನು ಓದಿ ಅದು ನೀಡುವ ಸಂದೇಶವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

# ಮಂಗಲ ಗೀತ

- ಕಡೆಂಗೋಡ್ಲು ಶಂಕರ ಭಟ್ಟ

ತನು ತುಂಬಿ ಮನ ತುಂಬಿ ಚಿತ್ತಚೇತನ ತುಂಬಿ
ಕನ್ನಡದ ಜೀವಕಳೆ ಹೊಮ್ಮುತಿದೆ ನೋಡು.
ಭಾವ ಕಳೆ - ಪೌರುಷದ ತುಂಬು ಹೊಳೆ ಹರಿಯುತಿರೆ
ಭಿನ್ನತೆಯ ನೋವ ಕಳೆ -ಮಂಗಲವ ಹಾಡು.
ಕೈಗೂಡಿ ಬಂದುವೋ ಮೈಮೂಡಿ ನಿಂದುವೋ
ಹಗಲುಗನಸಾಗಿದ್ದ ಹಳೆಯ ಬಯಕೆಗಳು
ಬಾದಾಮಿ ಬನವಾಸಿ ಹಂಪೆ ಹಳೆಬೀಡುಗಳ
ಮೂಕವಾಣಿಗಳ ಸುಸ್ವಾಗತವ ಕೇಳು.
ಅಳಿದ ಸಾಮ್ರಾಜ್ಯಗಳ ಬಾಳದಿಹ ವೈಭವದ
ಕತೆ ಹೇಳಿ ಕಣ್ಣೊರಸಿ ಸವೆದುದಾಯುಷ್ಯ.
ದಾರಿ ಕಂಡುದು ಬುದ್ಧಿ; ಕೂಗಿ ಕರೆವುದು ಸಿದ್ಧಿ;
ಒಸಗೆ ತೋರಣ ಕಟ್ಟಿ ತೆರೆದಿದೆ ಭವಿಷ್ಯ.



ಎತ್ತರದ ಮಲೆಯ ಭುಜ, ಬಿತ್ತರದ ಬಯಲಿನೆದೆ
ಆರೋಗ್ಯಭಾಗ್ಯ ಧನಧಾನ್ಯ ಸಂಪತ್ತು.
ಏನಿಲ್ಲ? ಏನಿರದು? ಹೊಂಬಯಕೆ ಬಟ್ಟಲಿದು
ನಮ್ಮ ಪುಣ್ಯವ ತೂಗಿ ತೊನೆವ ತೊಟ್ಟಿಲಿದು.
ಕನ್ನಡದ ಕುಲವಿಲ್ಲಿ ಕುಲದ ದೇಗುಲವಿಲ್ಲಿ
ಪ್ರಾಣದೇವನ ಭವ್ಯ ಮೂರ್ತಿ ಪ್ರತಿಷ್ಠೆ.
ಭಾರತವೆ ಸಾವಿತ್ರಿ ಕನ್ನಡವೆ ಗಾಯತ್ರಿ
ಇಲ್ಲಿಯೇ ಪೂಜಾಪುರಶ್ಚರಣ ನಿಷ್ಠೆ.
ದಿಕ್ಕುದೆಸೆ ಪುಳಕಿಸಲು ಧರ್ಮಘಂಟಾಧ್ವನಿಗೆ
ಎತ್ತು ಸೇವಾರತಿಯ ಮಂಗಲಾರತಿಯ.
ಕರ್ತವ್ಯ ಸಫಲತೆಯ ಪಾದಕಾಣಿಕೆಯಿಟ್ಟು
ಓಲೈಸು ರಾಷ್ಟ್ರ ಪೌರುಷದ ಮೂರುತಿಯ.
ಕನ್ನಡದ ಜೀವವೇ! ಧನ್ಯತೆಯ ಕೊಂಡಾಡು!
ಈ ನೆಲದಿ ಹುಟ್ಟಿರುವೆ! ಈ ದಿನವ ಕಂಡೆ!
ಭರತಮಾತೆಯ ಮುದ್ದುಗುವರಿ ಕನ್ನಡ ತಾಯ
ಕಿಂಕರನ- ಶಂಕರನ ಹಾಡನೆದೆಗೊಂಡೆ!



## ಕವಿ ಪರಿಚಯ



ಕಡೆಂಗೋಡ್ಲು ಶಂಕರ ಭಟ್ಟರು (೧೯೦೪ - ೧೯೬೮) ಆಧುನಿಕ ಕನ್ನಡದ ಕವಿಶ್ರೇಷ್ಠರಲ್ಲಿ ಒಬ್ಬರು. ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಇವರು ಕವಿಯಾಗಿ, ಕತೆಗಾರರಾಗಿ, ಪತ್ರಿಕೋದ್ಯಮಿಯಾಗಿ ಹೆಸರು ಮಾಡಿದವರು. ಘೋಷಯಾತ್ರೆ, ಕಾಣಿಕೆ, ಹಣ್ಣು ಕಾಯಿ, ಪತ್ರಪುಷ್ಪ, ನಲ್ಮೆ, ಹೊನ್ನಿಯ ಮದುವೆ ಮೊದಲಾದುವು ಇವರ ಕವನ ಸಂಕಲನಗಳು. ಧೂಮಕೇತು, ದೇವತಾ ಮನುಷ್ಯ ಇವರ ಕಾದಂಬರಿಗಳಾಗಿವೆ. ಗಾಜಿನ ಬಳೆ, ಹಿಂದಿನ ಕತೆಗಳು, ದುಡಿಯುವ ಮಕ್ಕಳು ಇವರ ಕಥಾಸಂಕಲನಗಳು. ಗುರುದಕ್ಷಿಣೆ, ಮಹಾಯೋಗಿ ಮುಂತಾದ ನಾಟಕಗಳನ್ನು ರಚಿಸಿದ್ದಾರೆ. ರಾಷ್ಟ್ರಬಂಧು, ರಾಷ್ಟ್ರಮತ ಪತ್ರಿಕೆಗಳ ಸಂಪಾದಕರಾಗಿಯೂ ಇವರು ಕಾರ್ಯ ನಿರ್ವಹಿಸಿದ್ದಾರೆ. ೧೯೬೫ ರಲ್ಲಿ ಕಾರವಾರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಅವರ ಪಾಲಿಗೆ ಒದಗಿತ್ತು.

ಪ್ರಸ್ತುತ ಕವನವನ್ನು ಅವರ 'ಪತ್ರಪುಷ್ಪ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

ಸಾವಿತ್ರಿ – ಮಹಾಭಾರತದಲ್ಲಿ ಬರುವ ಒಂದು ಪಾತ್ರ. ತನ್ನ ನಿಷ್ಠೆ, ತಪಃಶಕ್ತಿ ಹಾಗೂ ದಿಟ್ಟತನದಿಂದ ಮರಣ ಹೊಂದಿದ ತನ್ನ ಪತಿ ಸತ್ಯವಾನನ ಪ್ರಾಣವನ್ನು ಯಮನಿಂದ ಹಿಂದಕ್ಕೆ ಪಡೆದ ಸಾಧ್ವಿ.

ಗಾಯತ್ರಿ - ಪ್ರತಿಯೊಂದು ಸಾಲಿನಲ್ಲಿ ಎಂಟು ಅಕ್ಷರಗಳುಳ್ಳ ಮೂರು ಸಾಲಿನ ಒಂದು ವೈದಿಕ ಮಂತ್ರ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಕನ್ನಡದ ಜೀವಕಳೆ ಹೇಗೆ ಹೊಮ್ಮುತ್ತಿದೆ?
2. ಮೂಕವಾಣಿಗಳ ಸುಸ್ವಾಗತವು ಎಲ್ಲೆಲ್ಲಿ ಕೇಳಿ ಬರುತ್ತದೆ?
3. ಕನ್ನಡ ನಾಡನ್ನು' ನಮ್ಮ ಪುಣ್ಯವ ತೂಗಿ ತೊನೆವ ತೊಟ್ಟಿಲಿದು' ಎಂದು ಕವಿ ಹೇಳಲು ಕಾರಣವೇನು?
4. ರಾಷ್ಟ್ರ ಪೌರುಷದ ಮೂರುತಿಯನ್ನು ಹೇಗೆ ಓಲೈಸಬೇಕೆಂದು ಕವಿ ಹೇಳುತ್ತಾರೆ?

## ರಾಗವಾಗಿ ಹಾಡಿರಿ

ಈ ಕವಿತೆಯನ್ನು ರಾಗವಾಗಿ ಹಾಡಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ಕೊಡಲಾದ ಪದ್ಯದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಬಾದಾಮಿ ಬನವಾಸಿ ಹಂಪೆ ಹಳೆಬೀಡುಗಳ
ಮೂಕವಾಣಿಗಳ ಸುಸ್ವಾಗತವ ಕೇಳು.
ಅಳಿದ ಸಾಮ್ರಾಜ್ಯಗಳ ಬಾಳದಿಹ ವೈಭವದ
ಕತೆ ಹೇಳಿ ಕಣ್ಣೊರಸಿ ಸವೆದುದಾಯುಷ್ಯ

## ಆಶಯ ಬರೆಯಿರಿ

'ಮಂಗಲ ಗೀತ' ಕವನದ ಆಶಯವನ್ನು ಬರೆಯಿರಿ.

## ಟಿಪ್ಪಣಿ ಬರೆಯಿರಿ

ಬಾದಾಮಿ, ಬನವಾಸಿ, ಹಂಪೆ, ಹಳೆಬೀಡು ಇವುಗಳಲ್ಲಿ ಯಾವುದಾದರೂ ಒಂದು ಪ್ರೇಕ್ಷಣೀಯ ಸ್ಥಳದ ಇತಿಹಾಸ, ಸಾಂಸ್ಕೃತಿಕ ಹಿರಿಮೆಗಳ ಕುರಿತು ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಬರೆಯಿರಿ.

## ಸಾಲುಗಳನ್ನು ಗುರುತಿಸಿರಿ

ಕವನದಲ್ಲಿ ನಿಮಗೆ ತುಂಬಾ ಇಷ್ಟವಾದ ಸಾಲುಗಳನ್ನು ಗುರುತಿಸಿ ಯಾಕೆ ಇಷ್ಟವಾಯಿತೆಂದು ವಿವರಿಸಿರಿ.

## ತುಲನೆ ಮಾಡಿರಿ

'ಬಾಗಿಲೊಳು ಕೈಮುಗಿದು' ಕವನವನ್ನು 'ಮಂಗಲಗೀತ' ಕವನದೊಂದಿಗೆ ತುಲನೆ ಮಾಡಿ ಟಿಪ್ಪಣಿ ಬರೆಯಿರಿ.

# ಬಾಗಿಲೊಳು ಕೈಮುಗಿದು

ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ
ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು
ಕಂಬನಿಯ ಮಾಲೆಯನು ಎದೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳ ಅರ್ಪಿಸಿಲ್ಲಿ

ಗಂಟೆಗಳ ಧ್ವನಿಯಿಲ್ಲ ಜಾಗಟೆಗಳಿಲ್ಲಿಲ್ಲ
ಕರ್ಪೂರದಾರತಿಯ ಜ್ಯೋತಿಯಿಲ್ಲ
ಭಗವಂತನಾನಂದ ರೂಪುಗೊಂಡಿಹುದಿಲ್ಲಿ
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ

ಸರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ
ಬಾದರಾಯಣನಂತೆ ಭಾರತವ ಹಾಡುತಿಹುದಿಲ್ಲಿ
ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ
ಮೂರ್ಛೆಯಲಿ ಮೈಮರೆತು ತೇಲುತಿದೆ ಭೂಭಾರವಿಲ್ಲಿ

**- ಕುವೆಂಪು**

## ಸ್ಲೈಡ್ ತಯಾರಿಸಿರಿ

'ಮಂಗಲಗೀತ' ಕವನದಲ್ಲಿ ಬಂದಿರುವ ಐತಿಹಾಸಿಕ ತಾಣಗಳ ಮಾಹಿತಿ ಸಂಗ್ರಹಿಸಿ ಸ್ಲೈಡ್ ತಯಾರಿಸಿರಿ.

# ಒಂದು ಮೂಸುಂಬೆ ಇನ್ನೊಂದು ಗೋಸುಂಬೆ!

- ಹಿರೇಮಗಳೂರು ಕಣ್ಣನ್

ಸಂಸ್ಕೃತಿಯೆನ್ನುವುದು ಪರಿಮಳದಂತೆ. ಅದು ಕಾಣಿಸುವುದಿಲ್ಲ. ಆದರೆ ಸದ್ದಿಲ್ಲದೆ ತೋರಿಸಿ ಕೊಡುತ್ತದೆ. ನಾಗರಿಕತೆ ನಶಿಸಿಹೋದರೂ ಸಂಸ್ಕೃತಿ ಪರಿಮಳದಂತೆ ಘಮಘಮಿಸುತ್ತ ಅದರ ಹಿಂದೆ ಉಳಿದುಕೊಂಡಿರುತ್ತದೆ.

ಮನಸ್ಸು ಮೃದುವಾಗಿ ಹೃದಯ ಅರಳುತ್ತಾ ಹೋಗುವುದೇ ಸಂಸ್ಕೃತಿ. ನಡೆಯುವ ನಡಿಗೆ, ಉಡುವ ಉಡಿಗೆ, ಉಣ್ಣುವ ಊಟ, ಕೂಡುವ ಕೂಟ, ಆಡುವ ಮಾತು, ನೋಡುವ ನೋಟ, ನೆನೆಯುವ ಭಾವ ಒಟ್ಟಂದದಲ್ಲಿ ಶೋಭಿಸಿದಾಗ ಆ ಲಯಬದ್ಧ ರೂಪವೇ ಸಂಸ್ಕೃತಿ.

ಕೆದರಿದ ಕೂದಲನ್ನು ಬಾಚುವುದು ಸಂಸ್ಕೃತಿ, ಒದರುವ ಮಾತನ್ನು ಮೃದುವಾಗಿ ನುಡಿಯುವುದೇ ಸಂಸ್ಕೃತಿ. ಇದನ್ನು ಕಲಿಸುವ ಶಿಕ್ಷಕ ಪ್ರಕೃತಿ. ಅದರ ಪ್ರವೃತ್ತಿ ನಿವೃತ್ತಿಗೆ ಅದೇ ಮಾನಿಟರ್. ಋತುಮಾನಗಳಿಗೆ ತಕ್ಕಂತೆ ತನ್ನ ರೂಪ ಸೌಂದರ್ಯವನ್ನು ಹೋಲ್ ಸೇಲ್ ಪ್ರಪಂಚಕ್ಕೆ ನೀಡುವುದರ ಮೂಲಕ ತಾನೂ ಬದುಕಿ, ತನ್ನ ಸಹಚರರನ್ನೂ ಬದುಕಲು ಪ್ರೋತ್ಸಾಹಿಸುವ ಪೋಷಕತ್ವವೇ ಸಂಸ್ಕೃತಿ. ಪ್ರಕೃತಿಯಲ್ಲಿನ ಇಂತಹ ಸೃಷ್ಟಿ ಸೌಂದರ್ಯದ ಜತೆಗೆ ಅದರ ಸದ್ದಿಲ್ಲದ ನಡವಳಿಕೆಯನ್ನು ಗಮನಿಸಿ ನಡೆಯುವ ನಡವಳಿಕೆಯೇ ಈ ಲೋಕಾನುಭವ ಸಂಸ್ಕೃತಿ.

ಕನ್ನಡದ ಭೀಷ್ಮ 'ಡಿ.ವಿ.ಜಿ' ಅವರು ಹೇಳುವಂತೆ "ಶ್ರವಣಬೆಳಗೊಳದ ಬೆಟ್ಟ ಪ್ರಕೃತಿ. ಗೊಮ್ಮಟ ಸಂಸ್ಕೃತಿ. ಹುಟ್ಟು ಪ್ರಕೃತಿ, ನಡವಳಿಕೆ ಸಂಸ್ಕೃತಿ. ಹುಲಿ ಆಕಳನ್ನು ಹಿಡಿದು ತಿನ್ನುವುದು ಪ್ರಕೃತಿ. ಆಕಳಿನ ಸತ್ಯವನ್ನು ಹುಲಿ ಮೆಚ್ಚಿದ್ದು ಸಂಸ್ಕೃತಿ. ಗೋವು ತನ್ನ ಕರುವಿನ ವಿಷಯ ಹೇಳಿಕೊಂಡದ್ದು ಪ್ರಕೃತಿ. ಹುಲಿ ಕೇಳಿ ಕನಿಕರಿಸಿದ್ದು ಸಂಸ್ಕೃತಿ. ಹಾಗೆಯೇ ಸತ್ಯವೇ ಪ್ರಕೃತಿ. ಪ್ರಾಮಾಣಿಕತೆಯೇ ಸಂಸ್ಕೃತಿ."

ಇಂತಹ ಎಲ್ಲರಿಗೂ ಬೇಕಾದ ಸಂಸ್ಕೃತಿ ಎಲ್ಲ ಕಡೆಯೂ ಇರುತ್ತದೆ. ಆದರೆ ಅದನ್ನು ಕಾಣುವ ಸಂಸ್ಕೃತಿ ಎಲ್ಲರಿಗೂ ಇರುವುದಿಲ್ಲ. ಕಾಣಬೇಕೆನ್ನುವ ಮನುಷ್ಯನಿಗೆ ಒಳಗಣ್ಣು ಸದಾ ತೆರೆದಿರಬೇಕು. ಕೇವಲ ಬಾಹ್ಯ ಕಣ್ಣಿನಿಂದ ಸಂಸ್ಕೃತಿಯ ಬಾಹ್ಯಾಕಾಶ ಸಂಶೋಧನೆ ಸಾಧ್ಯವಿಲ್ಲ. ಕಾರ್ಮಿಕನಂತೆ ದುಡಿದು ವೇದಾಂತಿಯಂತೆ ಯೋಚಿಸಿದಾಗ ಮಾತ್ರ ಇಂತಹ ನಡವಳಿಕೆ ಗೋಚರವಾಗಲು ಸಾಧ್ಯ. ಆದರೆ ನಮ್ಮ ಮನುಕುಲದಲ್ಲಿ 'ಸುತ್ತಿಗೆ ಶಬ್ದಕ್ಕೆ ಎಚ್ಚರವಾಗದ ನಾಯಿಗೆ ರೊಟ್ಟಿ ಶಬ್ದಕ್ಕೆ ಎಚ್ಚರವಾಗುತ್ತದೆ' ಎನ್ನುವ ಗಾದೆಯಂತೆ ಹೊಟ್ಟೆಬಾಕ ಸಂಸ್ಕೃತಿ ಎಂದಾಗಷ್ಟೇ ಜೀವನ ಎಚ್ಚರವಾಗುತ್ತದೆ. ಬದುಕಿನಲ್ಲಿ ನಮಗೆ ಬೇಕಾದದ್ದು ಮಾನಕ್ಕೆ ಬಟ್ಟೆ, ಪ್ರಾಣಕ್ಕೆ ಅನ್ನ. ತೃಪ್ತಿಯೇ ಸೌಭಾಗ್ಯ, ಅತೃಪ್ತಿಯೇ ದಾರಿದ್ರ್ಯ. 'ಕೈಗೆ ಬಂದದ್ದು ಕೈಲಾಸ, ಬಾಯಿಗೆ ದಕ್ಕಿದ್ದೇ ಬಾಸುಂದಿ' ಎನ್ನುವ

ಸಮಾಧಾನವೇ ಇಲ್ಲ. ಆಳಾಗಿ ದುಡಿಯುವುದಕ್ಕಿಂತ ಅರಸನಾಗಿ ಕೂತು ಉಣ್ಣಬೇಕೆನ್ನುವ ದಾಹವೇ ಹೆಚ್ಚು. ಈ ಸುಖಕ್ಕೆ ಎಂತಹ ವಾಮ ಮಾರ್ಗವನ್ನು ಬೇಕಾದರೂ ಅನುಸರಿಸಲು ಸಿದ್ಧನಾಗುವ, ಹುಮ್ಮಸ್ಸು ತುಂಬಿಕೊಳ್ಳುವ, ಎದ್ದು ನಿಲ್ಲುವ ಗುಡಾಣಬುದ್ಧಿಯೇ ಹೆಚ್ಚು.

ದುಡಿಯುವ ಎತ್ತಿಗೆ ಗಾಡಿಯಾದರೇನು? ಗಾಣವಾದರೇನು? ಕಾಯಕ ಮಾಡುವವಗೆ ಪ್ರಾಮಾಣಿಕ ಪ್ರಯತ್ನವೇ ಪರಮೇಶ್ವರ. ಅದಕ್ಕೆ ತೊಡಗಿಸುವ ಪರಿಶ್ರಮವೇ ಪೂಜೆ. ದುಡಿದು ಪಡೆಯಬೇಕೆ ಹೊರತು ಬೇಡಿ ಪಡೆಯಬಾರದು ಎನ್ನುವುದೇ ಬಾಳಿನ ಸತ್ವಯುತ ಸೂಕ್ತಿ. ಹಲ್ಲು ಕಿರಿಯುವುದಕ್ಕಿಂತ ತಿರುಪೆ ಬೇಡೋಣ ಎಂಬ ಸ್ವಂತಿಕೆ ಮುಖ್ಯ ಎನ್ನುವುದೇ ತಿಳಿದವನ ಸಂಸ್ಕೃತಿ. ಇದನ್ನು ತಿಳಿಯದವನು ತಿಳಿದುಕೊಳ್ಳಲೇಬೇಕಾದಲ್ಲಿ ಕಾಯಬೇಕಾದದ್ದು ಆಯುಷ್ಯದಿಂದಲ್ಲ, ಕಾಣಬೇಕಾದದ್ದು ಮನಸ್ಸಿನಿಂದ ಎಂಬುದೇ ಯುಕ್ತಿ.

ಕಣ್ಣು ಕಾಮಾಲೆಯಾಗಿ, ಕಿವಿ ಹಿತ್ತಾಳೆಯಾಗಿ, ತಲೆ ಬಾಡಿಗೆಯಾದರೆ ಸಂಸ್ಕೃತಿ ತಿಳಿಯಲಾಗುವುದಿಲ್ಲ. ಮತಿಗೆಡಿಸುವ, ಗತಿಗೆಡಿಸುವ, ಧೃತಿಗೆಡಿಸುವ, ಕುಲಗೆಡಿಸುವ ಕುಟಿಲರ ಜೊತೆ ಸೇರಿಕೊಂಡುಬಿಟ್ಟರೆ ವಿಧ್ವಂಸಕ ಪ್ರವೃತ್ತಿಯನ್ನೇ ಕಾಣಬೇಕೇ ಹೊರತು ವಿದ್ವಾಂಸನ ಪ್ರವೃತ್ತಿ ಕಾಣಲಾಗುವುದಿಲ್ಲ. ಬಹುಮುಖ್ಯವಾಗಿ ಸಂಸ್ಕೃತಿಯ ಪ್ರವೃತ್ತಿಯಲ್ಲೇ ತನ್ನ ಬದುಕಿನ ವೃತ್ತಿಯನ್ನು ಸವೆಸುವವನಿಗೆ ಸದಾಕಾಲ ಮನಸ್ಸು ನಿರ್ಮಲವಾಗಿರಬೇಕು. ಇಲ್ಲವಾದಲ್ಲಿ "ಮನಸ್ಸು ಮಲಿನವಾದರೆ ಮನುಷ್ಯನೇ ಮಲಿನವಾದಂತೆ" ಎಂಬ ನಾಣ್ನುಡಿ ತನ್ನಲ್ಲಿ ಜಾಣ್ನುಡಿಯಾಗಿ ಸದಾ ಎಚ್ಚರದಲ್ಲಿರಿಸಿರಬೇಕು. ಒಟ್ಟಿನಲ್ಲಿ ಸಂಸ್ಕೃತಿಯ ವಶವಾಗಿ ತಾನು 'ಶಿವ' ನಾಗಬೇಕೇ ಹೊರತು ಅಪಸಂಸ್ಕೃತಿಯ ವಶವಾಗಿ ಶವವಾಗಬಾರದು.

ಒಮ್ಮೆ ಲಾಲ್ ಬಹದ್ದೂರ್ ಶಾಸ್ತ್ರಿಗಳು ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಚಾಲಕ ಕಾರು ಓಡಿಸುತ್ತಿದ್ದ. ಪಾಲಕ ಕುಳಿತಿದ್ದರು. ರಥ ಚಲಿಸುತ್ತಿತ್ತು. ತುರ್ತಾಗಿ ಸಮಾರಂಭವೊಂದಕ್ಕೆ ಸಕಾಲದಲ್ಲಿ ಭಾಗವಹಿಸಲು ಪ್ರಯಾಣ ಸಾಗಿತ್ತು. ಅಚಾನಕ್ ಹಸು ಒಂದು ಅಡ್ಡ ಬಂದಿತು. ಚಾಲಕ ಚಾಕಚಕ್ಯತೆಯಿಂದ ಹಸುವಿನ ಪ್ರಾಣವುಳಿಸಲು ಕಾರನ್ನು ಬದಿಗೆ ತಿರುಗಿಸಿದ. ಎದುರಿಗಿದ್ದ ಮರಕ್ಕೆ ಕಾರು ಮುತ್ತಿಕ್ಕಿತು. ಮುಂಭಾಗದ ಮುಸುಡಿಗೆ ಕೊಂಚ ಜಖಂ ಆಯಿತು. ಶಾಸ್ತ್ರಿಗಳ ಟೋಪಿ ನೆಗೆಯಿತು, ಮುಂಭಾಗದ ಸೀಟಿನ ಹಿಂಬದಿಗೆ ಮುಖ ಮುಸುಕಿತು, ಮುಗ್ಗರಿಸಿತು. ಅವರ ಮಂಡೆ ಅವರ ಮಂಡಿಗೇ ಮುತ್ತಿಕ್ಕಿತು. ಇಷ್ಟಾದರೂ ಚಾಲಕನ ಜಾಣತನದಿಂದ ಶಾಸ್ತ್ರಿಗಳ ಜ್ಞಾನ ತಪ್ಪದೆ ಉಳಿಯಿತು. ಇತ್ತ ಚಾಲಕ ದಸಕ್ಕನೆ ಹೊರಬಿದ್ದರೆ ಅತ್ತ ಅಡ್ಡ ಬಂದ ಹಸು ಲಬಕ್ಕನೆ ಓಡುತ್ತಿತ್ತು. ಅದರ ಕುಂಡೆಗೆ ಕೊಂಚ ಕಾರಿನ ಮಂಡೆ ತಾಕಿತ್ತು. ಈ ಘಟನೆಯಿಂದ ಶಾಸ್ತ್ರಿಗಳು ಸಿಟ್ಟಾಗಲಿಲ್ಲ. ಚಾಲಕನಿಗೆ ಪೆಟ್ಟಾಗಲಿಲ್ಲ. ಕಾರಿನಿಂದ ಇಳಿದವರೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಕುಸಿದಿದ್ದ ಚಾಲಕನನ್ನು ಹಿಡಿದೆತ್ತಿದರು. ನೆತ್ತಿಗೆ ತಣ್ಣೀರು ಒತ್ತಿದರು. ಹಸುವಿಗೆ ಪೆಟ್ಟು ಎಷ್ಟಾಯಿತೋ ಏನೊ

ಎಂದು ಹಪಹಪಿಸಿದರು. ಮಾರ್ಗ ಮಧ್ಯೆ ಸಂಭವಿಸಿದ ಈ ಅನಾಹುತ ಕಂಡು ಜನರೂ ನೆರೆದರು. ಲಾಲ್ ಬಹದ್ದೂರ್ ರವರನ್ನು ಕಂಡು ಕೈಮುಗಿದರು. ಪ್ರತಿಯಾಗಿ ಕೈ ಮುಗಿದ ಶಾಸ್ತ್ರಿಗಳು ತಮ್ಮ ಚಾಲಕನನ್ನು ಪ್ರಥಮ ಚಿಕಿತ್ಸೆಗೆ ಸಮೀಪದಲ್ಲಿರುವ ಆಸ್ಪತ್ರೆಗೆ ಕರೆದೊಯ್ಯಲು ಅಲ್ಲಿದ್ದವರ ವಾಹನದ ಸಹಾಯ ಬಯಸಿದರು. ಕರೆದೊಯ್ಯುವವರ ಜೇಬಿಗೆ ಕಾಣಿಕೆಯೂ ತುರುಕಿ ತಮ್ಮ ಹೆಸರಿನ ವಿಳಾಸವಿತ್ತು ಚಾಲಕನ ಚಿಕಿತ್ಸೆಗೆ ಪ್ರವೇಶ ನೀಡುವಂತೆ ಆಸ್ಪತ್ರೆಗೆ ತಿಳಿಸಲು ಹೇಳಿದರು. ಕೆಲವೇ ನಿಮಿಷದಲ್ಲಿ ತಾವೇ ಅಲ್ಲಿಗೆ ಬರುವುದಾಗಿಯೂ ತಿಳಿಸಿದರು.

ಇನ್ನೊಬ್ಬನೊಡಗೂಡಿ ಮತ್ತೊಂದು ಸ್ಕೂಟರ್ ಹಿಂದೆ ಕುಳಿತುಕೊಂಡು ಪೆಟ್ಟು ತಿಂದೋಡಿದ ಹಸುವಿನತ್ತ ಶಾಸ್ತ್ರಿಗಳು ಸಾಗಿದರು. ಗಾಬರಿಯಿಂದ ಓಡಿದ ಹಸು ಕೊಂಚ ದೂರದಲ್ಲಿ ಮರವೊಂದರ ಕೆಳಗೆ ವಿಶ್ರಾಂತಿ ಪಡೆಯುತ್ತಿತ್ತು. ಶಾಸ್ತ್ರಿಗಳು ಮೆಲ್ಲಗಿಳಿದು ಹಸುವನ್ನು ಮುಟ್ಟಿ ಮೈದಡವಿದರು. ಹಸುವೂ ಕೂಡ ಅವರ ಮುಗ್ಧ ಮನಸ್ಸಿನ ವರ್ತನೆಗೆ ಮೈ ಕೊಡವಿ ಎದ್ದುನಿಂತಿತು. ಒಡನೆ ಶಾಸ್ತ್ರಿಗಳು ಅದರ ಬಾಯಿಗೆ ಬಾಳೆಹಣ್ಣು ತಿನ್ನಿಸಿ, ಹೆಚ್ಚು ಪೆಟ್ಟಾಗದಿರುವುದನ್ನು ಖಾತ್ರಿ ಮಾಡಿಕೊಂಡು, ಸ್ಕೂಟರ್ ನವನಿಗೆ ಕೊಂಚ ಸಹಾಯ ಮಾಡುವಂತೆ ಕೇಳಿದರು. ಆ ಸಹಾಯ ಮತ್ತೇನೂ ಅಲ್ಲ, ತನ್ನನ್ನು ಸಮೀಪದಲ್ಲಿರುವ ಆರಕ್ಷಕ ಠಾಣೆಯವರೆಗೆ ಕರೆದೊಯ್ಯುವುದಾಗಿತ್ತು. ಸವಾರನೂ ಸಹಕರಿಸಿದ.

ಠಾಣೆಗೆ ಸಾಮಾನ್ಯನಂತೆ ಬಂದು ದೂರು ದಾಖಲಿಸುವವನ ಮುಂದೆ ಕೈಮುಗಿದು ಕುಳಿತರು. ಸಿಬ್ಬಂದಿಗೆ ಗಾಬರಿಯೋ ಗಾಬರಿ. ಆದರೆ ಶಾಸ್ತ್ರಿಗಳು ಇದನ್ನು ಗಮನಿಸಿ "ನಾನು ಈಗ ಇಲ್ಲಿಗೆ ಸಚಿವನಾಗಿ ಬಂದಿಲ್ಲ. ಖಾಸಗಿ ಕಾರ್ಯಕ್ರಮಕ್ಕೆ ಬಾಡಿಗೆ ಕಾರಿನಲ್ಲಿ ಹೊರಟಿದ್ದೆ. ಮದುವೆ ಸಮಾರಂಭವೊಂದರಲ್ಲಿ ಭಾಗವಹಿಸಬೇಕಿದೆ. ಈ ಮಾರ್ಗದಲ್ಲಿ ಬರುವಾಗ ಕಾರಿಗೆ ಹಸುವೊಂದು ಅಕಸ್ಮಾತ್ ಅಡ್ಡ ಬಂದಿದ್ದರಿಂದ ಅದರ ಪ್ರಾಣ ಉಳಿಸುವ ಸಲುವಾಗಿ ಚಾಲಕ ಬದಿಗೆ



ತಿರುಗಿಸಿದಾಗ ಮರಕ್ಕೆ ವಾಹನ ಡಿಕ್ಕಿ ಹೊಡೆಯಿತು. ಪಶುವಿಗಾಗಲಿ, ಸಾರಥಿಗಾಗಲಿ, ಈ ಲಾಲ್ ಪತಿಗಾಗಲಿ ಏನೂ ಪೆಟ್ಟಾಗಿಲ್ಲ. ಗಾಡಿ ಅಲ್ಲೇ ಇದೆ. ಸಂಖ್ಯೆ ಬರೆದುಕೊಳ್ಳಿ. ಜೊತೆಗೆ ಸ್ಥಳದಲ್ಲೇ ಮಹಜರು ನಡೆಸಿ, ವಾಹನವನ್ನು ದುರಸ್ತಿಗಾಗಿ ನನ್ನ ವಶಕ್ಕೆ ಕಾನೂನು ರೀತಿಯಲ್ಲಿ ಬಿಟ್ಟುಕೊಡಿ" ಎಂದು ನುಡಿಯುತ್ತ ಚಾಲಕನ ಹೆಸರಿನಲ್ಲಿ ಕೇಸು ದಾಖಲಿಸದೆ ತಮ್ಮ ಹೆಸರಿನಲ್ಲೇ ದಾಖಲಿಸಿದರು. ಇನಿತು ಪೊಗರೇ ಇಲ್ಲದ ಸಚಿವರ ನಡವಳಿಕೆ ಕಂಡು ಪೊಲೀಸ್ ಸಿಬ್ಬಂದಿಗೆ ಮೈಯೆಲ್ಲಾ ಬೆವರೋ ಬೆವರು.

ಇದಾದ ಕೆಲವೇ ಗಂಟೆಗಳೊಳಗಾಗಿ ಮಹಜರು ಮುಗಿಸಿ ಕಾರು ವಶಕ್ಕೆ ಪಡೆದು ಗ್ಯಾರೇಜಿಗೆ ಸೇರಿಸಿ, ಚಾಲಕನನ್ನು ಆಸ್ಪತ್ರೆಯಿಂದ ಬೇರೊಂದು ಬಾಡಿಗೆ ವಾಹನದಲ್ಲಿ ಅಲ್ಲಿಂದಲೇ ಹತ್ತಿಸಿಕೊಂಡು ತಾವು ಭಾಗವಹಿಸಬೇಕಿದ್ದ ಮದುವೆ ಸಮಾರಂಭಕ್ಕೆ ತೆರಳಿ ಮರಳಿದರು. ಹಿಂತಿರುಗುವಾಗಲೂ ಅಷ್ಟೇ. ಚಾಲಕನನ್ನು ಅವನ ಮನೆಗೆ ಬಿಟ್ಟು, ಅವರ ಕುಟುಂಬಕ್ಕೆ ವಿಷಯ ತಿಳಿಸಿ, ಭಕ್ಷೀಸ್ ಇತ್ತು, ತಮ್ಮ ಮನೆಗೆ ಆಟೋದಲ್ಲಿ ತೆರಳಿದರು. ರೈಲ್ವೇ ಸಚಿವರಾಗಿದ್ದಾಗ ಲಾಲ್ ಬಹದ್ದೂರ್ ಶಾಸ್ತ್ರಿಗಳು ನಡೆದುಕೊಂಡ ನಡವಳಿಕೆಯಿದು. ಇದು ಸಂಸ್ಕೃತಿ.

ಅದೇ ನೋಡಿ,ರಸ್ತೆ ರಿಪೇರಿ ಸಮಾರಂಭವೊಂದರಲ್ಲಿ ಕುಪ್ರಸಿದ್ಧ ಪುಢಾರಿಯೊಬ್ಬರು ಅನಧಿಕೃತವಾಗಿ ತಾವೇ ವಾಹನವೇರಿ, ಚಾಲನೆಗೊಳಿಸಿ ಒಬ್ಬನ ಕಾಲಿನ ಮೇಲೆ ಚಕ್ರ ಹರಿಸಿ, ಬೆರಳು ತುಂಡರಿಸಿ, ಸುದ್ದಿ ಮಾಡಿ ಕೆಳಗಿಳಿದರು. ಇಳಿದೊಡನೆ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬಿಟ್ಟರು. 'ಆ ಪ್ರಾಣಿ ಮಾಡಿದ್ದು' ಎಂದು ಮುತ್ತು ಉದುರಿಸಿದ್ದಲ್ಲದೆ ಏನೂ ಅರಿಯದ ಏನಕ್ಕೂ ಸಂಬಂಧಪಡದ ವಾಹನದ ಪಕ್ಕದಲ್ಲಿ ನಿಂತಿದ್ದ ಚಾಲಕನನ್ನು ಬಂಧಿಸಲು ಹೇಳಿ, ಕಾಲು ತುಂಡಾದವನಿಗೆ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗುವಂತೆ ಹೇಳಿ, ಆರಾಮವಾಗಿ ಕಾರಿನಲ್ಲಿ ಸುಖಾಸೀನರಾಗಿ ಮನೆಗೆ ತೆರಳಿದರು. ಮಾಧ್ಯಮಗಳು ಅಪ್ಪಟ ಸತ್ಯವೆಂಬಂತೆ 'ಪುಢಾರಿ ಅಪಘಾತದಿಂದ ಪಾರು' ಎಂದು ದೊಡ್ಡ ಸುದ್ದಿ ನೀಡಿದವು.

ಅಂದು ಸ್ವತಃ ಹೊಣೆ ಹೊತ್ತು ಸಿದ್ಧರಾದ ಶಾಸ್ತ್ರಿಗಳೆಲ್ಲಿ? ಇಂದು ಸ್ವತಃ ಸಿದ್ಧರಾಗಿ ಹೊಣೆ ವರ್ಗಾಯಿಸಿ ಶಾಸ್ತಿ ನೀಡಿದ ಪುಢಾರಿ ಎಲ್ಲಿ? ಒಂದು ಮೂಸುಂಬೆ, ಇನ್ನೊಂದು ಗೋಸುಂಬೆ! ಒಂದು ಸಂಸ್ಕೃತಿ, ಇನ್ನೊಂದು ಅಪಸಂಸ್ಕೃತಿ. ಒಂದು ಮಾನವೀಯತೆ, ಇನ್ನೊಂದು ದೌರ್ಜನ್ಯ. ಶಾಸ್ತ್ರಿಗಳಿಗೆ ಚಾಲಕ ಅಂದು ತನ್ನ ಮಗನಂತೆ, ಪುಢಾರಿಗೆ ಆತ ಪ್ರಾಣಿಯಂತೆ!'

ವಿವಿಧತೆಯಲ್ಲಿ ಏಕತೆ ಎಂಬುದು ಭಾರತೀಯ ಸಂಸ್ಕೃತಿಯ ಮೂಲಮಂತ್ರವಾಗಿದೆ. ನಮ್ಮ ದೇಶವು ವಿವಿಧ ಭಾಷೆ, ವೇಷಭೂಷಣ, ಜಾತಿಧರ್ಮಗಳಿಂದ ಕೂಡಿಕೊಂಡಿದ್ದರೂ ನಾವು ಭಾರತೀಯರು ಒಂದೇ ಎನ್ನುವ ಭಾವನೆ ಈ ದೇಶದ ಜನರನ್ನು ಏಕಸೂತ್ರದಲ್ಲಿ ಹಿಡಿದಿಟ್ಟಿದೆ. ಯಾವುದೋ ಅವ್ಯಕ್ತ ಬಾಂಧವ್ಯವು ಪ್ರತಿಯೊಬ್ಬ ಭಾರತೀಯನಲ್ಲಿ ಮನೆ ಮಾಡಿದ್ದನ್ನು ದೇಶದ ಉದ್ದಗಲಕ್ಕೂ ಕಾಣಬಹುದು. ಈ ಅವ್ಯಕ್ತ ಸಂಸ್ಕೃತಿಯೇ ನಮ್ಮನ್ನು ಆಸೇತು ಹಿಮಾಚಲ ಪ್ರವಾಸ ಮಾಡಲು, ಅರಿಯಲು, ಬೆಸೆಯಲು ಪ್ರೇರೇಪಿಸುತ್ತದೆ ಎನ್ನಬಹುದು.

## ಲೇಖಕರ ಪರಿಚಯ



ತಮಿಳುನಾಡಿನಲ್ಲಿ ಜನಿಸಿ, ಕರ್ನಾಟಕದಲ್ಲಿ ನೆಲೆಸಿರುವ ಹಿರೇಮಗಳೂರು ಕಣ್ಣನ್ ಕನ್ನಡದ ಶ್ರೇಷ್ಠ ವಾಗ್ಮಿಗಳು. 'ಇವರು ಕನ್ನಡದ ಪೂಜಾರಿ' ಎಂದೇ ಪ್ರಸಿದ್ಧರು. ವೃತ್ತಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಹಿರೇಮಗಳೂರಿನಲ್ಲಿರುವ ಕೋದಂಡ ಕಲ್ಯಾಣ ರಾಮನ ದೇವಾಲಯದಲ್ಲಿ ಅರ್ಚಕರು. ಎಲ್ಲಾ ದಿನಗಳಲ್ಲೂ ಕನ್ನಡದಲ್ಲಿ ದೇವತಾರ್ಚನೆ, ಪೂಜಾ ಸೇವೆ ಸಲ್ಲಿಸುವುದು ಇವರ ವಿಶೇಷತೆ.

'ನಮ್ ರೇಡಿಯೋ' ಎನ್ನುವ ಎಫ್.ಎಂ. ರೇಡಿಯೋ ಸ್ಟೇಷನ್ ನಲ್ಲಿ' ಇವರ ಕಾಫಿ ವಿತ್ ಕಣ್ಣನ್' ಎನ್ನುವ ಕಾರ್ಯಕ್ರಮ ತುಂಬಾ ಜನಪ್ರಿಯವಾಗಿತ್ತು. ನುಡಿ ಪೂಜೆ, ಕಣ್ಣನ್ ನೋಟ ಎಂಬ ಕೃತಿಗಳು ಸಾಹಿತ್ಯ ಲೋಕಕ್ಕೆ ಇವರ ಅಪೂರ್ವ ಕೊಡುಗೆಗಳಾಗಿವೆ. ಇವರ ಹರಟೆ ಕಾರ್ಯಕ್ರಮ ಟೆಲಿವಿಷನ್ ನಲ್ಲಿ ಅಪಾರ ಜನಪ್ರಿಯತೆ ಗಳಿಸಿದೆ.

ಕನ್ನಡ ಭಾಷೆಯ ವಿಶಿಷ್ಟ ಜಾಯಮಾನಗಳೆಲ್ಲವನ್ನು ಒಳಗೊಂಡ ವಿಶೇಷ ಬರವಣಿಗೆಯ ಶೈಲಿ ಇವರದು. ಹಾಸ್ಯ, ವ್ಯಂಗ್ಯ, ಚಾಟೂಕ್ತಿ ಮುಂತಾದವುಗಳ ಮೂಲಕ ಇವರು ಜನರ ಕೆಟ್ಟ ನಡವಳಿಕೆಗಳಿಗೆ ಕನ್ನಡಿ ಹಿಡಿದಿದ್ದಾರೆ. ಅಂತೆಯೇ ಜನರ ಸಜ್ಜನಿಕೆ, ಮುಗ್ಧತೆ, ಪ್ರಾಮಾಣಿಕತೆ, ಪ್ರತಿಭೆಗಳಿಗೆ ಆರತಿ ಬೆಳಗುತ್ತಾರೆ.

ಸಮಾಜದ ಎಲ್ಲಾ ವಲಯಗಳ ಜನರ ಚಿತ್ರಣದ ಮುಖಾಂತರ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ಕಣ್ಣನ್ ರವರು ನಡೆ ನುಡಿಗಳ ಪೂಜೆಯನ್ನು ಮಾಡಿರುವ ರೀತಿ ಅತ್ಯಂತ ಮನನೀಯವಾಗಿದೆ.

ಈ ಲೇಖನವನ್ನು ಹಿರೇಮಗಳೂರು ಕಣ್ಣನ್ ರವರ 'ನುಡಿ ಪೂಜೆ' ಎಂಬ ಕೃತಿಯಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. 'ಕಣ್ಣಿಗೆ ಕಾಣಿಸದ' ಸಂಸ್ಕೃತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
2. 'ಕನ್ನಡದ ಭೀಷ್ಮ' ಡಿ.ವಿ.ಜಿ. ಯವರು ಯಾವುದನ್ನು ಸಂಸ್ಕೃತಿ ಎಂದು ಹೇಳಿದ್ದಾರೆ?
3. ಸಚಿವರ ಯಾವ ನಡವಳಿಕೆಯನ್ನು ಕಂಡು ಪೊಲೀಸ್ ಸಿಬ್ಬಂದಿಗೆ ಮೈಯೆಲ್ಲಾ ಬೆವರಿತು?
4. ರೈಲ್ವೆ ಸಚಿವರಾಗಿದ್ದಾಗ ಲಾಲ್ ಬಹದ್ದೂರ್ ಶಾಸ್ತ್ರಿ ಯವರು ತೋರಿದ ನಡವಳಿಕೆಯನ್ನು ವಿವರಿಸಿರಿ.
5. ಲೇಖಕರು ಪುಢಾರಿಯನ್ನು ಗೋಸುಂಬೆ ಎಂದು ಕರೆಯಲು ಕಾರಣವೇನು?

## ಶೀರ್ಷಿಕೆ ಕೊಡಿರಿ

ಈ ಪಾಠಕ್ಕೆ ಸೂಕ್ತವಾದ ಬೇರೊಂದು ಶೀರ್ಷಿಕೆಯನ್ನು ನೀಡಿರಿ.ಆ ಶೀರ್ಷಿಕೆ ಹೇಗೆ ಸೂಕ್ತವಾಗಿದೆ ಎಂಬುದನ್ನು ಸಮರ್ಥಿಸಿರಿ.

## ಗಾದೆಮಾತನ್ನು ವಿಸ್ತರಿಸಿರಿ

"ಸುತ್ತಿಗೆಯ ಶಬ್ದಕ್ಕೆ ಎಚ್ಚರವಾಗದ ನಾಯಿಗೆ ರೊಟ್ಟಿ ಶಬ್ದಕ್ಕೆ ಎಚ್ಚರವಾಯಿತು" ಈ ಗಾದೆಮಾತಿನ ಅರ್ಥವನ್ನು ವಿವರಿಸಿ ಬರೆಯಿರಿ.

## ವೈಶಿಷ್ಟ್ಯ ಬರೆಯಿರಿ

"ಕಣ್ಣು ಕಾಮಾಲೆಯಾಗಿ, ಕಿವಿ ಹಿತ್ತಾಳೆಯಾಗಿ, ತಲೆ ಬಾಡಿಗೆಯಾದರೆ ಸಂಸ್ಕೃತಿ ತಿಳಿಯಲಾಗುವುದಿಲ್ಲ." ಮೇಲಿನ ವಾಕ್ಯದಲ್ಲಿ ಬಂದಿರುವ ಕಣ್ಣು ಕಾಮಾಲೆ, ಕಿವಿ ಹಿತ್ತಾಳೆ - ಈ ಪದ ಪ್ರಯೋಗಗಳ ವೈಶಿಷ್ಟ್ಯವನ್ನು ಬರೆಯಿರಿ.

## ವಾಕ್ಯ ರಚಿಸಿರಿ

ಹೋಲ್ ಸೇಲ್, ಪೊಲೀಸ್ - ಈ ಪದಗಳಿಗೆ ಸಂವಾದಿಯಾಗಿರುವ ಕನ್ನಡ ಪದಗಳನ್ನು ಬರೆಯಿರಿ. ಆ ಸಂವಾದಿ ಪದಗಳನ್ನು ಬಳಸಿ ಒಂದೊಂದು ವಾಕ್ಯವನ್ನು ರಚಿಸಿರಿ.

## ಪ್ರಬಂಧ ಬರೆಯಿರಿ

'ಆಳಾಗಿ ದುಡಿ, ಅರಸಾಗಿ ಉಣ್ಣು' ಈ ಗಾದೆ ಮಾತಿನ ಆಧಾರದಲ್ಲಿ 'ದುಡಿಮೆಯ ಮಹತ್ವ'ದ ಕುರಿತು ಒಂದು ಪ್ರಬಂಧ ಬರೆಯಿರಿ.

## ಭಾಷಣ ತಯಾರಿಸಿರಿ

'ನನ್ನ ದೃಷ್ಟಿಯಲ್ಲಿ ಸಂಸ್ಕೃತಿ' ಎಂಬ ವಿಷಯದ ಕುರಿತು ನಿಮ್ಮ ಶಾಲೆಯ ಸಾಹಿತ್ಯ ಸಭೆಯಲ್ಲಿ ಭಾಷಣ ಮಾಡುವುದಕ್ಕಾಗಿ ಒಂದು ಲಿಖಿತ ಭಾಷಣ ತಯಾರಿಸಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಕುರಿತಾದ ಮಾಹಿತಿಗಳನ್ನು ಶಾಲಾ ಗ್ರಂಥಾಲಯದಿಂದ ಸಂಗ್ರಹಿಸಿ ಅವರ ವ್ಯಕ್ತಿ ಪರಿಚಯ ಬರೆಯಿರಿ.

## ವೀಕ್ಷಿಸಿರಿ

ಗೋವಿನ ಹಾಡಿನ ದೃಶ್ಯಾವಿಷ್ಕಾರವನ್ನು ಮಾಹಿತಿ ತಂತ್ರಜ್ಞಾನದ ಸಹಾಯದಿಂದ ವೀಕ್ಷಿಸಿರಿ.

# ಭೂಲೋಕದ ಅಮರಾವತಿ ಶಿಮ್ಲಾ

- ಜಯದೇವಪ್ಪ ಜೈನಕೇರಿ

ಇಂದ್ರನ ಅಮರಾವತಿ, ಬ್ರಿಟಿಷ್ ಭಾರತದ ಬೇಸಿಗೆಯ ರಾಜಧಾನಿ 'ಶಿಮ್ಲಾ' ಪ್ರವಾಸಕ್ಕಾಗಿ ನಾನು, ನನ್ನ ಪತ್ನಿ ಶಾಂತಮ್ಮ ೧.೫.೧೯೯೭ ರ ರಾತ್ರಿ ದೆಹಲಿಯ ಮುನಿರ್ಕಾದಿಂದ ಹೊರಟೆವು. ಸುಸಜ್ಜಿತ ಬಸ್ಸಿನಲ್ಲಿ ರಾತ್ರಿ ಪ್ರಯಾಣ, ಉತ್ತಮ ರಸ್ತೆ, ನಿಧಾನವಾಗಿ ನಿದ್ರೆ ಹೋದೆವು. ಬೆಳಗಿನ ಜಾವ ೫ ಗಂಟೆಗೆ ಯೋಜನಾ ಬದ್ಧವಾಗಿ ನಿರ್ಮಾಣವಾಗಿರುವ ನಗರ ಹರಿಯಾಣದ ರಾಜಧಾನಿ "ಚಂಡೀಗಢ" ತಲುಪಿದೆವು. ರಸ್ತೆ ಬದಿಯ ಹೋಟೆಲಲ್ಲಿ ಅಲ್ಪ ವಿಶ್ರಾಂತಿ ಪಡೆದು ಸ್ನಾನ, ತಿಂಡಿ ಮುಗಿಸಿ ಚಂಡೀಗಢ ನಗರದ ವೀಕ್ಷಣೆಗಾಗಿ ಹೊರಟೆವು.

ಆರಂಭದಲ್ಲಿ ಗುಲಾಬಿ ಉದ್ಯಾನವನ ನೋಡಿದೆವು. ಬಳಿಕ ವಿಶ್ವವಿಖ್ಯಾತವಾದ ಏಕವ್ಯಕ್ತಿ ನಿರ್ಮಿತ ಬಂಡೆಗಳ ಉದ್ಯಾನವನ 'ರಾಕ್ ಆರ್ಟ್ ಮ್ಯೂಸಿಯಂ' ನೋಡಿದೆವು. ಇದು ಚಂಡೀಗಢ ರೈಲು ನಿಲ್ದಾಣದಿಂದ ೧೦ ಕಿ.ಮೀ ದೂರದಲ್ಲಿದೆ. 'ರಾಕ್ ಗಾರ್ಡನ್ ಹೆಸರು ಕಿವಿಯ ಮೇಲೆ ಬಿದ್ದೊಡನೆ ಕಲ್ಲಿನ ಬಂಡೆಗಳು, ವಿವಿಧ ಆಕಾರದ ಶಿಲ್ಪಗಳ ಚಿತ್ರಣ ಮನದೊಳಗೆ ಮೂಡಬಹುದು. ಆದರೆ ಈ ಕಲ್ಲಿನ ಉದ್ಯಾನದೊಳಗೆ ಹೊಕ್ಕರೆ ನೀವು ಅದುವರೆಗೆ ನೋಡಿರದ ಭವ್ಯ ಲೋಕವೊಂದು ತೆರೆದುಕೊಳ್ಳುತ್ತದೆ.



ರಾಕ್ ಗಾರ್ಡನ್, ಕಲಾಕೃತಿಗಳ ಗಣಿ. ಬಗೆ ಬಗೆಯ ಆಕಾರದ ಪ್ರಾಣಿ, ಮನುಷ್ಯ, ಪಕ್ಷಿ ಮುಂತಾದವುಗಳ ಆಕರ್ಷಕ ಕಲಾಕೃತಿಗಳು ಕಣ್ಮನಗಳನ್ನು ಸೆಳೆಯುತ್ತವೆ. ಒಂದೇ ಕಲಾಕೃತಿಯನ್ನು ನಕಲು ಮಾಡಿ ಜೋಡಿಸಿಟ್ಟಂತೆ ಅದೇ ಆಕಾರದ, ಗಾತ್ರದ ಹತ್ತಾರು ಕಲಾಕೃತಿಗಳು ಜೀವತಳೆದಿರುವುದು ನಿರುಪಯೋಗವೆನಿಸಿದ ವಸ್ತುಗಳಿಂದ ಎನ್ನುವುದು ಇಲ್ಲಿನ ವೈಶಿಷ್ಟ್ಯ. ಕಲ್ಲಿನ ಚೂರು, ತುಂಡಾದ ಟೈಲ್ಸ್, ಬಳೆ, ಗಾಜು, ಮರ, ಕಪ್ಪೆ ಚಿಪ್ಪು, ಹಾಳಾದ ಬಲ್ಬ್, ತಲೆಗೂದಲು ಹೀಗೆ ನಾವು ನಿರುಪಯುಕ್ತ ಎಂದು ಬಿಸಾಡುವ ಸಾಮಗ್ರಿಗಳೆಲ್ಲವೂ ಕಲಾಕೃತಿಗೆ ರೂಪ ನೀಡುವ ಕ್ರಿಯೆಯಲ್ಲಿ ಭಾಗಿಯಾಗಿವೆ. ಕಿನ್ನರ ಲೋಕದ ಆವರಣಕ್ಕೆ ಕಾಲಿಟ್ಟ ಅನುಭವ ಮೂಡಿಸುವ ಈ ರಾಕ್ ಗಾರ್ಡನ್ ೨೦ ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ಕೃತಕ ಜಲಪಾತಗಳು, ಬಣ್ಣಬಣ್ಣದ ಮೀನುಗಳ ಕೊಠಡಿ, ಗುಹೆಗಳು, ಒಣ ಮರದಲ್ಲಿ ಮೂಡಿದ ಕಲಾತ್ಮಕ ಕೆತ್ತನೆಗಳು, ಮಕ್ಕಳ ಆಟಕ್ಕೆಂದೇ ಮೀಸಲಾದ ಪ್ರದೇಶಗಳು 'ರಾಕ್ ಗಾರ್ಡನ್'ನಲ್ಲಿವೆ. ಇಲ್ಲೊಂದು ಬಾವಿ ಇದೆ. 'ಈ ಬಾವಿಯಲ್ಲಿ ಹಣ ಹಾಕಿ ಪ್ರಾರ್ಥಿಸಿಕೊಂಡರೆ ಅವರು ಬಯಸಿದ್ದು ಈಡೇರುತ್ತದೆ' ಎಂಬುದು ಜನರ ನಂಬಿಕೆ. ರೋಡ್ ಇನ್ ಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ನೆಕ್ ಚಂದ್ ಈ ಉದ್ಯಾನದ ರೂವಾರಿ. ಜನ ಬೇಡವೆಂದು ಎಸೆದಿದ್ದ ಸಾಮಗ್ರಿಗಳನ್ನು ಬಳಸಿಕೊಂಡೇ ಅವರು ಸುಮಾರು ೨೦ ಸಾವಿರಕ್ಕೂ ಅಧಿಕ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ. ಕೃತಕತೆಯ ಛಾಯೆ ಇಲ್ಲಿನ ನಯನ ಮನೋಹರ ಪರಿಸರದಲ್ಲಿ ಭಾಸವಾಗುವುದೇ ಇಲ್ಲ. ಈ ಕೃತಕ ಮ್ಯೂಸಿಯಂ ವೀಕ್ಷಣೆಯ ನಂತರ ಮಾನವನ ಕಲ್ಪನೆಯ ಅಗಾಧತೆಗಳ ಅರಿವು ನಮಗಾಯಿತು.

ನಂತರ ಸ್ವಲ್ಪ ಕಾಲ ಹತ್ತಿರದ ಕೃತಕ ಸರೋವರದಲ್ಲಿ ದೋಣಿವಿಹಾರ ಮಾಡಿದೆವು. ಅಲ್ಲಿಂದ ಹೊರಟು ಮಧ್ಯಾಹ್ನ ಪಿಂಜೋರಾ ತಲುಪಿದೆವು. ಹಿಂದಿನ ರಾಜರ ಅರಮನೆಯ ಸುತ್ತ ಪಿಂಜೋರಾ ಉದ್ಯಾನವನ ವಿಶಾಲವಾಗಿ ಹಬ್ಬಿದೆ. ಪ್ರತಿದಿನ ಸಹಸ್ರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಅಪರೂಪದ ಸಸ್ಯ ಪ್ರಭೇದಗಳನ್ನು ಇಲ್ಲಿ ಬೆಳೆಸಿದ್ದಾರೆ. ಅಲ್ಲಲ್ಲಿ ನೀರಿನ ಚಿಲುಮೆಗಳು, ಮೆಟ್ಟಿಲುಗಳು ಇವೆ. ಊಟದ ನಂತರ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು.

ಚಂಡೀಗಢದಿಂದ ಹೊರಟ ಸ್ವಲ್ಪವೇ ಸಮಯದಲ್ಲಿ "ಕಾಲ್ಕ" ನಗರ ಸಿಗುತ್ತದೆ. ಇಲ್ಲಿಂದ ಬೆಟ್ಟದ ಸಾಲುಗಳು ಕಂಡುಬರುತ್ತವೆ. ಕಾಲ್ಕಾದಿಂದ ಶಿಮ್ಲಾಕ್ಕೆ ಏರಲು ಚಿಕ್ಕ ರೈಲು (ನ್ಯಾರೋಗೇಜ್) ಮಾರ್ಗವೂ ರಸ್ತೆ ಮಾರ್ಗದ ಪಕ್ಕದಲ್ಲೇ ಹಾದು ಹೋಗುತ್ತದೆ. ಚಿಕ್ಕ ರೈಲಿನಲ್ಲಿ ಸಾವಧಾನವಾಗಿ ಸಾಗಲು ಸುಮಾರು ಐದು ಗಂಟೆ ಪ್ರಯಾಣ, ಹೊಸಬರಿಗೆ ಇದೊಂದು ಅಪೂರ್ವ ಅದ್ಭುತ ಅನುಭವ ಎಂದು ನಮ್ಮ ಮಾರ್ಗದರ್ಶಿ ಹೇಳಿದ. ಆದರೆ ನಾವು ಮಾತ್ರ ಮಿನಿ ಬಸ್ಸಿನಲ್ಲಿ ಏರಿಳಿಯುವ ಹಾವಿನಂತೆ ಅಂಕುಡೊಂಕಾಗಿ ಸಾಗುವ ಘಾಟ್ ರಸ್ತೆಯಲ್ಲಿ ಆಶ್ಚರ್ಯ, ವಿಸ್ಮಯಗಳಿಂದ ಪ್ರಕೃತಿರಮ್ಯ ದೃಶ್ಯಗಳನ್ನು ನೋಡುತ್ತಾ ಕೇವಲ ಮೂರುಗಂಟೆ ಪ್ರಯಾಣ ಮಾಡಿ ಸಾಯಂಕಾಲ ೬.೩೦ ಕ್ಕೆ ಶಿಮ್ಲಾ ತಲುಪಿದೆವು, ನಿಧಾನವಾಗಿ ಚಳಿ ಪ್ರಾರಂಭವಾಗಿ ಮಂಜು

ಮುಸುಕಿತು. ಬೆಚ್ಚನೆಯ ಉಡುಪುಗಳನ್ನು ಧರಿಸಿ ನಮ್ಮ ವಸತಿಗೃಹ ಪ್ರವೇಶಿಸಿದೆವು. ಬಿಸಿ ಬಿಸಿ ಕಾಫಿಯ ನಂತರ, ಲಾಡ್ಜ್ ಹತ್ತಿರವೇ ಇದ್ದ ಸುಮಾರು ೮೦೦ ಅಡಿ ಉದ್ದದ ಸುರಂಗರಸ್ತೆ ದಾಟಿ, ಶಿಮ್ಲಾ ನಗರದ ರಾತ್ರಿಯ ವಿಹಂಗಮ ದೃಶ್ಯನೋಡಿದೆವು. ಬೆಟ್ಟದಿಂದ ಬೆಟ್ಟಕ್ಕೆ ಎತ್ತ ನೋಡಿದರೂ ಹಂತ ಹಂತವಾಗಿ ಕಟ್ಟಡಗಳು, ಕಾಲು ದಾರಿಗಳು, ದೀಪಮಾಲೆಗಳು ಮನಮೋಹಕವಾಗಿದ್ದು ಆಕಾಶದ ನಕ್ಷತ್ರಗಳೆಲ್ಲಾ ಭೂಮಿಗೆ ಇಳಿದು ಸ್ವರ್ಗವನ್ನು ಸಾಕ್ಷಾತ್ಕರಿಸಿದಂತೆ ಕಾಣುತ್ತಿತ್ತು ಈ ನಗರ. ಅಲ್ಲಿಂದ ಶಿವಮೊಗ್ಗಕ್ಕೊಂದು ದೂರವಾಣಿ ಕರೆ ಮಾಡಿ ನಮ್ಮ ಇರವನ್ನು ತಿಳಿಸಿದೆವು.

ಮೈಕೊರೆಯುವ ಚಳಿ ಹೆಚ್ಚಾಗುತ್ತಿದ್ದಂತೆ ವಸತಿಗೆ ಹಿಂತಿರುಗಿ, ಬಿಸಿಬಿಸಿ ತಿಂಡಿ ತಿಂದು ರಜಾಯಿ ಹೊದ್ದು ಮಲಗಿದೆವು, ಬೆಳಿಗ್ಗೆ ಎದ್ದು ಬಿಸಿ ಕಾಫಿ ಸೇವಿಸಿದೆವು. ಬಿಸಿನೀರು ಸ್ನಾನ ಮನಸ್ಸಿಗೆ ಮುದ ನೀಡಿದರೂ ಬೀಸುವ ಚಳಿಗಾಳಿ, ಸದಾ ಸುರಿಯುವ ಮಂಜು, ನಡುಕ ಹುಟ್ಟಿಸಿದುವು. ನಗರ ವೀಕ್ಷಣೆ ಮಾಡುತ್ತಾ ಸುಮಾರು ೭೮೦೦ ಅಡಿ ಎತ್ತರವಿರುವ 'ಕುರ್ಫಿಹಿಲ್' ಸ್ಟೇಷನಿಗೆ ಹೊರಟೆವು. ಇಂದ್ರನ ಅಮರಾವತಿಯ ಕಲ್ಪನೆಯ ೩-೪ ಅಂತಸ್ತಿನ ಕಟ್ಟಡಗಳು, ಪಾವಟಿಗಳ ರಸ್ತೆಗಳು, ೧೮ ಚದರ ಮೈಲು ವಿಸ್ತಾರವಾದ ಶಿಮ್ಲಾನಗರ ಬೆಟ್ಟ ಗುಡ್ಡಗಳ ಮಧ್ಯೆ ಆಗಾಗ ಮರೆಯಾಗುತ್ತಿದ್ದುವು. ತಿರುವುಗಳಲ್ಲಿ ಧುತ್ತನೆ ಎದುರು ಕಾಣುವ ಬೃಹತ್ ಕಟ್ಟಡಗಳು, ಅಪಾಯಕಾರಿ ತಿರುವುಗಳು ನಮ್ಮಲ್ಲಿ ಮುಂದೇನು? ಎಂಬ ಆತಂಕ ಮೂಡಿಸುತ್ತವೆ. ಎಂತಹ ನಾಸ್ತಿಕರೂ ಶಿಮ್ಲಾದ ಪ್ರಕೃತಿ ವೈಚಿತ್ರ್ಯ, ವಿಸ್ಮಯಗಳನ್ನು ಗೆಲ್ಲುವ, ಮೆಟ್ಟುವ ಮಾನವನ ಯತ್ನ ಕಂಡು 'ದೇವರೇ ಕಾಪಾಡಪ್ಪ' ಎಂದು ಉದ್ಗರಿಸದೆ ಇರಲಾರ.

ಶಿಮ್ಲಾದ ಜನರು ಶ್ರಮ ಜೀವಿಗಳು. ಕಡಿದಾದ ದಾರಿಯಲ್ಲಿ ಬೆಟ್ಟ ಗುಡ್ಡದ ಏರಿನಲ್ಲಿ ಬೆನ್ನ ಮೇಲೆ ಹೊರೆಹೊತ್ತು ಸರಾಗವಾಗಿ ಹತ್ತಿ ಇಳಿಯುತ್ತಾರೆ. ಇದೇ ರೀತಿ ಬೆನ್ನಮೇಲೆ ಜೀವನಾವಶ್ಯಕ ವಸ್ತುಗಳನ್ನು, ಮಕ್ಕಳನ್ನು, ಮುದುಕರನ್ನು, ರೋಗಿಗಳನ್ನು ಹೊತ್ತು ಗಮ್ಯ ಸ್ಥಳವನ್ನು ತಲುಪಿಸುತ್ತಾರೆ. ಎತ್ತರ ಕಡಿಮೆಯಾದರೂದೃಢಕಾಯರೂಆರೋಗ್ಯವಂತರೂ ಆಗಿರುವ ಇಲ್ಲಿನ ಜನ ಬೆಚ್ಚನೆಯ ಕಡು ಬಣ್ಣದ ಉಡುಪುಗಳನ್ನು ಧರಿಸುತ್ತಾರೆ. ವಿಶಿಷ್ಟವಾದ ಶಿಮ್ಲಾ ಟೋಪಿ ಧರಿಸುತ್ತಾರೆ, ಇಕ್ಕೆಲಗಳಲ್ಲಿರುವ ಹಸಿರು ಬೆಟ್ಟಸಾಲುಗಳನ್ನು ದಾಟುತ್ತಿರುವಂತೆ ಒಂದು ಬದಿಗೆ ಆಳವಾದ ಕಮರಿಗಳು, ಬೆಟ್ಟದ ಸಂದಿನಿಂದ ಇಣುಕುವ ಜಲಪಾತಗಳು, ನೀರಿನ ಝರಿಗಳು, ನೀಳವಾದ ಪೈನ್ ಮತ್ತು ದೇವದಾರು ವೃಕ್ಷಗಳ ವನರಾಜಿ ಕಣ್ಣಿಗೆ ತಂಪು ನೀಡುತ್ತವೆ. ಆಳವಾದ ಕಣಿವೆಯಲ್ಲಿ ಕಾಣುವ ಚಿಕ್ಕ ಗ್ರಾಮಗಳು, ಅಲ್ಲಲ್ಲಿ ದೂರದಲ್ಲಿ ದೊಡ್ಡ ಬಂಗಲೆಗಳು, ಅವುಗಳನ್ನು ತಲುಪಲು ಇಳಿಜಾರಿನಲ್ಲಿ ಕಡಿದಾದ ಮೆಟ್ಟಿಲು ದಾರಿಗಳೂ ಗೋಚರಿಸುತ್ತವೆ. ಸಮತಟ್ಟಾದ ಸ್ವಲ್ಪವೇ ಜಾಗದಲ್ಲಿ ಕೃಷಿಕಾಯಕ ಮಾಡುವ ಶ್ರಮಿಕರ ಕಾರ್ಯಕುಶಲತೆಯನ್ನು ಮೆಚ್ಚಲೇಬೇಕು. “ಕುರ್ಫಿ ಪಾಯಿಂಟ್” ತಲುಪುತ್ತಿದ್ದಂತೆ ಬಸ್ ಇಳಿದು ಪ್ರಕೃತಿ ರಮ್ಯ ದೃಶ್ಯಗಳನ್ನು ವೀಕ್ಷಿಸಲು ಸೂಕ್ತ ಸ್ಥಳ ಹಿಡಿದೆವು.

ಶಿಮ್ಲಾದ ಪ್ರಕೃತಿ ರಮ್ಯತೆಯ ರಸಾನುಭವದಲ್ಲಿ ತೇಲುತ್ತಾ, ನಾವು ಕೊರೆಯುವ ಚಳಿಯನ್ನು ಸಹ ಮರೆತು ಬಿಟ್ಟಿದ್ದೆವು. ಇದ್ದಕ್ಕಿದ್ದಂತೆ ಕ್ಷಣ ಮಾತ್ರದಲ್ಲಿ ಬೀಸುವ ಚಳಿಗಾಳಿ, ಹಿಂದೆಯೇ ಬಿಸಿಲು, ಮರುಕ್ಷಣವೇ ಮಂಜು ಮುಸುಕಿ, ದೃಶ್ಯಗಳೆಲ್ಲಾ ತೇಲುವ ಮೋಡಗಳಲ್ಲಿ ಅದೃಶ್ಯವಾಗುವ ಸೊಬಗು



ವರ್ಣಿಸಲಸಾಧ್ಯ. ಅನುಭವಿಸಿಯೇ ಸವಿಯಬೇಕು. ಅಷ್ಟರಲ್ಲಿ ಅಲ್ಲಿಂದ “ಫಾಗು ಪಾಯಿಂಟ್” ಗೆ ಕರೆದೊಯ್ಯುವ ಕುದುರೆ ಮಾಲೀಕರು ಬೆನ್ನು ಹತ್ತಿದರು. ನನ್ನ ಪತ್ನಿ ಕುದುರೆ ಸವಾರಿಗೆ ಒಪ್ಪದೆ ಅಲ್ಲೇ ಉಳಿದಳು. ನಾನು ಒಂದು ಎತ್ತರವಾದ ಕುದುರೆ ಆರಿಸಿಕೊಂಡು ಹೋಗಿಬರಲು ರೂ. ೧೨೫ ಕ್ಕೆ ಮಾತುಕತೆ ನಡೆಸಿ ಹೊರಟೆನು. ಸುಮಾರು ೫ ಅಡಿ ಎತ್ತರವಿದ್ದ ಭಾರೀ ಕುದುರೆಯನ್ನು ೫'೧೦'' ಎತ್ತರ ೮೦ ಕೆ.ಜಿ. ಭಾರವಿರುವ ನಾನು ಏರಲಾಗದೆ ಚಿಂತಿಸುತ್ತಿರುವಾಗ ಸಣಕಲು ಶರೀರದ ಕುದುರೆಯ ಮಾಲೀಕ, ನನ್ನನ್ನು ಅನಾಮತ್ತಾಗಿ ಎತ್ತಿ ಕುದುರೆಯ ಬೆನ್ನಿನ ಮೇಲೆ ಪ್ರತಿಷ್ಠಾಪಿಸಿಯೇ ಬಿಟ್ಟನು. ಕೈಗೆ ಲಗಾಮು ಕೊಟ್ಟು, ಕಾಲಿಗೆ ಕಬ್ಬಿಣದ ನೇತಾಡುವ ಬಳೆ ಸಿಕ್ಕಿಸಿದನು.

ಅಂತೂ ಇಂತೂ ನನ್ನನ್ನು ಅಶ್ವಾರೂಢನನ್ನಾಗಿಸಿದ ಕುದುರೆ ಮಾಲೀಕ ತೃಪ್ತಿಯಿಂದ 'ಚಲೋ ಸಾಬ್' ಎಂದು ಕುದುರೆ ಮುಂದೆ ಲಗಾಮು ಹಿಡಿದು ಹೊರಟ. ಸುಮಾರು ೩ ಕಿ.ಮೀ. ಏರುದಾರಿಯಲ್ಲಿ ೮೫೦೦ ಅಡಿ ಎತ್ತರಕ್ಕೆ ಏರಬೇಕು, ಈ ಕುದುರೆಗಳು ಪರಿಚಯದ ದಾರಿಯಲ್ಲಿ ಹೊಸ ಸವಾರರನ್ನು ಸರಾಗವಾಗಿ, ನಿಧಾನವಾಗಿ ಕರೆದೊಯ್ಯುತ್ತವೆ. ಅನುಭವ ಇಲ್ಲದ ನಮಗೆ ಈ ಸವಾರಿ, ಭಯದ ಜೊತೆಗೆ ರೋಮಾಂಚನ ನೀಡುತ್ತದೆ. ಕಲ್ಲು ಮಣ್ಣಿನ ಕಚ್ಚಾರಸ್ತೆಯಲ್ಲಿ ಎಲ್ಲಿ ಕುದುರೆ ಜಾರುತ್ತೋ, ನಾವು ಬೀಳುತ್ತೇವೋ ಎಂಬ ದಿಗಿಲು, ಆತಂಕದಲ್ಲಿ “ಫಾಗು ಪಾಯಿಂಟ್'' ತಲುಪಿದೆವು. ಸಾವಿರಾರು ಪ್ರವಾಸಿಗರಿಂದ ''ಫಾಗು ಪಾಯಿಂಟ್'' ಗಿಜಿಗುಟ್ಟುತ್ತಿತ್ತು.

ಇಲ್ಲಿ ಚಳಿ, ಗಾಳಿ, ಬಿಸಿಲಿನ ಆಹ್ಲಾದಕರ ವಾತಾವರಣದಲ್ಲಿ ಕಣ್ಣಿನ ದೃಷ್ಟಿ ಹರಿಯುವವರೆಗೂ ಪ್ರಕೃತಿ ಸೌಂದರ್ಯ ಸವಿಯಬಹುದು. ದೆಹಲಿಯಿಂದ ಕೊಂಡೊಯ್ದ ದೂರದರ್ಶಕ ಇಲ್ಲಿ ಉಪಯೋಗಕ್ಕೆ ಬಂದಿತು. ಅಲ್ಲಿಯೂ ಕೆಲವರು ಬಾಡಿಗೆ ದೂರದರ್ಶಕ ಇಟ್ಟುಕೊಂಡಿದ್ದರು. ಬೆಟ್ಟದ ಸಾಲಿನ ಮಧ್ಯೆ ಒಂದು ಬಂಗಲೆ ತೋರಿಸಿ, 'ಅದೇ ಬಂಗಲೆಯಲ್ಲಿ ಶ್ರೀಮತಿ ಇಂದಿರಾಗಾಂಧಿ ಮತ್ತು ಜುಲ್ಫಿಕರ ಆಲಿ ಭುಟ್ಟೋ ಮಧ್ಯೆ ಶಿಮ್ಲಾ ಒಪ್ಪಂದ ಮಾತುಕತೆ ನಡೆಯಿತು' ಎಂದು ತಿಳಿಸಿದರು. ಅಲ್ಲಲ್ಲಿ ಚಿಕ್ಕ ಗ್ರಾಮಗಳು, ಕೃಷಿಯ ಚಿಕ್ಕ ಪ್ರದೇಶಗಳನ್ನು ನೋಡಿದೆವು. ಹಸುವೂ ಅಲ್ಲದ, ಎಮ್ಮೆಯೂ ಅಲ್ಲದ ವಿಚಿತ್ರವಾದ ತಿಳಿಗೆಂಪು ಬಣ್ಣದ “ಯಾಕ್” ಎಂಬ ಪ್ರಾಣಿಯ ಮೇಲೆ ಕುಳಿತು ಮತ್ತು ಶಿಮ್ಲಾ ವೇಷಭೂಷಣ ಟೋಪಿ ಹಾಕಿಕೊಂಡು ಕೆಲವರು ಫೋಟೋ ತೆಗೆಸುತ್ತಿದ್ದರು. ನಾನು ಪ್ರವಾಸಿ ಬಸ್ಸಿನ ಹತ್ತಿರ ಬರುತ್ತಿದ್ದಂತೆ ಆಹ್ಲಾದಕರ ವಾತಾವರಣ ಒಮ್ಮೆಲೆ ಬದಲಾಗಿ ಮಳೆ, ಗಾಳಿ ಜೊತೆಗೆ ಚಳಿಗಾಳಿ ಬೀಸಲು ಪ್ರಾರಂಭವಾಯಿತು.

ಪ್ರವಾಸೋದ್ಯಮಕ್ಕೆ ಎಲ್ಲ ರೀತಿಯಿಂದಲೂ ಉತ್ತಮ ಸ್ಥಳ ಶಿಮ್ಲಾ, ಅಲ್ಲಿನ ಬಹುಮುಖ್ಯ ಆದಾಯ ಪ್ರವಾಸಿಗರಿಂದಾಗಿದೆ. ಪ್ರವಾಸಿಗರಿಗಾಗಿ ವಸತಿ, ಊಟ, ಸೈಟ್ ಸೀಯಿಂಗ್ ಏರ್ಪಡಿಸುವುದೇ ಇಲ್ಲಿನವರ ಪ್ರಮುಖ ಉದ್ಯೋಗ. ಇವರು ನಾವಿದ್ದಲ್ಲಿಗೇ ಬಂದು ನೋಡಬೇಕಾದ ಸ್ಥಳವನ್ನು ಪರಿಚಯಿಸುತ್ತಾರೆ. ಹಿಮದ ಮೇಲೆ ಜಾರುವುದು, ವೇಗವಾಗಿ ಸ್ಕೀಯಿಂಗ್ ಮಾಡುವುದು ರೋಮಾಂಚಕ ಅನುಭವ. ಸ್ವಲ್ಪ ಎಚ್ಚರ ತಪ್ಪಿದರೂ ಅವಘಡಕ್ಕೆ ತುತ್ತಾಗುವ ಸಾಧ್ಯತೆಯೂ ಇದೆ. ಕಲ್ಲು ಬಂಡೆಗಳ ನಡುವೆ ಏರಿಳಿಯುವ ನದಿಗಳಲ್ಲಿ ರಾಫ್ಟಿಂಗ್ ಸಾಹಸಿಗರು ವಿಸ್ಮಯ ಮೂಡಿಸುತ್ತಾರೆ.

ಹಿಮ ಹೊದ್ದ ಗಿರಿಶ್ರೇಣಿ, ದೇವದಾರು ಮತ್ತು ಪೈನ್ ವೃಕ್ಷಗಳ ದಟ್ಟವಾದ ಅರಣ್ಯ, ಅಲ್ಲಲ್ಲೇ ಹರಿಯುವ ನದಿಗಳ ಜಲಪಾತಗಳು ನಿರಂತರವಾಗಿ ಜೀವಂತವಾಗಿದ್ದು ಆಶ್ಚರ್ಯ ಹುಟ್ಟಿಸುತ್ತವೆ. ಶಿಮ್ಲಾ ಗಿರಿಧಾಮವಾಗಿಯೂ ಪ್ರಸಿದ್ಧವಾಗಿದೆ. ಅಪರೂಪದ ನಿಸರ್ಗ ಸೌಂದರ್ಯ, ಹಿಮ ಆವರಿಸಿದ ಗಿರಿಶಿಖರಗಳು, ಹಲವಾರು ಸಾಹಸ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಸೌಲಭ್ಯಗಳು ಪ್ರವಾಸಿಗರ ಮನ ಸೂರೆಗೊಳ್ಳುತ್ತವೆ. ಶಿಮ್ಲಾ ಭೂಮಿಯ ಮೇಲಿನ ಸ್ವರ್ಗ ಎಂಬುದರಲ್ಲಿ ಸಂದೇಹವಿಲ್ಲ.

"ಕುರ್ಫಿ ಪಾಯಿಂಟ್" ನಿಂದ ಶಿಮ್ಲಾಕ್ಕೆ ಬಸ್ ವಾಪಸ್ ಹೊರಟು ೧ ಕಿ.ಮೀ. ಮುಂದೆ ಬಂದಾಗ ಇದ್ದಕ್ಕಿದ್ದಂತೆ ಹಿಮವರ್ಷ ಪ್ರಾರಂಭವಾಯಿತು. ಐದು ನಿಮಿಷಗಳಲ್ಲಿ ಸುತ್ತಲ ಗಿಡಮರ ಕರಿಯ ಡಾಂಬರು ರಸ್ತೆ ತುಂಬಾ ಮಲ್ಲಿಗೆ ಹೂ ಸುರಿದಂತೆ ಹಿಮದ ತುಣುಕುಗಳು ಸುಮಾರು ಮೂರು ಇಂಚು ದಪ್ಪಗೆ ಬಿದ್ದವು. ಹಿಮವರ್ಷ ನಿಂತ ನಂತರ ಶಿಮ್ಲಾದ ಪ್ರಸಿದ್ಧ ಮಾರುಕಟ್ಟೆ ಮಾಲ್ ಬಜಾರಿಗೆ ಬಂದೆವು. ಇಲ್ಲಿ ಸುಂದರವಾದ ಮರದ ಕೆತ್ತನೆಯ ಬ್ರಿಟಿಷ್ ವಾಸ್ತುಶೈಲಿಯ ಕಟ್ಟಡಗಳು ಮತ್ತು ಇತ್ತೀಚಿನ ಕಾಂಕ್ರೀಟ್ ಕಟ್ಟಡಗಳೂ ಇವೆ. ಪ್ರತಿ ದಿನ ಸಹಸ್ರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಎಲ್ಲಿಯೂ ಕಸಕಡ್ಡಿಗಳಿಲ್ಲ. ರಸ್ತೆಗಳೂ ಸ್ವಚ್ಛ ಸುಂದರವಾಗಿವೆ. ಇಲ್ಲಿ ಅಪರೂಪದ ಉಲ್ಲನ್ ಬಟ್ಟೆಯ ನೂರಾರು ದೊಡ್ಡ ದೊಡ್ಡ ಮಾರಾಟ ಮಳಿಗೆಗಳಿವೆ. ಈ ರೋಡಿನಲ್ಲಿ ವಾಹನ ಪ್ರವೇಶ ನಿಷಿದ್ಧವಾಗಿದೆ.



ಮುಂದೆ ನಾವು ಚತುರ್ಧಾಮಗಳಲ್ಲೊಂದಾದ ಹಿಮಾಲಯ ಕ್ಷೇತ್ರಬದರಿಗೆ ಸಾಗಿದೆವು. ಹಿಮಾಲಯದ ನಿವಾಸಿಗಳು ಉಪ್ಪು ಮತ್ತು ದೀಪದ ಎಣ್ಣೆಗಾಗಿ ಮಾತ್ರ ನಾಗರೀಕ ಜಗತ್ತನ್ನು ಅವಲಂಬಿಸುತ್ತಾರೆ. ಪರ್ವತಗಳ ಇಳಿಜಾರಿನಲ್ಲಿ ಕಡಿದು ಮಟ್ಟ ಮಾಡಿದ ಅಲ್ಪ ಸ್ವಲ್ಪ ಪ್ರದೇಶದಲ್ಲಿ ಬೇಸಾಯ ಮಾಡಿ, ಬಾರ್ಲಿ, ಗೋಧಿ ಬೆಳೆಯುತ್ತಾರೆ. ಎಮ್ಮೆ, ಕುರಿ, ಮೇಕೆ, ಹಸು, ಗಿಡ್ಡ ತಳಿಯ ಕುದುರೆಗಳನ್ನು ಸಾಕುತ್ತಾರೆ. ಇಲ್ಲಿನ ಜನ ಬಡವರಾದರೂ ಬಹುಪಾಲು ಪ್ರಾಮಾಣಿಕರು, ಕಳ್ಳತನ, ಹೊಡೆದಾಟ, ಕೋಮು ಗಲಭೆಗಳು ಇಲ್ಲಿ ಇಲ್ಲ. ಉನ್ನತ ಪರ್ವತಪ್ರದೇಶಗಳಿರುವ ಪುಣ್ಯ ಕ್ಷೇತ್ರಗಳಿಗೆ ನಿರ್ಭಯವಾಗಿ ಹೋಗಿ ಬರಬಹುದು. ನಮ್ಮ ಅಗತ್ಯಗಳು ಕಡಿಮೆ ಇರುವಾಗ ಬೇರೆಯವರ ವಸ್ತುಗಳು ನಮಗೇಕೆ ಎಂಬ ಮನೋಭಾವ ಹಿಮಾಲಯ ನಿವಾಸಿಗಳದ್ದು. ಅವರ ಸಾಹಸಮಯವಾದ ಜೀವನ ನಮ್ಮನ್ನು ದಂಗುಬಡಿಸುತ್ತದೆ. ಇಲ್ಲಿನ ಪ್ರವಾಸೀ ತಾಣಗಳು ವರ್ಷದಲ್ಲಿ ೬ ತಿಂಗಳು ಅಂದರೆ ಮೇ ತಿಂಗಳಿನಿಂದ ಅಕ್ಟೋಬರ್ ವರೆಗೆ ಪ್ರವಾಸಿಗರಿಂದ ತುಂಬಿರುತ್ತವೆ. ಆಗ ಇಲ್ಲಿನ ಜನರು ಚಟುವಟಿಕೆಯಿಂದ ಕೂಡಿರುತ್ತಾರೆ. ಬೆಟ್ಟಗಳ ಇಳಿಜಾರಿನಲ್ಲಿ ಸ್ವಲ್ಪ ಸಮತಟ್ಟಾದ ಪ್ರದೇಶವಿದ್ದರೂ ಸಾಕು ಅಲ್ಲಿಯೇ ಕಷ್ಟ ಪಟ್ಟು ಬದುಗಳನ್ನು ಹಾಕಿ, ಬಾರ್ಲಿ, ಗೋಧಿ, ಜೋಳ, ಆಲೂಗಡ್ಡೆ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ವಾಹನಗಳ ರಸ್ತೆಗಳಿಂದ ದೂರ ಇರುವವರು ಹಿಮ - ಚಳಿಯಿಂದ ರಕ್ಷಿಸಿಕೊಳ್ಳಲು ಸಣ್ಣ - ಪುಟ್ಟ ಗುಡಿಸಲುಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಅಷ್ಟೇನೂ ಎತ್ತರವಿಲ್ಲದ ಇಲ್ಲಿನ ನಿವಾಸಿಗಳು ಶ್ರಮಜೀವಿಗಳು,ಇವರು “ಕಾಯಕವೇ ಕೈಲಾಸ" ಎಂಬ ಮಾತಿಗೆ ಸಾಕ್ಷಿಯಾಗಿದ್ದಾರೆ. ತಮಗೆ ಬೇಕಾದ ವಸ್ತುಗಳನ್ನು ಬಹುಪಾಲು ತಾವೇ ತಯಾರಿಸಿಕೊಳ್ಳುತ್ತಾರೆ. ಉಪಕಸುಬಾಗಿ ಚಾಪೆ ಹೆಣೆಯುತ್ತಾರೆ, ಪ್ರವಾಸಿಗರಿಗೆ ಬೇಕಾದ ಆಟಿಕೆಗಳನ್ನು

ತಯಾರಿಸುತ್ತಾರೆ. ಕಾಲುನಡಿಗೆಯಲ್ಲಿ ಸಂಚರಿಸುವ ಚಾರಣಿಗರಿಗೆ, ಸಾಧು ಸಂತರಿಗೆ ತಮ್ಮಲ್ಲಿರುವುದನ್ನೇ ಕೊಟ್ಟು ಹಂಚಿಕೊಂಡು ನೆಮ್ಮದಿ ಕಂಡುಕೊಳ್ಳುತ್ತಾರೆ. ವಿದ್ಯೆ ಪಡೆಯುವ ಅವಕಾಶ ಕಡಿಮೆಯಾದರೂ ವ್ಯವಹಾರ ನಿಪುಣರು, ಪ್ರಾಮಾಣಿಕರು. ಕಠಿಣ ದುಡಿಮೆ ನಡೆಸುವವರು. ಅಲ್ಲಿನ ಪುರುಷರು ಕುದುರೆಗಳನ್ನು, ಹೇಸರಗತ್ತೆಗಳನ್ನು ಇಟ್ಟುಕೊಂಡು ಪ್ರವಾಸಿಗರನ್ನು ಕಡಿದಾದ ಬೆಟ್ಟದ ದಾರಿಯಲ್ಲಿ ಕರೆದೊಯ್ದು ಸಂಪಾದನೆ ಮಾಡುತ್ತಾರೆ. ಯಾತ್ರಾಸ್ಥಳಗಳು ಹಿಮಾವೃತವಾಗುವ ಮೊದಲು ಮುಂದಿನ ಆರು ತಿಂಗಳಿಗೆ ಬೇಕಾದ ಹಣ, ವಸ್ತುಗಳನ್ನು ಸಂಗ್ರಹಿಸುತ್ತಾರೆ. ಅಲ್ಲಿನ ಸ್ತ್ರೀಯರು ಕೂಡಾ ಕಷ್ಟ ಜೀವಿಗಳು. ತಲೆಯ ಮೇಲೊಂದು ಹೊರೆ ಹೊತ್ತು ಬೆನ್ನಿನ ಮೇಲೊಂದು ಗಂಟು ಕಟ್ಟಿಕೊಂಡು ಸಾಲಾಗಿ ಸಣ್ಣ ಪುಟ್ಟ ಹೊಲ ಗದ್ದೆಗಳಲ್ಲಿ ಗಂಟೆಗಟ್ಟಲೆ ಶ್ರಮವಹಿಸಿ ದುಡಿಯುತ್ತಾರೆ. ಅನಾದಿ ಕಾಲದಿಂದಲೂ ಭಾರತೀಯ ಸ್ತ್ರೀ ತ್ಯಾಗ, ಸೇವಾಭಾವನೆ, ಕಷ್ಟ ಸಹಿಷ್ಣುತೆಗೆ ಸಾಕ್ಷಿಯಲ್ಲವೇ?

ಸಂಜೆ ೫.೩೦ ರ ಹೊತ್ತಿಗೆ ಏರುದಾರಿ ಮುಗಿದು ವಿಶಾಲವಾದ ಬಯಲು ಪ್ರದೇಶ "ಬದರಿ ವಿಶಾಲ್" ತಲುಪಿದಾಗ ಹಿಮಮಳೆ ಸುರಿಯುತ್ತಿತ್ತು. ದೂರದಿಂದಲೇ ಎತ್ತರ ಪ್ರದೇಶದಲ್ಲಿ ಬಾವುಟ ಹೊತ್ತು ನಿಂತ ಬದರಿನಾಥ ದೇವಾಲಯ ಕಾಣುತ್ತದೆ. ಎದುರಿಗೆ ಹರಿಯುವ ನದಿ, ತಪ್ತಕುಂಡದಿಂದ ಏಳುವ ಬಿಸಿ ನೀರ ಹೊಗೆ, ಮೇಲಿನಿಂದ ಬೀಳುವ ಮಂಜು, ಹಿನ್ನೆಲೆಯಲ್ಲಿ ಬೆಳ್ಳಿ ಬೆಟ್ಟಗಳ ಸಾಲು ಇವುಗಳ ವೈಭವ ವರ್ಣಿಸಲಸದಳ. ಮಾರ್ಗದರ್ಶಕ ನಮಗೆ ವಸತಿ ವ್ಯವಸ್ಥೆ ಮಾಡಿ ನಮ್ಮನ್ನು ಅಲ್ಲಿಗೆ ಲಗೇಜು ಸಮೇತ ಕರೆದೊಯ್ದನು.

ನಾವು ಬೆಳಿಗ್ಗೆ ಸುಪ್ರಭಾತದ ದನಿ ಕೇಳುತ್ತಲೇ ಎದ್ದೆವು. ದಾರಿಯಲ್ಲಿ ಬಿಸಿ ಕಾಫಿ ಕುಡಿದು ಚಳಿಗಾಳಿ ಜೋರಾಗಿ ಬೀಸುತ್ತಿದ್ದರೂ ಬಿಸಿನೀರಿನ ಕುಂಡಗಳಿರುವ ಜಾಗ ತಲುಪಿದೆವು. ಭೋರ್ಗರೆಯುತ್ತಾ ಹರಿಯುವ ಅಲಕನಂದಾ ನದಿ, ಹಿನ್ನೆಲೆಯಲ್ಲಿ ಬದರಿನಾಥ ದೇವಾಲಯ, ಮಧ್ಯದಲ್ಲಿ ಬೆಟ್ಟದ ಬಸಿರಿನಿಂದ ಬುಸುಗುಟ್ಟುತ್ತಾ ಬರುತ್ತಿರುವ ಬಿಸಿನೀರ ಬುಗ್ಗೆಗಳು, ಮೈಕೊರೆಯುವ ಚಳಿ, ಹಿಮವರ್ಷದಲ್ಲೂ ತಪ್ತಕುಂಡದಿಂದ ಬರುವ ನೀರಿನ ಬಿಸಿ ಆವಿಯಾಗಿ ಹೊಗೆಯಾಗಿ, ಮೇಲೇರುತ್ತದೆ. ಉಪ್ಪು,ಗಂಧಕ ಬೆರೆತಿರುವ ತಪ್ತಕುಂಡದ ನೀರನ್ನು ಕುಡಿಯಲು ಆಗುವುದಿಲ್ಲ. ಆದರೆ ಚರ್ಮವ್ಯಾಧಿ ಇರುವವರಿಗೆ ಒಳ್ಳೆಯದೆಂದು ಹೇಳುತ್ತಾರೆ.

ಸೂರ್ಯಕುಂಡ ಮತ್ತು ತಪ್ತಕುಂಡಗಳು ಸಾಕಷ್ಟು ದೊಡ್ಡದಾಗಿವೆ. ಎದೆ ಎತ್ತರಕ್ಕೆ ಸುಮಾರು ೪ ಅಡಿ ಬಿಸಿ ನೀರಿರುವ ಕೊಳಗಳಲ್ಲಿ ಸ್ನಾನ ಮಾಡುವುದು ಒಂದು ಹಿತವಾದ ಅನುಭವ. ಎಷ್ಟು ಹೊತ್ತು ಮಿಂದರೂ ಹೊರಬರಲು ಮನಸ್ಸು ಒಪ್ಪುವುದಿಲ್ಲ. ಬದರಿಯಲ್ಲಿ ಜನವಸತಿಗೆ ಕಾರಣ ಈ ತಪ್ತಕುಂಡಗಳೇ ಎನ್ನಬಹುದು. ದೂರದಿಂದ ಪ್ರಯಾಸಪಟ್ಟು ಬದರಿ ಕ್ಷೇತ್ರಕ್ಕೆ ಬರುವ ಭಕ್ತರಿಗೆ ಗಡಗಡ ನಡುಗಿಸುವ ಚಳಿಯಲ್ಲಿ ಬಿಸಿನೀರಿನ ಸ್ನಾನದ ಸುಖ ನೀಡುವ ಪ್ರಕೃತಿಯ ನಿಗೂಢತೆಗೆ, ವಿಸ್ಮಯಕ್ಕೆ ಶರಣಾಗಲೇಬೇಕು. ಪ್ರಯಾಣದ ಆಯಾಸವನ್ನೆಲ್ಲಾ ಪರಿಹರಿಸುವ ಬಿಸಿನೀರ ಸ್ನಾನ ಜೀವಮಾನವೆಲ್ಲಾ ನೆನಪಿರುವಂತಹುದು.

## ಲೇಖಕರ ಪರಿಚಯ



ಜಯದೇವಪ್ಪ ಜೈನಕೇರಿ ೨೭.೧೨.೧೯೩೯ ರಂದು ಶಿರಾಳಕೊಪ್ಪದಲ್ಲಿ ಜನಿಸಿದರು. ಕೃಷಿ, ವ್ಯಾಪಾರ, ಕೈಗಾರಿಕೆ ಮುಖ್ಯವೃತ್ತಿಯಾದರೂ ಐತಿಹಾಸಿಕ ಸಂಶೋಧನೆ, ಪ್ರಾಚೀನ ಕವಿಕಾವ್ಯ ಇತ್ಯಾದಿ ಲೇಖನಗಳಿಂದ ಕನ್ನಡ ಸಾಹಿತ್ಯಲೋಕದಲ್ಲಿ ಅವರು ಚಿರಪರಿಚಿತರು. ಸಂಸ್ಕೃತಿ - ಸೌರಭ, ಕವಿ - ಕಾವ್ಯಸಿಂಚನ, ಪ್ರವಾಸ ಸಂಪದ, ಕರ್ನಾಟಕ ಶಿಲ್ಪಸಂಸ್ಕೃತಿ ಇತ್ಯಾದಿ ಹದಿನೈದಕ್ಕಿಂತಲೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ. ಅವರ 'ಕವಿ - ಕಾವ್ಯ ಸಿಂಚನ' ಗ್ರಂಥಕ್ಕೆ ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷ್ಠಾನವು 'ರನ್ನ ಸಾಹಿತ್ಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಈ ಪಾಠಭಾಗವನ್ನು ಅವರ 'ಸಂಜನ ದರುಶನ' ಎಂಬ ಪ್ರವಾಸ ಕಥನದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ರಾಕ್ ಆರ್ಟ್ ಮ್ಯೂಸಿಯಂ ನ ವೈಶಿಷ್ಟ್ಯವೇನು?
2. ಶಿಮ್ಲಾದ ಜನರ ಕುರಿತು ಲೇಖಕರ ಅಭಿಪ್ರಾಯವೇನು?
3. ಪ್ರವಾಸೋದ್ಯಮಕ್ಕೆ ಎಲ್ಲ ರೀತಿಯಿಂದಲೂ ಉತ್ತಮ ಸ್ಥಳ ಶಿಮ್ಲಾ ಎಂದು ಲೇಖಕರು ಹೇಳಲು ಕಾರಣವೇನು?
4. 'ಕಾಯಕವೇ ಕೈಲಾಸ' ಎಂಬ ಮಾತು ಬದರಿಯ ನಿವಾಸಿಗಳಿಗೆ ಹೇಗೆ ಅನ್ವಯಿಸುತ್ತದೆ?

## ಲೇಖನ ಬರೆಯಿರಿ

'ಶಿಮ್ಲಾ ಭೂಮಿಯ ಮೇಲಿನ ಸ್ವರ್ಗ ಎಂಬುದರಲ್ಲಿ ಸಂದೇಹವಿಲ್ಲ' ಲೇಖಕರ ಈ ಮಾತನ್ನು 'ಭೂಲೋಕದ ಅಮರಾವತಿ ಶಿಮ್ಲಾ' ಪಾಠದ ಆಧಾರದಲ್ಲಿ ಸಮರ್ಥಿಸಿ ಲೇಖನ ಬರೆಯಿರಿ.

## ಕರಪತ್ರ ತಯಾರಿಸಿರಿ

ನಿಮ್ಮ ಸಮೀಪದ ಪ್ರವಾಸೀ ತಾಣವನ್ನು ಶುಚಿಯಾಗಿಡುವಂತೆ ಜಾಗೃತಿ ಮೂಡಿಸಲು ಒಂದು ಕರಪತ್ರವನ್ನು ತಯಾರಿಸಿರಿ.

## ಕಿರುಲೇಖನ

'ಪ್ರವಾಸದಿಂದ ದೊರೆಯುವ ಪ್ರಯೋಜನಗಳು' ಎನ್ನುವ ವಿಚಾರದ ಕುರಿತು ಪತ್ರಿಕೆಗೆ ಕಳುಹಿಸಲು ಒಂದು ಕಿರುಲೇಖನ ಬರೆಯಿರಿ.

## ಪತ್ರ ಬರೆಯಿರಿ

ನೀವು ನೋಡಿದ ಯಾವುದಾದರೂ ಪ್ರೇಕ್ಷಣೀಯ ಸ್ಥಳವನ್ನು ವರ್ಣಿಸಿ ಗೆಳೆಯ / ಗೆಳತಿಗೆ ಪತ್ರ ಬರೆಯಿರಿ.

## ಲೇಖನ ಚಿಹ್ನೆಗಳನ್ನು ಬಳಸಿರಿ

ಕೆಳಗೆ ಕೊಡಲಾದ ಗದ್ಯಭಾಗದಲ್ಲಿ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬಳಸಿ ಗದ್ಯ ಭಾಗವನ್ನು ಪುನಃ ಬರೆಯಿರಿ.

ದೇಶ ಸುತ್ತು ಕೋಶ ಓದು ಎನ್ನುವ ಗಾದೆಮಾತನ್ನು ಕೇಳಿದ್ದೀರಲ್ಲವೇ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳುವುದು ಒಂದು ಕಲೆ ಪ್ರವಾಸದಿಂದ ಜ್ಞಾನ ಮನೋರಂಜನೆ ಸಂತೋಷ ಲಭಿಸುತ್ತದೆ

## ಸಂಯುಕ್ತ ವಾಕ್ಯ ರಚಿಸಿರಿ

ಕೆಳಗೆ ಕೊಟ್ಟಿರುವ ಮಾದರಿಯಂತೆ ಪಾಠಭಾಗದಲ್ಲಿ ಬಂದಿರುವ ಸರಳ ವಾಕ್ಯಗಳನ್ನು ಗುರುತಿಸಿ ಸಂಯುಕ್ತ ವಾಕ್ಯವಾಗಿ ಬರೆಯಿರಿ.

ಬದರಿನಾಥ ದೇವಾಲಯದ ಹಿಂಭಾಗದಲ್ಲಿ ನೀಲಕಂಠ ಪರ್ವತವಿದೆ. ಅದರ ಎಡ, ಬಲಗಳಲ್ಲಿ ನರನಾರಾಯಣ ಪರ್ವತಗಳಿವೆ.

ಬದರಿನಾಥ ದೇವಾಲಯದ ಹಿಂಭಾಗದಲ್ಲಿರುವ ನೀಲಕಂಠ ಪರ್ವತದ ಎಡಬಲಗಳಲ್ಲಿ ನರನಾರಾಯಣ ಪರ್ವತಗಳಿವೆ.

## ಸಂವಾದಿ ಪದಗಳ ಪಟ್ಟಿ ರಚಿಸಿರಿ

ಪಾಠಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಗುರುತಿಸಿ ಅವುಗಳಿಗೆ ಸಂವಾದಿಯಾದ ಕನ್ನಡ ಪದಗಳನ್ನು ಬರೆಯಿರಿ.

## ಸ್ಥಳ ಪರಿಚಯ ಸಂಚಿಕೆ ತಯಾರಿಸಿರಿ

ನಿಮ್ಮೂರಿನ ಯಾವುದಾದರೂ ಪ್ರೇಕ್ಷಣೀಯ ಸ್ಥಳದ ಕುರಿತು ಸ್ಥಳ ಪರಿಚಯ ಬರೆಯಿರಿ. ಇವುಗಳನ್ನು ಒಟ್ಟುಗೂಡಿಸಿ ಒಂದು ಸಂಚಿಕೆ ತಯಾರಿಸಿರಿ.

## ಮಾಹಿತಿ ತಂತ್ರಜ್ಞಾನ ಬಳಸಿರಿ

ಪಾಠಭಾಗದಲ್ಲಿ ಬಂದ ಪ್ರೇಕ್ಷಣೀಯ ಸ್ಥಳಗಳನ್ನು ಮಾಹಿತಿ ತಂತ್ರಜ್ಞಾನದ ಸಹಾಯದಿಂದ ವೀಕ್ಷಿಸಿರಿ.

## ವರ್ಣನೆ ಬರೆಯಿರಿ

ಕೆಳಗಿನ ಕವನದಲ್ಲಿ ವರ್ಣಿತವಾಗಿರುವ ಶಿಮ್ಲಾದ ಸೊಬಗನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

### ರಾತ್ರಿಯಲ್ಲಿ ಸಿಮ್ಲಾ

ಚಂದ್ರಮನನ್ನು ಕವಿದ
ಮಂಜಿನ ಮಾಯೆಯಲ್ಲಿ
ಬೆಳದಿಂಗಳೂ ಮಂಜುಮಂಜು
ಗುಂಜುಗುಂಜಾಗಿದೆ. ಇರಲೇನು? ಹರವಿದ ಬೆಟ್ಟದ
ಮೈಮೇಲೆ ಅಡಿಯಿಂದ
ಮುಡಿವರೆಗೆ ಹಂತಹಂತವಾಗಿ
ತೇಜ ಪುಂಜವಾದ ಸಿಮ್ಲಾ
ರಾಜಶೀವಿಯಲ್ಲೊರಗಿಕೊಂಡಿದೆ.
ವಿದ್ಯುದ್ದೀಪಗಳೆಲ್ಲ ಕೆಂಪು ಹಳದಿ
ಹಸಿರು ಬಿಳಿ ಇಳಿದು ಬಂದ ನಕ್ಷತ್ರ
ಮಾಲೆಯಂತೆ ರಾರಾಜಿಸಿದೆ

ಏನೆಲ್ಲ ಸುಂದರವಾಗಿದೆ.
ಆದರೊಮ್ಮೆ ತಂತಿಪ್ರವಾಹ
ಎಲ್ಲೋ ಒಂದೆಡೆಗೆ ಫ್ಯೂಜ್
ಆಗಿಬಿಟ್ಟರೆ ಮಂಜುಗಡಲಿನಲ್ಲಿ
ಸಿಮ್ಲಾ ಮಾಯವಾಗಿ
ಬಿಡುತ್ತದೆ ! ಚಂದ್ರನಿಗೆ
ಅಮಾವಾಸ್ಯವಿರಬಹುದು.
ಶುಕ್ಲ-ಕೃಷ್ಣ ಪಕ್ಷಗಳಿರಬಹುದು.
ಉದಯಾಸ್ತಗ್ರಹಣಗಳಿರಬಹುದು.

ಕೊನೆಗೊಮ್ಮೆ ನಿಶ್ಚಂದ್ರಾವಸ್ಥೆ ಸಹ.
ಆದರೆ ಮನವನ್ನು
ಸೌಂದರ್ಯಸಮಾಧಿಗೊಯ್ದು
ಒಮ್ಮೆಲೆ ಅವನ್ನು ಕೈಬಿಡುವ
ಆಕಸ್ಮಿಕ ಫ್ಯೂಜ್ ಇಲ್ಲ !

**ವಿ.ಕೃ.ಗೋಕಾಕ್**
(ಪ್ರವಾಸ ಸಾಹಿತ್ಯ ಕೃತಿಯಿಂದ)

# 2. ಸಾಮರಸ್ಯದ ಬೆಳಕು



ಸ್ತ್ರೀ ಪುರುಷರಿಬ್ಬರು ಒಂದು ರಥದ ಎರಡು ಚಕ್ರಗಳಿದ್ದಂತೆ. ಸ್ವಾರ್ಥವಿಲ್ಲದೆ ಸಂಸಾರ ಸಾಗರದಲ್ಲಿ ಈಜಾಡಿ ಯಶಸ್ಸಿನ ಪಥ ತೋರಿಸುವ ಶಕ್ತಿ ಸ್ತ್ರೀ. ಹೆಣ್ಣು ಎಂದರೆ ಮಮತಾಮಯಿ, ತ್ಯಾಗಮಯಿ, ಸಹನಾ ಮೂರ್ತಿ. ಆದ್ದರಿಂದ ಸ್ತ್ರೀಪುರುಷರಿಬ್ಬರೂ ಸಮಾನ ಅವಕಾಶಗಳಿಗೆ ಅರ್ಹರಾದಾಗ ಮಾತ್ರ ದೇಶವು ಅಭಿವೃದ್ಧಿ ಹೊಂದಲು ಸಾಧ್ಯ. ಒಟ್ಟಿನಲ್ಲಿ ಸಾಮರಸ್ಯದ ಬದುಕು ನಮ್ಮದಾಗಬೇಕು.

ಘಟಕದ ಆರಂಭದಲ್ಲಿ ತೃತೀಯ ಲಿಂಗಿಗಳು ಸಮಾಜದ ಮುಖ್ಯವಾಹಿನಿಗೆ ಬರಬೇಕು ಮತ್ತು ಅವರನ್ನು ಸಮಾನ ಮನೋಭಾವದಿಂದ ಕಾಣಬೇಕು ಎಂಬ ಆಶಯದೊಂದಿಗೆ ಆ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಾನವಿ ಬಂದೋಪಾಧ್ಯಾಯ ಅವರ ಆತ್ಮಕಥೆಯ ಭಾಗವೊಂದನ್ನು ನೀಡಲಾಗಿದೆ. 'ನಿತ್ಯೋತ್ಸವ ಕವಿ' ಎಂದೇ ಖ್ಯಾತರಾದ ಕವಿ ಕೆ.ಎಸ್. ನಿಸಾರ್ ಅಹಮದ್ ರವರು ಲಿಂಗ ತಾರತಮ್ಯವನ್ನು ತೊಡೆದು, ಜಾತಿ ಮತಗಳ ಗೋಡೆಯನ್ನು ಕೆಡವಿ ಸಾಮರಸ್ಯದ ಬದುಕನ್ನು ಕಟ್ಟಬೇಕೆಂದು 'ಹಾಡು ಕವಿಯೆ, ಹಾಡು' ಎನ್ನುವ ಕವನದ ಮೂಲಕ ಸಮಾಜಕ್ಕೆ ಕರೆ ನೀಡಿದ್ದಾರೆ. 'ಪೊಲೀಸ್ ಪುಟ್ಟಮ್ಮ' ಕಥೆಯಲ್ಲಿ ಕನ್ನಡದ ಖ್ಯಾತ ಬರಹಗಾರರಾದ ಎಂ.ಕೆ. ಇಂದಿರಾರವರು ಪುಟ್ಟಮ್ಮನ ಧೈರ್ಯ ಸಾಹಸವನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ.









* ಮೇಲಿನ ಚಿತ್ರಗಳನ್ನು ಗಮನಿಸಿರಿ. ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

# ಗಂಡು ಜೀವ, ಹೆಣ್ಣು ಭಾವ

ನಾನು ಉಳಿದವರಿಗಿಂತ ಸ್ವಲ್ಪ ಭಿನ್ನವಾಗಿದ್ದೇನೆ ಎನ್ನುವ ತಿಳುವಳಿಕೆ ನನಗೆ ಯಾವಾಗ ಬಂತೆನ್ನುವುದು ನಿಖರವಾಗಿ ಗೊತ್ತಿಲ್ಲ. ಇದು ಸ್ವತಃ ನನಗೆ ಮೊದಲು ಗೊತ್ತಾಯಿತೋ ಅಥವಾ ನನ್ನ ಸುತ್ತಮುತ್ತ ಇದ್ದ ಜನರು ಪತ್ತೆ ಹಚ್ಚಿದರೋ ಎನ್ನುವುದು ಕೂಡ ನನಗೆ ಸ್ಪಷ್ಟವಾಗಿ ತಿಳಿಯದು. ಆದರೆ, ಈಗ ಪ್ರತಿದಿನ ಬೆಳಗ್ಗೆ ಎದ್ದ ಕೂಡಲೇ ನನಗೆ, 'ಈ ಪ್ರಪಂಚದಲ್ಲಿರುವ ಹೆಚ್ಚಿನ ಜನರಿಗಿಂತ ನಾನು ಬೇರೆ' ಎನ್ನುವ ಭಾವನೆ ಬರುತ್ತದೆ. ಇದೇನೇ ಇರಲಿ, ಬಾಲ್ಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನನಗಿರುವ ನೆನಪುಗಳೆಲ್ಲವೂ 'ನಾನೊಬ್ಬ ಹುಡುಗನಾಗಿದ್ದ' ದಿನಗಳಿಗೆ ಸಂಬಂಧಿಸಿವೆ.

ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿರುವ ಚಂದ್ರನಾಗೂರಿನಲ್ಲಿ ನಾನು ೧೯೬೪ ರ ಸೆಪ್ಟೆಂಬರ್ ೨೩ ರಂದು ನಮ್ಮ ತಾಯಿಯ ತವರುಮನೆಯಲ್ಲಿ ಹುಟ್ಟಿದೆ. ಅವತ್ತು ನಮ್ಮ ತಂದೆ ಚಿತ್ತರಂಜನ್ ಬಂದೋಪಾಧ್ಯಾಯ ಅವರು ಹೆಮ್ಮೆಯಿಂದ ಬೀಗಿದರಂತೆ. ಏಕೆಂದರೆ, ನಮ್ಮ ತಂದೆ ತಾಯಿಗೆ ನನಗಿಂತಲೂ ಮೊದಲು ಇಬ್ಬರು ಹೆಣ್ಣು ಮಕ್ಕಳಾಗಿದ್ದರು. ಹೀಗಾಗಿ, ಮೂರನೆಯವನಾದ ನಾನು ಗಂಡು ಮಗುವಾಗಿದ್ದನ್ನು ಕಂಡು ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ.

ನಾನು ಗಂಡಾಗಿ ಹುಟ್ಟಿದ್ದರೂ ಅಂತರಂಗದ ಭಾವನೆಗಳ ದೃಷ್ಟಿಯಿಂದ ನೋಡಿದರೆ ನಾನೊಂದು ಹೆಣ್ಣು ಎಂದು ನನಗೆ ದೃಢವಾಗಿತ್ತು. 'ನಾನು ಹೆಣ್ತನದ ಲಕ್ಷಣಗಳುಳ್ಳ ಮನುಷ್ಯನಾಗಿದ್ದರೂ ಸುತ್ತಲಿನ ಪ್ರಪಂಚವೇಕೆ ನನ್ನನ್ನು ಗಂಡಸೆಂದೇ ತಿಳಿದುಕೊಂಡಿದೆ?' ಎನ್ನುವಂತಹ ಪ್ರಶ್ನೆಗಳು ನನ್ನನ್ನು ಕಾಡುತ್ತಿದ್ದವು. ನಾನು ನಿಜಕ್ಕೂ ಏನೆಂದು ತಿಳಿದುಕೊಳ್ಳಲು ಗಂಟೆಗಟ್ಟಲೆ ಕನ್ನಡಿಯ ಮುಂದೆ ನಿಂತುಕೊಂಡು, ನನ್ನನ್ನು ನಾನು ನೋಡಿಕೊಳ್ಳುತ್ತಿದ್ದೆ.



ಆದರೆ ಅಲ್ಲಿ ನನಗೆ ಗಂಡಸಿನ ಆಕಾರ ಕಾಣುತ್ತಿತ್ತು! ಆಗ'ಖಂಡಿತವಾಗಿಯೂ ಇದು ನಾನಲ್ಲವೇ ಅಲ್ಲ! ನಾನು ನಿಜಕ್ಕೂ ಬೇರೆ!' ಎನ್ನುವ ತೀರ್ಮಾನಕ್ಕೆ ಬರುತ್ತಿದ್ದೆ.

ನಾನು ನನ್ನನ್ನು ನೋಡಿಕೊಂಡಾಗ ನನಗೆ ನನ್ನ ನಿಜವಾದ ಪ್ರತಿಬಿಂಬ ಹೆಣ್ಣಿನಂತೆ ಕಾಣಬೇಕೆಂದು ತಹತಹಿಸುತ್ತ, ಗಂಟೆಗಟ್ಟಲೆ ಕಾಲ ಕಣ್ಣೀರು ಸುರಿಸುತ್ತ ಗೋಳಾಡುತ್ತಿದ್ದೆ. ಹುಟ್ಟಿನಿಂದ ಬಂದಿದ್ದ ಪುರುಷಾಕೃತಿಯನ್ನು ಕಿತ್ತೆಸೆದು, ಅದರಿಂದ ಹೇಗಾದರೂ ಮಾಡಿ ಹೊರಬರಬೇಕೆನ್ನುವ ಕೋಲಾಹಲ ನನ್ನೊಳಗೆ ಒಂದೇ ಸಮನೆ ನಡೆಯುತ್ತಿತ್ತು. ಹೀಗೆಂದುಕೊಂಡು, ಹೆಣ್ಣಿನಂತೆಯೇ ವರ್ತಿಸಲು ಮುಂದಾಗುವುದು ಕೂಡ ನನಗೆ ಅಷ್ಟು ಸುಲಭವಾಗಿರಲಿಲ್ಲ. ಹಾಗೇನಾದರೂ ಮಾಡಿದ್ದರೆ ಸಾರ್ವಜನಿಕವಾಗಿ ಅವಮಾನಕ್ಕೆ ಒಳಗಾಗುತ್ತಿದ್ದೆ. ಅಂದಮಾತ್ರಕ್ಕೆ, ಈಗೇನೂ ಸುತ್ತಲಿನ ಜನ ನನ್ನನ್ನು ಆದರಿಸುತ್ತಿದ್ದರು ಎಂದಲ್ಲ. ಇಂತಹ ಅವಮಾನ, ಲೇವಡಿ, ಬೈಗುಳ, ಅಣಕ ಇವೆಲ್ಲವೂ ನನ್ನ ಬದುಕಿನ ಭಾಗವೇ ಆಗಿಹೋಗಿದ್ದವು.

ನಾನು ಮೇಲ್ನೋಟಕ್ಕೆ ಗಂಡಸಿನಂತೆಯೇ ಕಾಣಿಸಿಕೊಳ್ಳಬೇಕೆಂದು ತೀರ್ಮಾನಿಸಿ ಗಂಡಸಿನಂತೆ ಬಟ್ಟೆ ಧರಿಸಲು ಯೋಚಿಸಿದೆ. ಪ್ಯಾಂಟು ಶರ್ಟು ಹಾಕಿಕೊಳ್ಳುವುದು ನನಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ನಾನು ತುಸು ಗಂಡಸಿನಂತೆ ಕಾಣಿಸಿಕೊಳ್ಳಬೇಕೆಂಬ ಯೋಚನೆಯಿಂದ ಹೆಣ್ಣಿನಂತೆ ಅಲಂಕಾರ ಮಾಡಿಕೊಳ್ಳುವುದನ್ನು ಒಂದಿಷ್ಟು ಕಡಿಮೆ ಮಾಡಲು ಪ್ರಯತ್ನಿಸಿದೆ.

ಆದರೆ ಇಂತಹ ಉಪಾಯಗಳಿಂದ ನನ್ನ ಅಂತರಂಗದಲ್ಲಿ ನಡೆಯುತ್ತಿದ್ದ ಕೋಲಾಹಲವೇನೂ ಕಡಿಮೆಯಾಗಲಿಲ್ಲ.ಆಗ ನಾನು, 'ನಾನೇನಿದ್ದರೂ ಒಂದು ಹೆಣ್ಣೇ! ಏನೇ ಆಗಲಿ, ನಾನು ಈಗಿರುವ ಚಿಪ್ಪಿನೊಳಗಿಂದ ಹೊರಬರಬೇಕು.' ಎಂದು ತೀರ್ಮಾನಿಸಿದೆ. ಇದನ್ನಂತೂ ನಾನು ಒಂದು ಸಂಕಲ್ಪವೆಂದು ಪರಿಗಣಿಸಿದೆನಲ್ಲದೆ, ಈ ಹಾದಿಯಲ್ಲಿ ಬರುವ ಎಲ್ಲಾ ಸವಾಲುಗಳನ್ನೂ ಧೈರ್ಯದಿಂದ ಎದುರಿಸಲು ನಿರ್ಧರಿಸಿದೆ.

ನಾನು ಜಾರ್ ಗ್ರಾಮ್ ನ ಕಾಲೇಜೊಂದರಲ್ಲಿ ಉಪನ್ಯಾಸಕನಾಗಿದ್ದರೂ ಜಾದವ್ ಪುರ ಯೂನಿವರ್ಸಿಟಿ ಮತ್ತು ಕಲ್ಕತ್ತಾದ ಸಂಪರ್ಕವನ್ನು ಬಿಟ್ಟಿರಲಿಲ್ಲ. ಅದರಲ್ಲೂ ಜಾದವ್ ಪುರದ ಕ್ಯಾಂಪಸ್ ಜೊತೆ ಒಡನಾಟ ನನಗೆ ಇಷ್ಟದ ಸಂಗತಿಯಾಗಿತ್ತು. ನಾನು ಬೌದ್ಧಿಕವಾಗಿ ಮಹತ್ವವಾದುದನ್ನು ಸಾಧಿಸಬೇಕೆಂದರೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ಗಾಢವಾಗಿ ಚಿಂತಿಸುವ ಜನರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರಬೇಕು ಎನ್ನುವುದನ್ನು ಅರಿತಿದ್ದೆ. ಬೌದ್ಧಿಕ ಮತ್ತು ಶೈಕ್ಷಣಿಕ ಲೋಕದಲ್ಲಿ ನನ್ನದೇ ಆದ ಛಾಪು ಮೂಡಿಸಬೇಕೆಂದು ನಾನು ಪಿ.ಎಚ್.ಡಿ. ಮಾಡಲು ತೀರ್ಮಾನಿಸಿದೆ. ಇದನ್ನು ತಿಳಿದ ನನ್ನ ಎಂ.ಫಿಲ್ ಮಾರ್ಗದರ್ಶಕರಾದ ಶರ್ಮಿಳಾ ಬಸು ದತ್ತ ಸಂತೋಷಪಟ್ಟರು. ಆದರೆ ಪಿ.ಎಚ್.ಡಿ. ಅಧ್ಯಯನಕ್ಕೆ ಮತ್ತೊಬ್ಬ ಮಾರ್ಗದರ್ಶಕರು ಬೇಕಾಗಿದ್ದರು. ಇದಕ್ಕಾಗಿ ನಾನು, ಬಂಗಾಳದ ಮತ್ತೊಬ್ಬರು ಪ್ರಸಿದ್ಧ ಲೇಖಕಿಯಾದ ನವನೀತಾ ದೇವ್ ಸೇನ್ ಅವರನ್ನು ಆರಿಸಿಕೊಂಡೆ.



ನವನೀತಾ ದೇವ್ ಅವರು ಒಳ್ಳೆಯ ಪಾಂಡಿತ್ಯವನ್ನು ಹೊಂದಿರುವ ಲೇಖಕಿ. ಅವರು ನನ್ನ ಬಗ್ಗೆಯೂ ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದರು. ಅವರಿಗೆ, ನಾನು ಎದುರಿಸುತ್ತಿದ್ದ ಸಮಸ್ಯೆಗಳ ಬಗ್ಗೆ ಅರಿವಿತ್ತು. ಹೀಗಾಗಿ ನಾನು ಅವರನ್ನು ಮೊಟ್ಟಮೊದಲ ಬಾರಿಗೆ ಭೇಟಿ ಮಾಡಿದಾಗ ಸಹಜವಾಗಿ ಅವರಿಗೆ ತುಂಬಾ ಸಂತೋಷವಾಯಿತು. ಅವರು, 'ಸೋಮೂ, ನೀನು ಟ್ರಾನ್ಸ್‌ಜೆಂಡರ್ ಗಳಿಗೆ ಸಂಬಂಧಿಸಿದ ವಿಷಯಗಳು ಮತ್ತು ಆ ಸಮುದಾಯದಲ್ಲಿರುವ ಪ್ರವೃತ್ತಿಗಳ ಬಗ್ಗೆ ಪಿ.ಎಚ್.ಡಿ., ಮಾಡು' ಎಂದರು.

ನವನೀತಾ ದೇವ್ ಅವರು ಈ ವಿಚಾರವನ್ನು ಪ್ರಸ್ತಾಪಿಸುತ್ತಿದ್ದಂತೆಯೇ ನಾನು ಟ್ರಾನ್ಸ್ ಜೆಂಡರ್ ಗಳ ಬಗ್ಗೆಯೇ ಪಿ.ಎಚ್.ಡಿ. ಅಧ್ಯಯನ ನಡೆಸಲು ಒಪ್ಪಿಕೊಂಡೆ. ಇಂತಹ ಒಂದು ಅದ್ಭುತವಾದ ವಿಷಯವನ್ನು ಸೂಚಿಸಿದ್ದಕ್ಕಾಗಿ ಧನ್ಯವಾದಗಳನ್ನೂ ಸಮರ್ಪಿಸಿದೆ. ಟ್ರಾನ್ಸ್‌ಜೆಂಡರ್ ಗಳ ಬಗ್ಗೆ ಪಿ.ಎಚ್.ಡಿ. ಮಾಡಬಹುದೆಂಬ ವಿಚಾರ ನನಗೂ ನವನೀತಾ ಅವರಿಗೂ ರೋಮಾಂಚನವನ್ನುಂಟು ಮಾಡಿತೆನ್ನುವುದು ನಿಜ. ಆದರೆ ಶರ್ಮಿಳಾ ಅವರಿಗೆ

ಸ್ವಲ್ಪವೂ ಹಿಡಿಸಲಿಲ್ಲ. ಹೀಗಾಗಿ ಅವರು 'ಸೋಮ್ಯೂ, ಇಂತಹ ವಿಷಯಗಳನ್ನು ಕುರಿತು ನಾನು ಗೈಡ್ ಆಗಿ ಕೆಲಸ ಮಾಡುವುದಿಲ್ಲ. ನೀನು ಬೇರೆ ಯಾರನ್ನಾದರೂ ನೋಡಿಕೊ' ಎಂದರು. ಇದರ ಪರಿಣಾಮವಾಗಿ ನಾನು ಪಿ.ಎಚ್.ಡಿ. ಅಧ್ಯಯನವನ್ನು ತಕ್ಷಣವೇ ಶುರು ಮಾಡಲು ಆಗಲಿಲ್ಲ.

ಪರಿಸ್ಥಿತಿ ಹೀಗಾದಾಗ ನಾನು ಏನಾದರೂ ಒಂದು ಅರ್ಥಪೂರ್ಣ ಕೆಲಸವನ್ನು ಯಾರ ಹಂಗೂ ಇಲ್ಲದೆ ಮಾಡಬೇಕೆನ್ನುವ ನಿರ್ಧಾರಕ್ಕೆ ಬಂದೆ. ಇದ್ಯಾವುದೆಂದರೆ, ಟ್ರಾನ್ಸ್ ಜೆಂಡರ್ ಗಳನ್ನು ಕುರಿತು ಭಾರತದ ಪ್ರಪ್ರಥಮ ನಿಯತಕಾಲಿಕೆಯನ್ನು ನಡೆಸುವ ಕೆಲಸ! ಈ ನಿಯತಕಾಲಿಕಕ್ಕೆ ನಾನು 'ಅಭೋಮಾನವ್' (ಅಪೂರ್ಣ ಮನುಷ್ಯ ಅಥವಾ ಇಂಗ್ಲಿಷ್ ನಲ್ಲಿ ಹೇಳುವುದಾದರೆ 'ಸಬ್ ಹ್ಯೂಮನ್') ಎನ್ನುವ ಹೆಸರನ್ನಿಟ್ಟೆ. ನಾನು ಆರಂಭಿಸಿದ ಈ 'ಅಭೋಮಾನವ್' ಪತ್ರಿಕೆಯು ಟ್ರಾನ್ಸ್ ಜೆಂಡರ್ ಗಳಿಗೆ ಸಂಬಂಧಿಸಿದ ಪ್ರತಿಯೊಂದು ವಿಚಾರವನ್ನು ಪ್ರಕಟಿಸುತ್ತಿತ್ತು. ಅದರಲ್ಲೂ ಮುಖ್ಯವಾಗಿ ಟ್ರಾನ್ಸ್ ಜೆಂಡರ್ ಗಳ ಆರೋಗ್ಯ ಮತ್ತು ಅವರು ಕಾಪಾಡಿಕೊಳ್ಳಬೇಕಾದ ನೈರ್ಮಲ್ಯ, ಅವರು ವಾಸಿಸುವ ವಾತಾವರಣ, ಅವರು ಮಾತನಾಡುವ ಅವರದೇ ಆದ ಒಂದು ಉಪಭಾಷೆ, ಅವರ ಭವಿಷ್ಯ ಇಂತಹ ವಿಚಾರಗಳ ಬಗ್ಗೆ ಈ ನಿಯತಕಾಲಿಕದಲ್ಲಿ ನಾನು ವಿಶೇಷವಾದ ಗಮನ ಹರಿಸುತ್ತಿದ್ದೆ. ನನ್ನ ಈ ಪತ್ರಿಕೆಗೆ ಬಂಗಾಳದ ಉಳಿದ ಮಾಧ್ಯಮಗಳು ಸಾಕಷ್ಟು ಪ್ರಚಾರ ನೀಡಿದವು.

ಈ 'ಅಭೋಮಾನವ್' ನಿಯತಕಾಲಿಕದ ಮೂಲಕ ನಾನೊಂದು ಒಳ್ಳೆಯ ಸಾಧನೆ ಮಾಡಿದೆ. ಅದೇನೆಂದರೆ ಈ ಸಮಾಜದಲ್ಲಿ ಟ್ರಾನ್ಸ್ ಜೆಂಡರ್ ಗಳಿಗೂ ಒಂದು ಸ್ಥಾನಮಾನ ಸಿಗುವಂತೆ ಮಾಡಿದ್ದು! ಅಲ್ಲಿಯವರೆಗೂ ನನ್ನಂತಹ ಸಾವಿರಾರು ಟ್ರಾನ್ಸ್ ಜೆಂಡರ್ ಗಳ ಬದುಕು ಎಷ್ಟೊಂದು ಹೀನಾಯವಾಗಿತ್ತೆಂದರೆ, ಅವರೆಲ್ಲರೂ ನಾಲ್ಕು ಕಾಸು ಸಂಪಾದಿಸಲು ಟ್ರಾಫಿಕ್ ಸಿಗ್ನಲ್ ಗಳಲ್ಲಿ ನಿಂತುಕೊಂಡು, ಅಲ್ಲಿ ಕೆಂಪು ದೀಪ ಹೊತ್ತಿಕೊಂಡು ವಾಹನಗಳು ನಿಂತ ಕೂಡಲೇ ಅವುಗಳ ಬಳಿಗೆ ಹೋಗಿ, ಚಪ್ಪಾಳೆ ತಟ್ಟುವ ಮೂಲಕ ಭಿಕ್ಷೆಯನ್ನು ಕೇಳುವುದೊಂದೇ ಗತಿಯಾಗಿತ್ತು. ಇಲ್ಲದಿದ್ದರೆ ಅವರಿಗೆ ನಾಲ್ಕು ತುತ್ತು ಅನ್ನವೂ ಸಿಕ್ಕುತ್ತಿರಲಿಲ್ಲ. ಇದೇನೇ ಇರಲಿ ಟ್ರಾನ್ಸ್ ಜೆಂಡರ್ ಗಳ ವಿಚಾರ, ಸಮಸ್ಯೆಗಳು, ಹಕ್ಕುಗಳು ಮತ್ತು ಈ ಸಮುದಾಯಕ್ಕೆ ಸಿಗಬೇಕಾದ ಸೌಲಭ್ಯಗಳಿಗೆ ಮೀಸಲಾದ ಒಂದು ನಿಯತಕಾಲಿಕೆಯನ್ನು ನಡೆಸುವ ಮೂಲಕ ಈ ಜನರು ಧ್ವನಿ ಎತ್ತುವಂತೆ ಮಾಡಬಹುದು ಎನ್ನುವ ವಿಚಾರವನ್ನು ಯೋಚಿಸುವುದೇ ಈ ದಿನಗಳಲ್ಲಿ ಕಷ್ಟವಾಗಿತ್ತು. ಆದರೂ ನಾನು ಟ್ರಾನ್ಸ್ ಜೆಂಡರ್ ಗಳಿಗೆ ಸಂಬಂಧಿಸಿದಂತಹ ವಿಶ್ವಾಸಾರ್ಹ ಮತ್ತು ನೈಜ ಮಾಹಿತಿಯನ್ನು ಹೆಚ್ಚುಹೆಚ್ಚಾಗಿ ಕಲೆ ಹಾಕತೊಡಗಿದೆ.

ನೈಹಾತಿಗೆ ಸ್ವಲ್ಪ ದೂರದಲ್ಲಿ ರಾಣಾಘಾಟ್ ಎನ್ನುವ ಒಂದು ಊರಿತ್ತು. ಅಲ್ಲಿ ನೂರಾರು ಟ್ರಾನ್ಸ್ ಜೆಂಡರ್ ಗಳ ಒಂದು ಸಮುದಾಯವಿದ್ದು, ಶಾಮಲಿ ಎನ್ನುವ ಹೆಂಗಸೊಬ್ಬಳು ಇದರ ಅಧಿನಾಯಕಿಯಾಗಿದ್ದಳು. ರಾಣಾಘಾಟ್ ನಲ್ಲಿ ಟ್ರಾನ್ಸ್ ಜೆಂಡರ್ ಗಳ ಒಂದು ಸಮುದಾಯವಿರುವುದು ಬಹಳ ಹಿಂದಿನಿಂದಲೂ ಗೊತ್ತಿತ್ತು. ನಾನು ಕೂಡ ಒಬ್ಬ ಟ್ರಾನ್ಸ್ ಜೆಂಡರ್ ಆಗಿದ್ದರೂ ಉನ್ನತ ವಿದ್ಯಾಭ್ಯಾಸವನ್ನು ಪಡೆದುಕೊಂಡು ಮೊದಲಿಗೆ ಶಾಲಾ ಶಿಕ್ಷಕನಾಗಿ ನಂತರ ಕಾಲೇಜಿನಲ್ಲಿ ಉಪನ್ಯಾಸಕನಾಗಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಹಾಗೂ ಸುದ್ದಿ ಮಾಧ್ಯಮಗಳ ಲೋಕದ ಸಂಪರ್ಕವನ್ನು ಬೆಳೆಸಿಕೊಂಡು ನನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದು ಅವರಿಗೆಲ್ಲ ಒಂದು ಅನಿಷ್ಟದಂತೆ ಕಾಣುತ್ತಿತ್ತು. ಶೈಕ್ಷಣಿಕವಾಗಿ ದೊಡ್ಡ ಸಾಧನೆಯನ್ನು ಮಾಡಬೇಕೆಂಬ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಿದ್ದ ನಾನು ಇದನ್ನು

ಪುರಸ್ಕರಿಸಲಿಲ್ಲ. ಶಿಕ್ಷಣ ಲೋಕದಲ್ಲಿ ಗಮನಾರ್ಹವಾದ ಸಾಧನೆ ಮಾಡುವುದರಲ್ಲಿ ನನ್ನ ನಿಜವಾದ ಬಿಡುಗಡೆಯಿದೆ ಎನ್ನುವುದು ನನಗೆ ಗೊತ್ತಿತ್ತು. ನಾನು 'ಅಭೋಮಾನವ್' (ಅಪೂರ್ಣ ಮನುಷ್ಯ) ನಿಯತಕಾಲಿಕೆಯನ್ನು ಆರಂಭಿಸಿದ ಮೇಲೆ ಶಾಮಲಿ ಮತ್ತು ಆಕೆಯು ಮುನ್ನಡೆಸುತ್ತಿದ್ದ ಟ್ರಾನ್ಸ್ ಜೆಂಡರ್ ಗಳ ಸಮುದಾಯವನ್ನು ಭೇಟಿ ಮಾಡದೆ ಹೋದರೆ ನನ್ನ ಕೆಲಸವು ಅಪೂರ್ಣಗೊಳ್ಳಲಿದೆ ಎನ್ನುವುದನ್ನು ನಾನು ಅರಿತೆ.

ಒಬ್ಬ ಸಾಮಾನ್ಯ ಟ್ರಾನ್ಸ್ ಜೆಂಡರ್ ವ್ಯಕ್ತಿಯ ದಿನನಿತ್ಯದ ಬದುಕು ಹೇಗಿರುತ್ತದೆ ಎನ್ನುವುದನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಕುತೂಹಲದಿಂದ ರಾಣಾಘಾಟಿಗೆ ಹೋದೆ. ಅಲ್ಲಿ ಬದುಕುತ್ತಿದ್ದ ಈ ಜನಗಳನ್ನು ಕಂಡು ನಿಜಕ್ಕೂ ನಾನು ಹೌಹಾರಿದೆ. ರಾಣಾಘಾಟ್ ನಲ್ಲಿದ್ದ ಟ್ರಾನ್ಸ್ ಜೆಂಡರ್ ಗಳ ಸಮುದಾಯದೊಳಗೆ ನಾನು ಕಾಲಿಡಬೇಕೆಂದಿದ್ದರೆ ಅದಕ್ಕೂ ಮೊದಲು ದೀಕ್ಷೆ ಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಶಾಮಲಿಯವರು ತಾವಿದ್ದ ಜಾಗವನ್ನು ಆಶ್ರಮ ಎಂದು ಕರೆಯುತ್ತಿದ್ದರು. ಶಾಮಲಿಯವರು ಆ ಪ್ರದೇಶದಲ್ಲಿ ಎಂತಹ ದೊಡ್ಡ ವ್ಯಕ್ತಿಯಾಗಿದ್ದರೆಂದರೆ ಪೊಲೀಸರಿಂದ ಹಿಡಿದು ಸರಕಾರಿ ಅಧಿಕಾರಿಗಳ ವರೆಗೂ ಪ್ರತಿಯೊಬ್ಬರೂ ಆಕೆಯನ್ನು ತುಂಬಾ ಗೌರವಿಸುತ್ತಿದ್ದರು. ಏಕೆಂದರೆ ಸಭ್ಯ ಸಮಾಜವು ಹೇಸಿಗೆಯ ಭಾವನೆಯಿಂದ ನೋಡಿ ದೂರತಳ್ಳು ವಂತಹ ಟ್ರಾನ್ಸ್ ಜೆಂಡರ್ ಗಳಿಗೆ ಇವರು ನೆತ್ತಿಯ ಮೇಲೊಂದು ಸೂರನ್ನು ಕೊಟ್ಟು, ನೆಮ್ಮದಿಯಿಂದ ಬದುಕುವ ವಾತಾವರಣವನ್ನು ಸೃಷ್ಟಿಸಿದ್ದರು. ಅಲ್ಲದೆ ತಮ್ಮ ಆಶ್ರಮಕ್ಕೆ ಬರುತ್ತಿದ್ದ ಪ್ರತಿಯೊಬ್ಬ ಟ್ರಾನ್ಸ್ ಜೆಂಡರ್ ಗಳಿಗೂ ಅವರು ಆಶ್ರಯ ಕೊಡುತ್ತಿದ್ದರು.



ಕಾಲ ಯಾರಿಗೂ ಕಾಯುವುದಿಲ್ಲ. ಅದು ತನ್ನ ಪಾಡಿಗೆ ತಾನು ಬದಲಾಗುತ್ತಿರುತ್ತದೆ. ಇದಕ್ಕೆ ತಕ್ಕಂತೆ ಜನರ ಒಲವು ನಿಲುವುಗಳು ಕೂಡ ಮಾರ್ಪಾಡಾಗುತ್ತಿರುತ್ತದೆ. ಏಕೆಂದರೆ, ನಮ್ಮ ದೇಶದ ಸುಪ್ರೀಂಕೋರ್ಟ್ ೨೦೧೪ ರಲ್ಲಿ ನೀಡಿದ ಒಂದು ಚಾರಿತ್ರಿಕ ತೀರ್ಪಿನಲ್ಲಿ ಟ್ರಾನ್ಸ್ ಜೆಂಡರ್ ಗಳನ್ನು ತೃತೀಯ ಲಿಂಗಿಗಳೆಂದು ಗುರುತಿಸಿತಲ್ಲದೆ, ಸಮಾಜದ ಉಳಿದ ಪ್ರಜೆಗಳಿಗೆ ಸಂವಿಧಾನದಡಿ ನೀಡುತ್ತಿರುವ ಹಕ್ಕುಗಳನ್ನೆಲ್ಲ ಈ ಸಮುದಾಯಕ್ಕೂ ನೀಡಬೇಕೆಂದು ಸಾರಿತು. ಇದರ ಪರಿಣಾಮವಾಗಿ ಇಡೀ ಸಮಾಜವು ನಮ್ಮಂತವರ ಬಗ್ಗೆ ಸಕಾರಾತ್ಮಕ ಭಾವನೆಯನ್ನು ಬೆಳೆಸಿಕೊಳ್ಳಲು ಆರಂಭಿಸಿತು.

ನಾನು ನಡೆಸಿದ ಹೋರಾಟವು ಕೊನೆಗೂ ಫಲ ಕೊಡುತ್ತಿದೆಯಲ್ಲ ಎಂದು ನನ್ನ ಮನಸ್ಸಿಗೆ ತೃಪ್ತಿಯಾಯಿತು. ಆದರೆ ನನ್ನ ಅಂತರಂಗದ ಆಳದಲ್ಲಿ ಕೆಲವೊಮ್ಮೆ ದಿಗಿಲು ಆಗುತ್ತದೆ. ಏಕೆಂದರೆ, ನಾನು ಒಂದೊಂದು ಹೆಜ್ಜೆಯನ್ನು ಮುಂದಿಡಲು ಎದುರಿಸಬೇಕಾಗಿ ಬಂದ ಅಡೆತಡೆಗಳು ಹಾಗೂ ಸಮಾಜದ ನಕಾರಾತ್ಮಕ ಮನೋಭಾವವೇ ಇದಕ್ಕೆ ಕಾರಣ. ಹಾಗಾದರೆ, ನನ್ನ ಬದುಕು ಈಗಾದರೂ ಸುಗಮವಾಗಿದೆಯೇ ಎಂದರೆ, 'ಇಲ್ಲ, ಅದಿನ್ನೂ ತುಂಬ ದೂರವಿದೆ', ಎಂದೇ ಹೇಳಬೇಕಾಗುತ್ತದೆ.

* * * *

ಡಾ. ಅನಿರ್ಬನ್ ಮಜುಂದಾರ್ ಮತ್ತು ಡಾ. ಮನೋಜ್ ಖನ್ನಾ ಇವರಿಬ್ಬರನ್ನೂ ಭೇಟಿ ಮಾಡಿದ ನಾನು, 'ಸರ್, ನಾನೀಗ ಆಪರೇಷನ್ ಮಾಡಿಸಿಕೊಳ್ಳಲು ತಯಾರಾಗಿದ್ದೇನೆ. ಜಗತ್ತಿನ ಯಾವ ಶಕ್ತಿಯೂ ನನ್ನನ್ನು ಇದರಿಂದ ತಡೆಯಲಾರದು' ಎಂದು ಹೇಳಿದೆ. ನನ್ನ ಮಾತುಗಳನ್ನು ಕೇಳಿ ಡಾ. ಖನ್ನಾ ಅವರಿಗೆ ಖುಷಿಯಾಯಿತು. ನಾನೀಗ ಲಿಂಗ ಪರಿವರ್ತನೆಯ ಆಪರೇಷನ್ ಮಾಡಿಸಿಕೊಳ್ಳಲು ದೃಢಸಂಕಲ್ಪ ಮಾಡಿದ್ದೇನೆ ಎನ್ನುವುದನ್ನು ಅವರೂ ಅರ್ಥಮಾಡಿಕೊಂಡರು. ಮೊದಲೆಲ್ಲಾ ನನಗೆ ಇಂತಹ ಆಪರೇಷನ್ ಮಾಡಿಸಿಕೊಳ್ಳಬೇಕೆನ್ನುವ ಆಸೆಯಾಗುತ್ತಿದ್ದರೂ ಕೊನೆ ಕ್ಷಣಗಳಲ್ಲಿ ಸಿಕ್ಕಾಪಟ್ಟೆ ಭಯ ಮತ್ತು ಆತಂಕ ನನ್ನನ್ನು ಮುತ್ತಿಕೊಳ್ಳುತ್ತಿದ್ದುವು. ಆದರೆ ಈಗ ನನ್ನ ಮುಂದೆ ಸ್ಪಷ್ಟವಾದ ಗುರಿಯಿತ್ತು. ಹೀಗಾಗಿ ಮೊದಲಿದ್ದ ಭಯ ಮತ್ತು ಆತಂಕಗಳು ನನ್ನಿಂದ ದೂರವಾಗಿದ್ದವು. ಡಾ. ಮನೋಜ್ ಖನ್ನಾ ಅವರು ನನ್ನನ್ನು ವೀಲ್ ಚೇರ್ ನ ಮೇಲೆ ಕೂಡಿಸಿ ಆಪರೇಷನ್ ಥಿಯೇಟರ್ ನೊಳಕ್ಕೆ ಕಳಿಸುವ ಮೊದಲೇ ಶಸ್ತ್ರಚಿಕಿತ್ಸೆಯ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳೆರಡನ್ನೂ ವಿಶದವಾಗಿ ನನಗೆ ಹೇಳಿದರು. ಇಂತಹ ಸಂಕೀರ್ಣವಾದ ಒಂದು ಶಸ್ತ್ರ ಚಿಕಿತ್ಸೆಯನ್ನು ಮಾಡುವುದಕ್ಕೂ ಮೊದಲು ವೈದ್ಯರು ಕಾನೂನಿನ ದೃಷ್ಟಿಯಿಂದ ಅಗತ್ಯವಾದ ಕೆಲವು ಅಂಶಗಳನ್ನು ಪೂರೈಸುವುದು ಕಡ್ಡಾಯ. ಡಾ. ಖನ್ನಾ ಅವರು ಆ ಹಂತದಲ್ಲೇ ಇದನ್ನು ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿತ್ತು. ಈ ಸಲ ನಾನು ವಿಜಯದ ನಗೆಯನ್ನು ಚೆಲ್ಲಲಿದ್ದೇನೆ ಎನ್ನುವುದು ಕೂಡ ನನಗೆ ಖಾತ್ರಿಯಾಗಿತ್ತು. ಹೀಗಾಗಿ ಈ ಬಾರಿ ನಾನು ಸಂತೋಷದಿಂದಲೇ ಆಪರೇಷನ್ ಥಿಯೇಟರ್ ನೊಳಗೆ ಹೋದೆ. ಆಪರೇಷನ್ ಗೆ ಒಳಗಾದ ನಾನು ಒಂದು ಹತ್ತು ದಿನ ಆಸ್ಪತ್ರೆಯಲ್ಲೇ ಇದ್ದೆ.

ಕೆಲವೇ ವಾರಗಳಲ್ಲಿ ನನ್ನ ಗಾಯಗಳೆಲ್ಲಾ ವಾಸಿಯಾಗಿ ನಾನೇ ಸ್ವತಃ ಎದ್ದು ಓಡಾಡುವಂತಾದೆ. ಆಗ ನಾನು ಸಹಜ ಕುತೂಹಲದಿಂದ ಕನ್ನಡಿಯ ಮುಂದೆ ಹೋಗಿ ನೋಡಿದೆ.ನಿಜಕ್ಕೂ ಡಾ. ಮನೋಜ್ ಖನ್ನಾ ಅವರ ಈ ಸೃಷ್ಟಿಯನ್ನು ನೋಡಿ ನನ್ನ ಎದೆ ತುಂಬಿ ಬಂತು. ಏಕೆಂದರೆ ಇದುವರೆಗೂ ಇದ್ದ 'ಸೋಮನಾಥ' ಶಾಶ್ವತವಾಗಿ ನನ್ನಿಂದ ದೂರವಾಗಿ, ಆ ಜಾಗದಲ್ಲಿ ಖನ್ನಾ ಅವರು ತಮ್ಮ ಅರ್ಜಿಯಲ್ಲಿ ತುಂಬಿದ್ದ 'ಮಾನವಿ ಬಂದೋಪಾಧ್ಯಾಯ'ಸೃಷ್ಟಿಯಾಗಿದ್ದಳು!

## ಲೇಖಕರ ಪರಿಚಯ



ಬಿ.ಎಸ್. ಜಯಪ್ರಕಾಶ ನಾರಾಯಣ ಅವರು ಚೆನ್ನರಾಯಪಟ್ಟಣ ತಾಲೂಕಿನ ಅಗ್ರಹಾರದ ಬೆಳಗುರಿಯಲ್ಲಿ ೨೮ ಡಿಸೆಂಬರ್ ೧೯೬೪ ರಂದು ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣವು ಹುಟ್ಟೂರಿನಲ್ಲಿ ನಡೆಯಿತು. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಅವರು ಕನ್ನಡಪ್ರಭ ಹಾಗೂ ಪ್ರಜಾವಾಣಿ ಪತ್ರಿಕೆಗಳ ಉಪಸಂಪಾದಕರಾಗಿಯೂ ಕಾರ್ಯನಿರ್ವಹಿಸಿರುವರು.

ಸಾಫ್ಟ್ ವೇರ್ ನಿಂದ ಸಾಕ್ಷಾತ್ಕಾರದ ಕಡೆಗೆ, ಪ್ರಾಣ ಉಳಿಸಿದ ಪುಣ್ಯಕೋಟಿ, ಸೊಗಸುಗಾರನ ಏಳುಬೀಳು, ಜೀವ ಜೀವದ ನಂಟು, ನಾನು ಮಲಾಲ, ಸುಸ್ವರ ಲಕ್ಷ್ಮಿ ಸುಬ್ಬುಲಕ್ಷ್ಮಿ, ಕಾಲವಲ್ಲಿರಲಿಲ್ಲ ದೇಶವಲ್ಲಿರಲಿಲ್ಲ, ಭಾರತ ಬೆಸುಗೆ ಮುಂತಾದವು ಅವರ ಪ್ರಮುಖ ಕೃತಿಗಳಾಗಿವೆ. ಇವರು ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬಿ.ಎಂ.ಶ್ರೀಕಂಠಯ್ಯ ಫೌಂಡೇಶನ್ ಮುಂತಾದ ಸಂಸ್ಥೆಗಳಿಂದ ಉತ್ತಮ ಭಾಷಾಂತರಕಾರ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಪ್ರಸ್ತುತ ಪಾಠಭಾಗವನ್ನು ಅವರ 'ಗಂಡು ಜೀವ ಹೆಣ್ಣು ಭಾವ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಇದು ಮಾನವಿ ಬಂದೋಪಾಧ್ಯಾಯರ ಆತ್ಮಕಥೆಯ ಕನ್ನಡಾನುವಾದವಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಚಿತ್ತರಂಜನ್ ಬಂದೋಪಾಧ್ಯಾಯ ಅವರು ಹೆಮ್ಮೆಯಿಂದ ಬೀಗಲು ಕಾರಣವೇನು?
2. 2014 ರಲ್ಲಿ ಟ್ರಾನ್ಸ್ ಜೆಂಡರ್ ಗಳಿಗಾಗಿ ಕೋರ್ಟ್ ನೀಡಿದ ಚಾರಿತ್ರಿಕ ತೀರ್ಪು ಯಾವುದು?
3. ಟ್ರಾನ್ಸ್ ಜೆಂಡರ್ ಗಳಿಗಾಗಿ ಶಾಮಲಿಯವರು ಕೈಗೊಂಡ ಮಹತ್ಕಾರ್ಯಗಳೇನು?
4. ಅಭೋ ಮಾನವ್ ಪತ್ರಿಕೆಯ ವಿಶೇಷತೆಯೇನು?

### ಸಂವಾದಿ ಪದ ಬರೆಯಿರಿ

ಪಾಠಭಾಗದಲ್ಲಿ ಬಂದಿರುವ ಆಂಗ್ಲ ಪದಗಳಿಗೆ ಸಂವಾದಿಯಾಗಿರುವ ಕನ್ನಡ ಪದಗಳನ್ನು ಪಟ್ಟಿ ಮಾಡಿರಿ. ಅವುಗಳನ್ನು ಬಳಸಿಕೊಂಡು ಸೂಕ್ತ ವಾಕ್ಯಗಳನ್ನು ರಚಿಸಿರಿ.

### ಸಂದರ್ಶನ ಪ್ರಶ್ನಾವಳಿ ತಯಾರಿಸಿರಿ

ಮಾನವಿ ಬಂದೋಪಾಧ್ಯಾಯರ ಸಾಧನೆಯ ಕುರಿತು ಸಂದರ್ಶನ ನಡೆಸಲು ಅಗತ್ಯವಾದ ಪ್ರಶ್ನಾವಳಿಗಳನ್ನು ತಯಾರಿಸಿರಿ.

## ರೂಪಾಂತರಿಸಿ ಬರೆಯಿರಿ

ಕೆಳಗೆ ನೀಡಲಾದ ಮಾಳವಿಕಾ ಅಯ್ಯರ್‌ರ ಆತ್ಮಕಥೆಯ ಭಾಗವನ್ನು ಜೀವನ ಚರಿತ್ರೆಯಾಗಿ ರೂಪಾಂತರಿಸಿ ಬರೆಯಿರಿ.

ತಮಿಳುನಾಡಿನ ಕುಂಭಕೋಣಂ ನನ್ನ ಹುಟ್ಟೂರು. ನನ್ನ ತಂದೆ ಹೆಸರು ಪಿ. ಕೃಷ್ಣನ್. ಅವರು ನೀರಾವರಿ ಇಲಾಖೆಯಲ್ಲಿ ಚೀಫ್ ಎಂಜಿನಿಯರ್. ನನ್ನ ತಾಯಿಯ ಹೆಸರು ಹೇಮ. ನನಗೊಬ್ಬಳು ಅಕ್ಕ ಇದ್ದಾಳೆ. ೧೨ನೇ ವರ್ಷದವರೆಗೂ ನಾನು ಜಸ್ಟ್‌ಪಾಸ್ ಅಂಕಗಳನ್ನು ಮಾತ್ರ ಪಡೆಯುವ ಆವರೇಜ್ ಬುದ್ಧಿವಂತಿಕೆಯ ವಿದ್ಯಾರ್ಥಿನಿಯಾಗಿದ್ದೆ. ಗಾಳಿಪಟ ಹಾರಿಸುವುದು, ಮರಕೋತಿ ಆಟವಾಡುವುದು ನನ್ನ ಮೆಚ್ಚಿನ ಹವ್ಯಾಸವಾಗಿತ್ತು. ಭವಿಷ್ಯದಲ್ಲಿ ಹೆಸರಾಂತ ಡ್ಯಾನ್ಸರ್ ಆಗಬೇಕು ಎಂಬ ಆಸೆ ನನ್ನದಿತ್ತು.

## ಸನ್ಮಾನ ಪತ್ರ ಬರೆಯಿರಿ

ವಿಶೇಷ ಸಾಧನೆ ಮಾಡಿದ ನಿಮ್ಮೂರಿನ ಮಹಿಳೆಯೊಬ್ಬರನ್ನು ನಿಮ್ಮ ಶಾಲೆಯಲ್ಲಿ ಸನ್ಮಾನಿಸುವುದಕ್ಕಾಗಿ ಸನ್ಮಾನ ಪತ್ರವೊಂದನ್ನು ಸಿದ್ಧಪಡಿಸಿರಿ.

## ಲೇಖನ ಬರೆಯಿರಿ

ತೃತೀಯ ಲಿಂಗಿಗಳು ಸಮಾಜದ ಮುಖ್ಯವಾಹಿನಿಗೆ ಸೇರದಿರಲು ಕಾರಣವಾಗಿರುವ ಅಂಶಗಳನ್ನು ವಿಶ್ಲೇಷಿಸಿ ಅದಕ್ಕೆ ನೀವು ಸೂಚಿಸುವ ಪರಿಹಾರೋಪಾಯಗಳ ಕುರಿತು ಲೇಖನ ಬರೆಯಿರಿ.

## ಸರಳವಾಕ್ಯ ರಚಿಸಿರಿ

ಕೆಳಗೆ ನೀಡಲಾದ ಸಂಯುಕ್ತ ವಾಕ್ಯಗಳನ್ನು ಸರಳ ವಾಕ್ಯಗಳಾಗಿ ಪರಿವರ್ತಿಸಿರಿ.

೧. ಗೀತಾ ಚಂದ್ ಅವರು ಚಿಕ್ಕವಳಿದ್ದಾಗಲೇ ತಂದೆಯವರಿಗೆ ವರ್ಗಾವಣೆಯಾದುದರಿಂದ ಕುಟುಂಬದವರೆಲ್ಲರೂ ಇಂದೂರಿಗೆ ಶಿಫ್ಟ್ ಆದರು.

೨. ನಾನು ಗಂಡಾಗಿ ಹುಟ್ಟಿದ್ದರೂ ಅಂತರಂಗದ ಭಾವನೆಗಳ ದೃಷ್ಟಿಯಿಂದ ನೋಡಿದರೆ ನಾನೊಂದು ಹೆಣ್ಣು ಎಂದು ನನಗೆ ದೃಢವಾಗಿತ್ತು.

## ಸ್ಲೈಡ್ ತಯಾರಿಸಿರಿ

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಮಹಿಳೆಯರ ಕುರಿತಾಗಿ ಅಂತರ್ಜಾಲದ ಸಹಾಯದಿಂದ ಮಾಹಿತಿ ಸಂಗ್ರಹಿಸಿ ಆಕರ್ಷಕವಾದ ಸ್ಲೈಡ್ ಗಳನ್ನು ತಯಾರಿಸಿರಿ.

# ಹಾಡು, ಕವಿಯೆ, ಹಾಡು

- ಕೆ.ಎಸ್. ನಿಸಾರ್ ಅಹಮದ್

ಹಾಡು, ಕವಿಯೆ, ಹಾಡು
ನಾಡ ಜನರ ಪಾಡು.
ಸ್ವಂತ ನೋವು ನಲಿವನುಳಿದು
ಸಾಂತ ಬಯಕೆ ಗೂಡು ತೊರೆದು
ವೈನತೇಯನಂತೆ ಏರಿ
ನಾಡಿನುದ್ದ ಅಗಲ ಹಾರಿ
ಸುತ್ತಮುತ್ತ ನೋಡು;
ಸೊಕ್ಕಿ ಬರಲಿ ಹಾಡು.
ಹಣದ ಕಣಜ ತುಂಬಲೆಳಸಿ
ಮನುಜ ಮನುಜನನ್ನೆ ಮುಗಿಸಿ
ಮೆರೆಯುತಿರುವ ಪರಿಯ ಹಾಡು;
ನಾಡಾಗಿರುವುದೆಂಥ ಕಾಡು!
ಅಬಲೆತನದ ಹೊರೆಯ ಹೇರಿ
ಹೆಣ್ಣ ಬಾಳ ಮಾಡಿ ಗೋರಿ
ಕೀಳರಿಮೆಯ ಕೋಳ ತೊಡಿಸಿ
ಅನುದಿನವೂ ಅವಳ ಸುಡಿಸಿ
ಸೆಟೆದ ಕುಹಕಿಗಳನು ನೋಡು;
ಬಯಲಿಗೆಳೆವ ಹೂಟ ಹೂಡು
ಜಾತಿ ಮತದ ಖೆಡ್ಡ ರಚಿಸಿ
ಸಮಾಜಹಿತದ ಹುಲ್ಲು ಬೆಳೆಸಿ
ನರರ ನೂಕಿ ಕುಹರದಲ್ಲಿ
ಅಜ್ಞಾನದ ತಿಮಿರದಲ್ಲಿ
ಆದಿಯಿಂದ ನಲವು ಫಲವ
ಭೋಗಿಸಿರುವ ಸ್ವಾರ್ಥಿ ದಳವ
ಬಗ್ಗು ಬಡಿಯೆ ಜನತೆ ದಂಡು
ಹಾಡಾಗಲಿ ಮದ್ದು ಗುಂಡು.
ಹಾಡು,ಕವಿಯೆ, ಹಾಡು;
ಮುರಿಯೆ ಖೂಳಗಣದ ಕೋಡು.
ಸತ್ಯದ ಕೊರಳನ್ನು ಹಿಚುಕಿ
ಸುಳ್ಳಿನ ಶವವಸ್ತ್ರ ತೊಡಿಸಿ
ನಿತ್ಯ ನಡೆಯುತಿಹುದು ಜಾತ್ರೆ;
ತುಳುಕಿರುವುದು ಪಾಪಪಾತ್ರೆ.
ಜಗ ಕಳೆಯಲಿ ಖಳರ ಹೊರೆ;
ಮೊರೆದುಕ್ಕಿಸು ಕ್ರಾಂತಿ ನೆರೆ.
ಹಾಡು, ಕವಿಯೆ, ಹಾಡು.



## ವಿಶದೀಕರಣ

ವೈನತೇಯ - ವಿನುತಾ ದೇವಿಯ ಮಗ, ಗರುಡ.

## ಕವಿ ಪರಿಚಯ



'ನಿತ್ಯೋತ್ಸವ ಕವಿ' ಎಂದೇ ಪ್ರಖ್ಯಾತರಾದ ಕವಿ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಇವರು ೧೯೩೬ ಫೆಬ್ರವರಿ ೫ ರಂದು ಬೆಂಗಳೂರಿನ ದೇವನಹಳ್ಳಿಯಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಕೊಕ್ಕರೆ ಹೊಸಹಳ್ಳಿ ಶೇಖ್ ಹೈದರ್ ನಿಸಾರ್ ಅಹಮದ್. ಇವರ ತಂದೆ ಕೆ. ಎಸ್. ಹೈದರ್, ತಾಯಿ ಅಮೀನಾ ಬೇಗಂ. ಇವರು ಭೂ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಾಡಿನ ವಿವಿಧ ಸರಕಾರಿ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರ ಪ್ರಮುಖ ಕವನ ಸಂಕಲನಗಳು - ಮನಸ್ಸು ಗಾಂಧೀ ಬಜಾರು, ಸಂಜೆ ಐದರ ಮಳೆ, ನಾನೆಂಬ ಪರಕೀಯ, ಅನಾಮಿಕ ಆಂಗ್ಲರು, ನಿತ್ಯೋತ್ಸವ, ನವೋಲ್ಲಾಸ ಇತ್ಯಾದಿ. ಇವರು ಸಾಕಷ್ಟು ಗದ್ಯಕೃಷಿಯನ್ನೂ ಮಾಡಿದ್ದಾರೆ. ಇವರ ಇದು ಬರಿ ಬೆಳಗಲ್ಲೋ ಅಣ್ಣ, ಹಿರಿಯರು ಹರಸಿದ ಹೆದ್ದಾರಿ, ಮನದೊಂದಿಗೆ ಮಾತುಕತೆ ಈ ಕೃತಿಗಳಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಇದಲ್ಲದೆ ಕೆಂಪೇಗೌಡ ಪ್ರಶಸ್ತಿ, ಆರ್ಯಭಟ, ನಾಡೋಜ, ಪಂಪ, ಪದ್ಮಶ್ರೀ ಮುಂತಾದ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ೧೯೮೧ ರಲ್ಲಿ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪದವಿ ಇವರಿಗೆ ಸಂದ ಗೌರವವಾಗಿದೆ. ೨೦೨೦ ಮೇ ೩ ರಂದು ಇವರು ಇಹಲೋಕವನ್ನು ತ್ಯಜಿಸಿದರು.

ಪ್ರಸ್ತುತ ಕವನವನ್ನು ಇವರ 'ನವೋಲ್ಲಾಸ' ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಹಾಡು ಹೇಗೆ ಸೊಕ್ಕಿ ಬರಬೇಕೆಂದು ಕವಿ ಹೇಳುತ್ತಾರೆ?
2. ಕವಿಯು 'ನಾಡಾಗಿರುವುದೆಂಥ ಕಾಡು!' ಎಂದು ಹೇಳಲು ಕಾರಣವೇನು?
3. ಹಾಡು, ಕವಿಯೆ, ಹಾಡು ಕವನದಲ್ಲಿ ಕವಿ ಹೆಣ್ಣಿನ ಬಾಳನ್ನು ಹೇಗೆ ಚಿತ್ರಿಸಿದ್ದಾರೆ?
4. ಜಗದ ಪಾಪದ ಪಾತ್ರೆ ಯಾವಾಗ ತುಂಬಿ ತುಳುಕುತ್ತದೆ?

## ಆಶಯ ಬರೆಯಿರಿ

'ಹಾಡು, ಕವಿಯೆ, ಹಾಡು' ಕವನದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಕವನದ ಸಾಲುಗಳ ಸ್ವಾರಸ್ಯ ಬರೆಯಿರಿ.

- ಮನುಜಮನುಜನನ್ನೆ ಮುಗಿಸಿ
  ಮೆರೆಯುತಿರುವ ಪರಿಯ ಹಾಡು
- ಜಗ ಕಳೆಯಲಿ ಖಳರ ಹೊರೆ ;
  ಮೊರೆದುಕ್ಕಿಸು ಕ್ರಾಂತಿ ನೆರೆ.

## ಸಮರ್ಥಿಸಿ ಬರೆಯಿರಿ

'ಹಾಡು, ಕವಿಯೆ, ಹಾಡು' ಕವನಕ್ಕೆ ಬೇರೊಂದು ಶೀರ್ಷಿಕೆ ನೀಡಿ ಅದು ಹೇಗೆ ಸೂಕ್ತವಾಗಿದೆ ಎಂಬುದನ್ನು ಸಮರ್ಥಿಸಿ ಬರೆಯಿರಿ.

## ಪದ ಬದಲಾಯಿಸಿ ಬರೆಯಿರಿ

ಕೆಳಗೆ ಕೊಡಲಾದ ಕವನದ ಸಾಲುಗಳಲ್ಲಿ ಅಡಿಗೆರೆ ಎಳೆದ ಪದಗಳ ಸಮಾನಾರ್ಥ ಪದಗಳನ್ನು ಬರೆದು ಕವನವನ್ನು ಪುನಃ ಬರೆಯಿರಿ.

ಹಣದ <u>ಕಣಜ</u> ತುಂಬಲೆಳಸಿ
<u>ಮನುಜ</u> ಮನುಜನನ್ನೆ ಮುಗಿಸಿ
ಮೆರೆಯುತಿರುವ <u>ಪರಿಯ</u> ಹಾಡು
ನಾಡಾಗಿರುವುದೆಂಥ <u>ಕಾಡು</u>

## ಪ್ರಬಂಧ ಬರೆಯಿರಿ

'ಆಧುನಿಕ ಸಮಾಜದಲ್ಲಿ ಮಹಿಳೆಯರ ಸಾಧನೆ' ಎಂಬ ವಿಚಾರದ ಬಗ್ಗೆ ಪ್ರಬಂಧ ಬರೆಯಿರಿ.

## ಟಿಪ್ಪಣಿ ಬರೆಯಿರಿ

ಕೆಳಗಿನ ಕವನದಲ್ಲಿ ಸ್ತ್ರೀಯ ಮಹತ್ವವನ್ನು ಹೇಗೆ ವರ್ಣಿಸಲಾಗಿದೆ? ವಿಶ್ಲೇಷಿಸಿ ನಿಮ್ಮ ಅಭಿಪ್ರಾಯಗಳೊಂದಿಗೆ ಟಿಪ್ಪಣಿ ಬರೆಯಿರಿ.

# ಆಕೆ

ಅಮ್ಮಾ ಎಂದರೆ ಅಮೃತ
ಆಕೆಗೆ ಜಗದ ಮತ
ಅವಳ ಮತ ಮಾತ್ರ
ಸೋತವರಿಗೂ ಗೆದ್ದವರಿಗೂ
ಬಿದ್ದವರಿಗೂ ಎದ್ದವರಿಗೂ
ನಕ್ಕವರಿಗೂ ಅಳುವವರಿಗೂ

ಚಿಗುರೊಡೆದು ಎಲೆಯಾಗಿ
ಮೊಗ್ಗೊಡೆದು ಹೂವಾಗಿ
ಕಾಯಾಗಿ ಕರಬೂಜವಾದ
ಒಂಬತ್ತು ತಿಂಗಳ ಹಣ್ಣನ್ನು
ಕಾಯುವವಳು ಎಡೆಬಿಡದೆ
ತಾಯೆಂಬ ಹೆಣ್ಣು

ಅಕ್ಕ - ತಂಗಿಯಾಗಿ
ಗೆಳತಿ - ಪ್ರೇಯಸಿಯಾಗಿ
ಮಡದಿಯಾಗುವಳು
ಎಲ್ಲ ಹೊರುವ ತಾಯಿ

**- ಅನಂತ ಕುಣಿಗಲ್**

# ಪೊಲೀಸ್ ಪುಟ್ಟಮ್ಮ

- ಎಂ.ಕೆ. ಇಂದಿರಾ

ಮೈಸೂರು ದೇಶಕ್ಕೆ ರೈಲು ಬಂಡಿ ಬಂದು ಹತ್ತೆಂಟು ವರ್ಷಗಳು ಕಳೆದಿತ್ತಷ್ಟೆ. ಬ್ರಿಟಿಷರ ಆಳ್ವಿಕೆಯಲ್ಲಿ ಸಾಕಷ್ಟು ಬಿಗಿ ಬಂದಿದ್ದಾದರೂ ದೇಶದಲ್ಲಿ ಮಾಮೂಲಾಗಿ ನಡೆಯುತ್ತಿದ್ದ ಕಳ್ಳತನ ದರೋಡೆಗಳು ಮಾತ್ರ ಎಂದಿನಂತೆ ಚ್ಯುತಿಯಿಲ್ಲದೇ ನಡೆಯುತ್ತಿದ್ದವು. ಒಂದೆರಡು ದಶಕಗಳ ಕಾಲ ರೈಲು ನಿಲ್ದಾಣಗಳಲ್ಲಿ ಹೆಚ್ಚು ಕಳ್ಳತನ ದರೋಡೆಗಳು ನಡೆಯುತ್ತಿದ್ದವು. ಪೊಲೀಸ್ ಪಡೆಯ ನಿರಂತರ ಶ್ರಮದಿಂದ ಕೆಲವು ಕಡೆ ಕಳ್ಳತನದ ಗಲಾಟೆ ಕಡಿಮೆಯಾದರೂ ಬೆಂಗಳೂರು, ಮೈಸೂರು, ಹಾಸನ ಹೀಗೆ ನಾಲ್ಕಾರು ರೈಲುಗಳ ನಡು ನಿಲುಮನೆಯಾದ ಅರಸೀಕೆರೆಯಲ್ಲಿ ಮಾತ್ರ ಕಳ್ಳರ ಹಾವಳಿ ದಿನೇ ದಿನೇ ಹೆಚ್ಚುತ್ತಲೇ ಬಂದಿತು. 'ಕಳ್ಳ ಅರಸೀಕೆರೆ' ಎಂಬ ಅಭಿಧಾನ ಅದಕ್ಕೆ ಆಗಲೇ ಬಂದದ್ದು. ಘಟಾನುಘಟಿ ಪೊಲೀಸ್ ಇನ್‌ಸ್ಪೆಕ್ಟರ್‌ಗಳೆಲ್ಲಾ ಅರಸೀಕೆರೆಯಲ್ಲಿ ಕಳ್ಳರನ್ನು ಹಿಡಿಯಲು ತಿಪ್ಪರ್ಲಾಗ, ದೊಂಬರಲಾಗ ಹಾಕಿ ಸುಸ್ತಾಗಿದ್ದರು. ಅವರನ್ನು ಹಿಡಿಯಲು ಪ್ರಯತ್ನ ಪಡುತ್ತಿದ್ದ ಪೊಲೀಸಿನವರಿಗೇ ಬರುತ್ತಿತ್ತು ಗ್ರಹಚಾರ.

ಕಿಕ್ಕೇರಿ ನಂಜ ಎಂಬುವನು ಆಗಿನ ಕಾಲದ ಪ್ರಸಿದ್ಧ ದರೋಡೆಕಾರ. ಅವನ ಹಾವಳಿಯ ಮುಂದೆ ಪೊಲೀಸು ಇಲಾಖೆ ಸೋತಿತ್ತು. ಹತ್ತು ವರ್ಷಗಳ ಹಿಂದೆ ಒಂದು ಸಣ್ಣ ಕಳ್ಳತನದಿಂದಾಗಿ ಜೈಲು ಕಂಡು ಬಂದ ಕಿಕ್ಕೇರಿ ನಂಜ ಈಗ ಕೆರಳಿದ ಹುಲಿಯಾಗಿದ್ದ. ಅವನ ಕಳ್ಳತನ ದರೋಡೆಗಳಿಗೆ ಇಂಥದೇ ನೆಲೆ ಎಂಬುದಿರಲಿಲ್ಲ. ಆದರೆ ಕಳ್ಳ ಅರಸೀಕೆರೆಯ ಸುತ್ತಮುತ್ತ ಅವನ ಅನೇಕ ಗುಂಪುಗಳು ಇದ್ದವು. ಬಸ್ಸುಗಳಿಲ್ಲದ ಆ ಕಾಲದಲ್ಲಿ ಗಾಡಿ ಪ್ರಯಾಣಿಕರನ್ನೆಲ್ಲ ಸದೆಬಡೆಯುತ್ತಿದ್ದ, ಇದುವರೆಗೆ ಪೊಲೀಸರ ಪ್ರಯತ್ನಗಳೆಲ್ಲ ವಿಫಲವಾಗಿತ್ತು. ಕೆಲವು ಸಾರಿ ಬೇಕಂತಲೇ "ಕಿಕ್ಕೇರಿ ನಂಜ" ಎಂದು ಕಾಗದ ಬರೆದು ಪೊಲೀಸ್ ಸ್ಟೇಷನ್ನಿನಲ್ಲಿ ಹಾಕಿ ಹೋಗುತ್ತಿದ್ದ.

ಮುಂದೆ ಕಿಕ್ಕೇರಿ ನಂಜನ ಶೋಧನೆ ನಡೆಯುತ್ತಿತ್ತೇ ವಿನಃ ಅದು ಸಾರ್ಥಕವಾಗಲಿಲ್ಲ. ಇದೇ ಸಮಯದಲ್ಲಿ ಮೊಹಿಯುದ್ದೀನ್ ಸಾಹೇಬರಿಗೆ ಬೇರೆ ಕಡೆಗೆ ವರ್ಗವಾಗಿ ಅವರ ಬದಲಿ ನರಸಿಂಗರಾಯರು ಅರಸೀಕೆರೆಯ ಪೊಲೀಸ್ ಇನ್‌ಸ್ಪೆಕ್ಟರಾಗಿ ಬಂದರು. ನರಸಿಂಗರಾಯರು ದಕ್ಷ ಅಧಿಕಾರಿ ಎಂದು ಪ್ರಸಿದ್ಧರಾಗಿದ್ದರು. ಆದರೆ ಅವರನ್ನೇ ಮಣ್ಣುಮುಕ್ಕಿಸಿದ ಕಿಕ್ಕೇರಿ ನಂಜ.

ನರಸಿಂಗರಾಯರು ಪೊಲೀಸ್ ಇಲಾಖೆಗೆ ತಕ್ಕಂತೆ ಐದೂವರೆ ಅಡಿಯ ಸುದೃಢ ದೇಹಿ, ಕಪ್ಪು ಮೈಬಣ್ಣ, ದಪ್ಪ ಮೀಸೆ, ಗೆಡ್ಡೆ ಕಣ್ಣು, ಅವರ ಹೆಂಡತಿ ಪುಟ್ಟಮ್ಮ ಲಕ್ಷಣದ ಮುತ್ತೈದೆ. ಅರಿಶಿನ ಕುಂಕುಮಗಳ ಜೊತೆಗೆ ಧಾರಾಳವಾಗಿ ಆಗಿನ ಕಾಲದ ಒಡವೆಗಳನ್ನೂ ಹಾಕಿಕೊಂಡಿದ್ದರು. ಇದ್ದ ಇಬ್ಬರು ಹೆಣ್ಣು ಮಕ್ಕಳನ್ನೂ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಲಾಗಿತ್ತು.

ಮನೆಯಲ್ಲಿ ಇದ್ದವರು ಗಂಡ ಹೆಂಡತಿ ಇಬ್ಬರೇ. ನರಸಿಂಗರಾಯರಿಗೆ ನಿವೃತ್ತರಾಗಲು ಇನ್ನು ಕೇವಲ ಒಂದೆರಡು ವರ್ಷಗಳು ಉಳಿದಿದ್ದವು. ತಾವು ನಿವೃತ್ತನಾಗುವುದರೊಳಗೆ ಕಿಕ್ಕೇರಿ ನಂಜನನ್ನು ಜೈಲಿಗೆ ಕಳುಹಿಸಬೇಕೆಂಬ ಅವರ ಪ್ರಯತ್ನ ವಿಫಲವಾಗಿತ್ತು. ಆದರೆ ಆ ಸಾಹಸ ಕಾರ್ಯವನ್ನು ಮಾಡಿದವರು ಅವರ ಧರ್ಮಪತ್ನಿ ಪುಟ್ಟಮ್ಮನವರು. ಅವರು ನಿವೃತ್ತರಾದ ಮೇಲೂ ಅವರ ಹೆಂಡತಿಗೆ 'ಪೊಲೀಸ್ ಪುಟ್ಟಮ್ಮ' ಎನ್ನುವ ಬಿರುದು ಶಾಶ್ವತವಾಗಿ ಉಳಿದದ್ದು ಆಕೆಯ ಅಸಮ ಸಾಹಸದಿಂದಾಗಿ, ಅದೊಂದು ಸ್ವಾರಸ್ಯಕರವಾದ ಕತೆ.

ಅರಸೀಕೆರೆಯಲ್ಲಿವಕೀಲ ನಾರಾಯಣರಾಯರ ಹೆಂಡತಿಯ ಹೆಸರೂ ಪುಟ್ಟಮ್ಮನೆಂದೇ ಇದ್ದುದ್ದರಿಂದ ಕ್ರಮೇಣ ಆಕೆಯನ್ನು ವಕೀಲ ಪುಟ್ಟಮ್ಮನೆಂದೂ, ಇವರನ್ನು ಪೊಲೀಸ್ ಪುಟ್ಟಮ್ಮನೆಂದೂ ಕರೆಯುವುದು ವಾಡಿಕೆಯಾಗಿತ್ತು. ಅದೇ ಬಿರುದು ಕಡೆತನಕವೂ ಉಳಿಯಿತು.

ಅವರು ಅರಸೀಕೆರೆಗೆ ಬಂದು ಎರಡು ವರ್ಷವಾಗಿರಬಹುದು.ಆಗೊಂದುದಿನಹೊನ್ನಾವರದ ಹತ್ತಿರ ಬಹುದೊಡ್ಡ ಕಳ್ಳತನವಾಯಿತೆಂಬ ವರ್ತಮಾನ ಬಂದಿತು. ಸಾಹುಕಾರ ಚೆನ್ನಬಸಪ್ಪನವರ ಖಜಾನೆಯೆಲ್ಲಾ ಲೂಟಿಯಾಗಿ ಹೋಗಿತ್ತು. ಅದು ಕಿಕ್ಕೇರಿ ನಂಜನದೇ ಅನಾಹುತವೆಂದು ಎಲ್ಲರ ತೀರ್ಮಾನವಾಗಿದ್ದರೂ ಅವನನ್ನು ಹಿಡಿಯಲು ಮಾತ್ರ ಸಾಧ್ಯವಾಗಿರಲಿಲ್ಲ. ಅವನು ಸಿಗದಿದ್ದರೂ ಪೊಲೀಸಿನವರು ತನಿಖೆ ಮಾಡಲೇಬೇಕಾಯಿತು. ಚೆನ್ನಬಸಪ್ಪನವರು ಭರ್ಜರಿಯ ಗಾಡಿ ಕಳಿಸಿದ್ದರು ನರಸಿಂಗರಾಯರಿಗೆ. ಬಂದೂಕು ಸಮೇತರಾಗಿ ದಫೇದಾರರು, ಇನ್ ಸ್ಪೆಕ್ಟರ್, ಆರು ಜನ ಕಾನ್ ಸ್ಟೇಬಲ್ ಗಳು ಗಾಡಿ ಏರಿದರು. ಆಗ ಮಳೆಗಾಲದ ದಿನಗಳು. ಇನ್ ಸ್ಪೆಕ್ಟರು ಇಬ್ಬರು ಪೊಲೀಸರನ್ನು ತಮ್ಮ ಮನೆಯ ಜಗುಲಿಯ ಮೇಲೆ ಮಲಗಲು ಹೇಳಿದರು.

ಹೆಂಡತಿಯೊಡನೆ "ನಾನು ಹಿಂತಿರುಗಿ ಬರೋದು ಎರಡು ಮೂರು ದಿನ ಆಗುತ್ತೆ. ರಾತ್ರಿ ಯಾರಾದರೂ ಹೆಂಗಸರನ್ನ ಬೇಕಾದರೆ ಕರೆದು ಜೊತೆಗೆ ಮಲಗಿಸಿಕೊ. ಹೊರಗೆ ಪೊಲೀಸಿನೋರು ಇರ್ತಾರೆ. ಮನೆ ಕಡೆ ಜೋಪಾನ" ಎಂದು ಹೇಳಿ ಗಾಡಿ ಹತ್ತಿದರು. ಅವರು ಗಾಡಿ ಹತ್ತುವಾಗ ಪುಟ್ಟಮ್ಮ ಜಗುಲಿಗೆ ಬಂದು ನಿಂತುಕೊಂಡರು. ಆಕೆಯ ಮೈತುಂಬ ಒಡವೆಗಳಿವೆ. ಅಡ್ಡಿಕೆ, ಸರಿಗೆ ,ಜೋಮಾಲೆ ಸರಗಳು, ಕೈಯಲ್ಲಿ ಅಪರಂಜಿಯ ದಪ್ಪವಾದ ಕಾಪು, ಗೊಲಸುಗಳು, ಸೊಂಟದಲ್ಲಿ ಚಿನ್ನದ ಪಟ್ಟಿ, ಇವಲ್ಲದೆ ಚಿಲ್ಲರೆ ಒಡವೆಗಳು ನರಸಿಂಗರಾಯರ ಮುದಿಕಣ್ಣುಗಳಿಗೂ ಮಡದಿ ಮದುವಣಗಿತ್ತಿಯಂತೆ ಕಂಡಳು.

ತಾನು ಮನೆಯಲ್ಲಿ ಇಲ್ಲದಾಗ ಒಡವೆಗಳನ್ನು ತೆಗೆದಿಡು ಎಂದು ಹೇಳಬೇಕಾಗಿತ್ತು ಅಂದುಕೊಂಡರು ಮನದಲ್ಲಿ. ಆದರೆ ಹೊರಡುವಾಗ ಹಾಗೆ ಹೇಳಲು ಅವರಿಗೆ ಯಾಕೋ ಬಾಯಿ ಬರಲಿಲ್ಲ. ಒಳ್ಳೇ ಸಜ್ಜಾದ ಜೋಡೆತ್ತಿನ ಗಾಡಿ ಸ್ವಲ್ಪ ದೂರ ಹೋಗುವವರೆಗೂ ಜಗುಲಿ ಕಂಬವನ್ನೊರಗಿ ನಿಂತ ಪುಟ್ಟಮ್ಮ ನಿಧಾನವಾಗಿ ಒಳಗೆ ಬಂದರು. ಆ ರಾತ್ರಿ ಇಬ್ಬರು ಪೊಲೀಸರು

ಜಗಲಿಯಲ್ಲಿ ಮಲಗಿದ್ದರಿಂದ ಪುಟ್ಟಮ್ಮ ನಿಶ್ಚಿಂತೆಯಾಗಿ ತಾವು ಮಲಗುವ ಮನೆಯಲ್ಲಿ ಮಲಗಿದರು.

ಯಜಮಾನರು ಮನೆಯಲ್ಲಿಲ್ಲದಾಗ ಆಕೆ ಏನಾದರೂ ಹಪ್ಪಳ ಸೆಂಡಿಗೆಯ ಕೆಲಸ ಹಚ್ಚಿಕೊಳ್ಳುವುದು ರೂಢಿ. ಈಗ ಮಳೆಗಾಲವಾದ್ದರಿಂದ ಒಂದಿಷ್ಟು ಖಾರವಾದ ಕುರುಕುಲು ತಿಂಡಿಯನ್ನಾದರೂ ಮಾಡೋಣವೆಂದುಕೊಂಡು ಆ ದಿನವೆಲ್ಲ ಚಕ್ಕುಲಿ, ಕೋಡುಬಳೆ, ಖಾರದ ಅವಲಕ್ಕಿ ಏನೇನೋ ಮಾಡಿ ಡಬ್ಬಗಳಲ್ಲಿ ತುಂಬಿಟ್ಟರು. ಗಂಡನ ಬಾಯಿ ಚಪಲ ಆಕೆಗೆ ಚೆನ್ನಾಗಿ ಗೊತ್ತು. ದಿನ ದಿನವೂ ತಿಂಡಿ ಇರಬೇಕು ಆತನಿಗೆ. ಅರಳು ಅವಲಕ್ಕಿ ಇರಬೇಕು. ಒಂದಿಷ್ಟೂ ಬೇಸರವಿಲ್ಲದೆ ಮಾಡುವಳಾಕೆ. ಪುಟ್ಟಮ್ಮನ ಕೈ ನೋಡಲು ಪುಟ್ಟದಾದರೂ ನೀಡುವುದರಲ್ಲಿ ಬಹು ಧಾರಾಳ. ಅಕ್ಕಪಕ್ಕದ ಮನೆಯ ಮಕ್ಕಳಿಗೆ ಹಂಚಿದ್ದಾಯ್ತು. ರಾತ್ರಿ ಮಲಗಲು ಬಂದ ಪೊಲೀಸಿನವರಿಗೂ ಕೈತುಂಬಾ ತಿಂಡಿ ಕೊಟ್ಟರು. ಆಕೆಯ ಮಾತು ನಿಧಾನ. ಕೆಲಸವೂ ಹಾಗೇ, ನಿಧಾನವಾದರೂ ಬಲು ಒಪ್ಪ-ಓರಣ, ಅಚ್ಚುಕಟ್ಟು.

ಆಕೆ ರಾತ್ರಿ ಊಟ ಮುಗಿಸಿ ಹಾಲು-ಮೊಸರಿನ ಕೆಲಸ ಮುಗಿಸಿ ಬಂದು ಮಲಗಿದರು. ಹೊರಗೆ ಜಿನುಗುವ ಮಳೆ ಬರುತ್ತಿತ್ತು. ಜಗುಲಿ ವಿಸ್ತಾರವಾಗಿದ್ದುದರಿಂದ ಮಳೆಯ ಇರಿಚಲು ಬಡಿಯುವಂತಿರಲಿಲ್ಲ. ಹೊರಗಿನ ಚಳಿಮಳೆಗೆ ಮನೆಯೊಡತಿ ಕೊಟ್ಟ ಖಾರದ ಕೋಡುಬಳೆ , ಹುರಿಗಾಳು ಬಹು ಹುರುಪು ತಂದಿತ್ತು. ಓವರ್ ಕೋಟು ಹೊದ್ದು ಬೀಡಿ ಸೇದುತ್ತ ಕುಳಿತ ಕನಿಷ್ಠ ಬಿಲ್ಲೆಗಳು ತಿಂಡಿ ತಿನ್ನುತ್ತ ಸ್ವಲ್ಪ ಹೊತ್ತು ಹರಟೆ ನಂತರ ಬೆಚ್ಚಗೆ ಹೊದ್ದು ಮಲಗಿದರು. ಆದರೆ ಮನಕ್ಕೆ ನಿಶ್ಚಿಂತೆ ಇತ್ತೆಂದು ಹೇಳಲು ಸಾಧ್ಯವಿರಲಿಲ್ಲ. ಚೆನ್ನಬಸಪ್ಪನವರ ಮನೆಯ ದರೋಡೆ, ಕಿಕ್ಕೇರಿ ನಂಜನ ನೆನಪು ತಂದು ಅವರನ್ನು ದಿಗಿಲುಗೊಳಿಸಿತ್ತು. ಆದರೆ ಅದನ್ನು ಬಾಯಿಬಿಟ್ಟು ಹೇಳಲಾರದೆ ಸುಮ್ಮನಿದ್ದರು. ಜೋಬದ್ರ ಮಳೆಯ ಜೋಗುಳದಲ್ಲಿ ಅವರು ನಿದ್ರಿಸಿದರು.

ಬೆಚ್ಚಗೆ ಹೊದ್ದು ಮಲಗಿದ್ದುದರಿಂದ ಪುಟ್ಟಮ್ಮನಿಗೂ ಗಡದ್ದು ನಿದ್ದೆ ಹತ್ತಿತು. ಮತ್ತೆ ಮಳೆ ಜೋರಾಯಿತು. ರಾತ್ರಿ ಒಂದು ಗಂಟೆಯ ಸಮಯವಿರಬಹುದು. ಅಡಿಗೆ ಮನೆಯಲ್ಲಿ ಏನೋ ಶಬ್ದವಾದಂತಾಗಿ ಪುಟ್ಟಮ್ಮನಿಗೆ ಎಚ್ಚರವಾಯಿತು. ಇಲಿ, ಹೆಗ್ಗಣಗಳ ಗದ್ದಲವಂತೂ ದಿನಾ ಇರುವುದೇ. ಜೊತೆಗೆ ಬೆಕ್ಕಿನ ಸಂಚಾರವೂ ಇರುತ್ತಿತ್ತು. ಈಗ ಶಬ್ದವಾದದ್ದು ಕಾಲು ತೊಳೆಯಲು ಇಟ್ಟಿದ್ದ ಹಿತ್ತಾಳೆಯ ಚಟ್ಟಿಯೆಂದು ತಿಳಿಯಿತು. ಬೆಕ್ಕೋ ಹೆಗ್ಗಣವೋ ಇರಬೇಕೆಂದುಕೊಂಡು ಸಣ್ಣಗೆ ಉರಿಯುತ್ತಿದ್ದ ಹರಳೆಣ್ಣೆ ಕಾಲುದೀಪದಿಂದ ಬುಡ್ಡಿ ಹಚ್ಚಿಸಿಕೊಂಡು ನಿಧಾನವಾಗಿ ಅಡಿಗೆ ಮನೆಯ ಕಡೆಗೆ ಹೋದರು. ಊಟದ ಮನೆಗೆ ಕಾಲಿಡುವಾಗಲೇ ಆಕೆಯ ಮೈ ಮರಗಟ್ಟಿ ಹೋಯಿತು. ಗಟ್ಟಿಯಾಗಿ ಕೂಗಿಕೊಳ್ಳುತ್ತೇನೆಂದುಕೊಂಡು ಬಾಯ ನ್ನು ಅಗಲ ವಾಗಿ ತೆರೆದರೂ ಗಂಟಲಿನಿಂದ ಸ್ವರವೇ ಹೊರಡಲಿಲ್ಲ.

ಕೈಯಲ್ಲಿ ದೊಡ್ಡ ಮಚ್ಚು ಹಿಡಿದು ದೈತ್ಯಾಕಾರದ ಮನುಷ್ಯನೊಬ್ಬ ಊಟದ ಮನೆಯಲ್ಲಿ ಮಹಿಷಾಸುರನಂತೆ ನಿಂತಿದ್ದಾನೆ. ಮೈತುಂಬ ರೋಮ!

ಕೆಂಗರಗಣ್ಣು,ಕೋರೆ ಮೀಸೆ, ಕುರುಚಲು ಗಡ್ಡ, ಪೊದೆ ಹುಬ್ಬು, ತಲೆ ತುಂಬಾ ಒರಟು ಕೂದಲು, ಮೈಮೇಲೆ ಒಂದು ದೊಗಲೆ ಚಡ್ಡಿ, ಒಂದು ಅರ್ಧ ತೋಳಿನ ಷರಟು.

ಅವನು ಭಾರೀ ಕಳ್ಳನೆಂದು ಆಕೆಗೆ ಕೂಡಲೇ ಹೊಳೆಯಿತು. ಉಸಿರೆತ್ತಿದರೆ ಅವನ ಕೈಲಿರುವ ಮಚ್ಚಿನಿಂದ ತನ್ನ ತಲೆ ಹಾರಿ ಹೋಗಬಹುದೆಂದೂ ತಿಳಿಯಿತು. ಬುಡ್ಡಿಯ ದೀಪದ ಮಂಕು ಬೆಳಕಿನಲ್ಲೂ ಅವನ ರಾಕ್ಷಸಾಕೃತಿ ಸ್ಫುಟವಾಗಿ ಕಂಡಿತು. ಪುಟ್ಟಮ್ಮನಿಗೆ ಯೋಚಿಸಲು ಸಾಧ್ಯವಾಗದಂತೆ ಮಿದುಳು ಮರಗಟ್ಟಿತು. ಬಾವಿಯಿಂದ ಮೇಲೆ ಬಂದಂತೆ ಧ್ವನಿ ಅವನ ಬಾಯಿಂದ ಹೊರ ಬಂತು.

"ಅಮ್ಮೋ ! ನಿನ್ನ ಗಂಡ ಕಿಕ್ಕೇರಿ ನಂಜನ್ನ ಹಿಡಿಯಾಕೆ ಹೋಗವ್ನೆ. ನಾ ಬಲ್ಲೆ. ಎಳ್ಡ್ ಪೊಲೀಸಪ್ಪನ್ನ ಮನೀಗೆ ಕಾವಲು ಹಾಕಿ ಹೋಗವನೆ, ಎಳ್ಡೂ ಗಡದ್ದಾಗಿ ನಿದ್ದೆ ಹೊಡದವೆ. ಪಾಪ! ಬೆಚ್ಚಗೆ ಮಲಗಿರಲಿ, ನೀನೇನಾರಾ ಕೂಗಿ ಗೀಗೀ ಗಲಾಟೆ ಮಾಡ್ದೆ ಅಂದ್ರೇ ಇತ್ತಾಗಿ ನೋಡು ಮಚ್ಚು ! ಏಕ್ ಮಾರ್ ದೋ ತುಕ್ಡಾ!"

ಆಕೆಗೆ ಅದರ ಅರ್ಥ ತಿಳಿಯದಿದ್ದರೂ ಅವನ ಅಭಿನಯದಿಂದ ತಿಳಿಯಿತು. ಆಕೆಯ ಬುದ್ಧಿ ಕೆಲಸ ಮಾಡಿತೋ ಅಥವಾ ಕೈಯೇ ಕೆಲಸ ಮಾಡಿತೋ ಹೇಳಲು ಬರುವಂತಿಲ್ಲ. ಅಂತೂ ಆಕೆ ಬಹು ಕಷ್ಟದಿಂದ ತೊದಲಿದರು. "ಏನೂ ಮಾಡಬ್ಯಾಡಪ್ಪ, ನಾನು ಕೂಗೂದಿಲ್ಲ, ನಿಂಗೆ ಏನು ಬೇಕೋ ಎಲ್ಲ ತಗೊಂಡು ಹೋಗು."

ಅವನು ಮತ್ತೂ ಹತ್ತಿರಕ್ಕೆ ಬಂದು ಹೇಳಿದ - " ಹೂಂ, ಮೊದ್ಲು ನಿನ್ನ ಹತ್ರ ಇರೋ ಒಡವೇ ಎಲ್ಲಾ ತಂದ್ಕೊಡು....,"

ಯೋಚಿಸುತ್ತಲೇ ಆಕೆ ಕೊರಳಿನ ಕಾಸಿನ ಸರ, ಜೋಮಾಲೆ, ಕೈಯ ಕಾಪು - ಗೊಲಸು ಎಲ್ಲವನ್ನೂ ಕಳಚಿ ಅವನ ಮುಂದಿಟ್ಟಳು. ಅವನು ಮೋಟು ಗೋಡೆಯ ಮೇಲಿದ್ದ ಬುಡ್ಡಿಯನ್ನು ಎಡಗೈಯಲ್ಲಿ ಹಿಡಿದು ಆಕೆಯ ಮುಖದ ಮುಂದೆ ತಂದು ಹುಬ್ಬೇರಿಸಿ,

"ಭೋ ಚಂದಾಗಿದ್ದೀ ಕಣವ್ವ ನೀನು. ಆದರೆ ನಾನು ನಿಂಗೇನೂ ಮಾಡಾಕ್ಕಿಲ್ಲ. ಎಲ್ಲಿ ನಿನ್ನ ಅಡ್ಡಿಕೆ, ಸರಿಗೆ, ಚಿನ್ನದ ಪಟ್ಟಿ ಎಲ್ಲ ತಂದು ಮಡಗು ಇಲ್ಲಿ" ಎಂದ. ಅಂತಹ ಭೀಕರ ಪರಿಸ್ಥಿತಿಯಲ್ಲೂ ಆಕೆಗೆ ತನಗೆ ಅಡ್ಡಿಕೆ - ಸರಿಗೆಗಳಿರುವ ಸಂಗತಿ ಇವನಿಗೆ ಹೇಗೆ ಗೊತ್ತೆಂದು ಆಶ್ಚರ್ಯವಾಯಿತು. ಅವನು ಹೇಗೂ ಬಿಡುವುದಿಲ್ಲವೆಂದು ತಿಳಿದದ್ದರಿಂದ ನಿಧಾನವಾಗಿ ಹಿಂದಿರುಗಿ ಬಂದು ತಲೆದಿಂಬಿನ ಕೆಳಗಿದ್ದ ಆ ಮೂರು ಒಡವೆಗಳನ್ನು ತೆಗೆದುಕೊಟ್ಟರು." ಬೀಗದ ಕೈಗೊಂಚಲು ತಾ ತಾ" ಕೈ ನೀಡಿದ. ಇಲ್ಲವೆಂದು ಹೇಳಿ ಬದುಕುವಂತೆಯೇ ಇರಲಿಲ್ಲ. ದಿಂಬಿನ ಕೆಳಗಿನಿಂದ ಅದು ಹೊರಬಂತು. ಅಲ್ಲಿದ್ದ ದೊಡ್ಡ ಪೆಠಾರಿ ಬಾಗಿಲು ತೆಗೆದು ಸುಮಾರು ಒಂದು ಮಣದಷ್ಟು ಬೆಳ್ಳಿಯ ಸಾಮಾನುಗಳು, ನೂರಿನ್ನೂರು ಬೆಳ್ಳಿಯ ರೂಪಾಯಿಗಳು ಎಲ್ಲವನ್ನೂ ಒಂದು ದಟ್ಟಿಯಲ್ಲಿ ಗಂಟು ಕಟ್ಟಿದ. ಇವನ ಮುಖದ ಗುರುತು ಇಟ್ಟುಕೊಂಡಿದ್ದರೆ ಎಂದಾದರೂ ತನ್ನ ಗಂಡ ಇವನನ್ನು ಹಿಡಿದಾರು ಎಂದು ಯೋಚಿಸಿದರು ಪುಟ್ಟಮ್ಮ.

"ಏ ಬೀರಾ, ಬಾರಲೇ! ಎಂದು ಅವನು ಕರೆದಾಗ

ಬಚ್ಚಲ ಮನೆಯ ತೆಗೆದ ಹೆಂಚಿನಿಂದ ಮತ್ತೊಬ್ಬ ಧಡಿಯ ದೊಪ್ಪನೆ ಕೆಳಗೆ ಹಾರಿದ. ಅವನೂ ಕರಾಳ ವ್ಯಕ್ತಿಯೇ. ಆಗಲೇ ಪುಟ್ಟಮ್ಮನಿಗೆ ತಿಳಿದದ್ದು ಅವರು ಹೇಗೆ ಒಳಗೆ ಬಂದರು ಎಂಬುದು.

"ಅಮ್ಮೋ ಹೊಟ್ಟೆ ಹಸೀತಿದೆ. ತಿನ್ನಾಕ್ಕೆ ಏನಾರ ಅಷ್ಟು ಕೊಡು ತಿಂದಕಂಡು ಹೋಯ್ತಿವಿ. ನಿನ್ನ ಗಂಡ ಬಂದ್ರೆ ಹೇಳು. ಕಿಕ್ಕೇರಿ ನಂಜ ಬಂದು ಒಡವೆ ಎಲ್ಲಾ ಒಯ್ದವನೇ, ಇನ್ನು ಸಿಕ್ಕಾಕಿಲ್ಲ ಅದೂ ಅಂತ."

ಕಿಕ್ಕೇರಿ ನಂಜ! ಎಲ್ಲರ ಕುತೂಹಲದ, ಭೀಕರದ ಯಮಸ್ವರೂಪನಾಗಿದ್ದ ನಂಜ ತನ್ನ ಮುಂದೆ ನಿಂತಿದ್ದಾನೆಂಬುದನ್ನು ಆಕೆ ನಂಬಲಾರದವರಾಗಿದ್ದರು. ಇವನು ಸುಳ್ಳು ಹೇಳುತ್ತಿರಬಹುದೇ ಎಂಬ ಯೋಚನೆ ಹೊಳೆಯಿತು. ಇದುವರೆಗೂ

### ಓದಿ ತಿಳಿಯಿರಿ

ಬೈಬಲ್ಲಿನ ಸೃಷ್ಟಿಕತೆಯಲ್ಲಿ ಒಂದು ಅಂಶವಿದೆ. ಮೊದಲು ದೇವನು ಗಂಡನ್ನು ಸೃಷ್ಟಿಸುತ್ತಾನೆ. ಅವನಿಗೊಂದು ಜೊತೆ ಬೇಕೆಂದು ಯೋಚಿಸಿ ಅವನ ಪಕ್ಕೆಲುಬು ತೆಗೆದು ಅದರಿಂದ ಹೆಣ್ಣನ್ನು ಸೃಷ್ಟಿಸುತ್ತಾನೆ. ಒಂದು ಮಣ್ಣಿನ ಮೂರ್ತಿಯ ಭಾಗವನ್ನು ತೆಗೆದು ಮತ್ತೊಂದು ಮೂರ್ತಿಯನ್ನು ಮಾಡಿದಾಗ ಆ ಎರಡನೆಯ ಮೂರ್ತಿಯು ಪೂರ್ಣವಾಗಿಯೇ ಮಾಡಲ್ಪಡುತ್ತದೆಯಷ್ಟೇ? ಆದರೆ ತನ್ನ ಭಾಗವನ್ನು ಕಳೆದುಕೊಂಡ ಮೊದಲ ಮೂರ್ತಿಯು ಭಿನ್ನಗೊಂಡು ಅಪೂರ್ಣವಾಗಿ ಉಳಿಯುತ್ತದೆ. ಬೈಬಲ್ಲಿನ ಈ ವಿವರಣೆಯು ಹೆಣ್ಣು ಎರಡನೇ ಸೃಷ್ಟಿಯಾಗಿ ಮಾಡಲ್ಪಟ್ಟರೂ ಆಕೆಗಿರುವ ಪರಿಪೂರ್ಣತೆಯನ್ನು ಮತ್ತು ಆಕೆಯ ಜೊತೆಗಿದ್ದರೆ ಮಾತ್ರ ಪರಿಪೂರ್ಣನಾಗುವ ಗಂಡಿನ ಪರಿಮಿತಿಯನ್ನು ಸೂಚ್ಯವಾಗಿ ತಿಳಿಸುತ್ತದೆ.

ಗಂಡಿನ ಲೌಕಿಕ ಸಾಧನೆಗೆ ಹೇಗೋ ಹಾಗೆಯೇ ಆಧ್ಯಾತ್ಮಿಕ ಸಾಧನೆಗೂ ಹೆಣ್ಣಿನ ಸಹಕಾರ ಅಗತ್ಯ. ಶ್ರೀಮಾತೆ ಶಾರದಾದೇವಿ ತಮ್ಮ ಪತಿ ಶ್ರೀ ರಾಮಕೃಷ್ಣರ ಹೆಗಲೆಣೆಯಾಗಿ ನಿಂತು ಅವರ ಆಧ್ಯಾತ್ಮ ಸಾಧನೆಗೆ ಪೂರಕವಾದರು. ಆಯ್ದಕ್ಕಿ ಲಕ್ಕಮ್ಮ ತಮ್ಮ ಪತಿ ಮಾರಯ್ಯನಿಗೆ ನೀತಿ ಬೋಧಿಸಿದಳು. ಪುರಂದರದಾಸರ ಬದುಕಿನ ತಿರುವಿಗೆ ಅವರ ಪತ್ನಿಯೇ ಕಾರಣಕರ್ತಳು. ನಮ್ಮ ಸಮಾಜ ಸುಧಾರಕರ ಸಾಲಿನಲ್ಲಂತೂ ಸಾವಿತ್ರಿ ಬಾಯಿ ಪುಲೆ, ಕಸ್ತೂರ್ ಬಾ, ರಮಾಬಾಯಿ ಅಂಬೇಡ್ಕರ್ ಇಂಥವರ ಸಾಲೇ ನಮ್ಮ ಕಣ್ಣಮುಂದಿದೆ.



ಆಕೆಯ ಸುತ್ತಲೂ ಕವಿದ ಭಯ ಭೀತಿಗಳು ಒಮ್ಮೆಲೇ ಮಾಯವಾಗಿ ವಿಸ್ಮಯ ಮೂಡಿತು. ತನ್ನ ಗಂಡ ವರ್ಷ ವರ್ಷಗಳಿಂದ ಹುಡುಕುತ್ತಿರುವ ನಂಜ ಈಗ ಅವರಿಲ್ಲದಾಗ ಇಲ್ಲಿ ಪ್ರತ್ಯಕ್ಷವಾಗಿದ್ದಾನೆ.

"ನನ್ನ ಸುದ್ದಿಗೆ ಬಂದೋರನ್ನೆಲ್ಲಾ ಅಂಗೇ ಕತ್ನ! ಜಲ್ದಿ ತಿನ್ನಾಕೇನಾರ ಕೊಡು" ಎಂದ ನಂಜ. ಪುಟ್ಟಮ್ಮ ಕೈಯಲ್ಲಿ ಬುಡ್ಡಿ ಹಿಡಿದು ಉಗ್ರಾಣದ ಮನೆಗೆ ಬಂದರು. ಆಕೆಯ ಕೈಯಿನ ಜೊತೆಗೆ ತಲೆಯೂ ಕೆಲಸ ಮಾಡುತ್ತಿತ್ತು.

ಹಿಂಭಾಗದ ಅಡಿಗೆ ಮನೆ, ಬಚ್ಚಲು ಮನೆಗಳಿಗೆ ಮಾತ್ರ ತಗ್ಗಾಗಿ ಹೆಂಚು ಇದ್ದು ಉಗ್ರಾಣ, ಊಟದ ಮನೆ, ಮಲಗುವ ಮನೆಗಳಿಗೆಲ್ಲಾ ಭದ್ರವಾದ ಮುಚ್ಚಿಗೆ ಇದ್ದು ಮೇಲೆ ದೊಡ್ಡ ಉಪ್ಪರಿಗೆ ಇದೆ. ಉಪ್ಪರಿಗೆಯ ಮೆಟ್ಟಿಲು ಇರುವುದು ಊಟದ ಮನೆಯ ಕತ್ತಲೆಯ ಮೂಲೆಯಲ್ಲಿ. ಉಗ್ರಾಣದ ಎಡ ಬಲಗಳಿಗೆ ಹಜಾರ ಅಡಿಗೆ ಮನೆಗಳು ಬಂದು ಊಟದ ಮನೆಯಿಂದ ಒಂದೇ ದೊಡ್ಡ ಬಾಗಿಲು ಇದೆ. ಹಗಲಿನಲ್ಲಿಯೇ ದೀಪ ಹಿಡಿದು ಹೋಗಬೇಕು ಅಲ್ಲಿಗೆ. ಈಗ ರಾತ್ರಿಯಲ್ಲಿ ನಂಜನಿಗೆ ಅದು ಯಾವುದು ಹೊಳೆಯಲಿಲ್ಲ. ಪುಟ್ಟಮ್ಮ ಉಗ್ರಾಣದಲ್ಲಿ ಎರಡು ಬಾಳೆ ಎಲೆ ಹಾಕಿ ಬಾಳೆಹಣ್ಣು, ಹುರಿ ಹಿಟ್ಟು, ಚಕ್ಕುಲಿ, ಕೋಡುಬಳೆಗಳನ್ನು ತಂದು ಹಾಕಿ ತಂಬಿಗೆಯಲ್ಲಿ ನೀರು ತಂದಿಟ್ಟ ಕೂಡಲೇ ಕಳ್ಳರಿಬ್ಬರೂ ಸೀದಾ ಅಲ್ಲಿಗೇ ನುಗ್ಗಿ ಎಲೆಯ ಮುಂದೆ ಕುಳಿತರು. ಒಂದಕ್ಕಿಂತಾ ಒಂದು ರುಚಿಯಾದ ತಿಂಡಿಗಳು ಅವರ ಜನ್ಮದಲ್ಲಿ ಅವರು ಇಂತಹ ರುಚಿ ತಿಂಡಿಗಳನ್ನು ತಿಂದವರಲ್ಲ. ಇಡಿ ಇಡಿಯ ಚಕ್ಕುಲಿ, ಕೋಡುಬಳೆಗಳನ್ನು ಕರಂ ಕರಂ ಸದ್ದು ಮಾಡುತ್ತಾ ಕಬಳಿಸತೊಡಗಿದರು.

ಪುಟ್ಟಮ್ಮ ನಿಧಾನವಾಗಿ ಕೇಳಿದರು. "ರಾತ್ರಿ ಮಿಕ್ಕಿದ್ದು ತುಸು ಅನ್ನ, ಹಾಗಲಕಾಯಿ ಗೊಜ್ಜು ಅದೇ ತಂದು ಬಡಸ್ಲಾ?" ಪೆದ್ದು ಪೆದ್ದಾಗಿತ್ತು ಆಕೆಯ ಧ್ವನಿ.

ನಂಜ ಗಳಗಳ ನೀರು ಕುಡಿದು ಹೇಳಿದ "ಏನೇನೈತೆ ಎಲ್ಲಾ ತಗೊಂಬಾ ಜಲ್ದಿ. ಭೋ ಚಂದಾಗಿ ಮಾಡಿದ್ದೀ ತಿಂಡೀನಾ!" ಅವರಿಬ್ಬರನ್ನು ಕತ್ತಲೆಯಲ್ಲಿ ಕೂರಿಸಿ ಆಕೆ ಬುಡ್ಡಿ ಹಿಡಿದು ಮತ್ತೆ ಅಡಿಗೆ ಮನೆಗೆ ಹಿಂದಿರುಗುವಾಗ ನಂಜ ಗದರಿಕೆಯ ಧ್ವನಿಯಲ್ಲೆಂದ -"ಏ ಗಿಡ್ಡಮ್ಮಾ! ಹಂಗೆ ಮೆಲ್ಲಗೆ ಹೋಗಿ ಆಚೆ ಮನೆಯೋರನ್ನ ಕರದೆಗಿರದೀಯಾ ಅಂದ್ರೆ ನಿನ್ನ ಕಾಲು ಮುರಿದಿಟ್ಟೇನು ಜ್ವಾಕೆ !"

ಆಕೆ ಹೆದರಿಕೆಯ ದ್ವನಿಯಲ್ಲೆಂಬಂತೆ ಅಂದರು: "ಅಯ್ಯೋ ಪುಣ್ಯಾತ್ಮಾ ಸದ್ಯ ನನ್ನ ಜೀವದೊರಸೆ ಬಿಟ್ರೆ ಸಾಕು, ಈಪಾಟಿ ಮಳೆ ಕತ್ಲೇಲಿ ನಾ ಯಾರನ್ನ ಕರೆಯಾಕೆ ಹೋಗ್ಲಿ ಸದ್ಯ."

ಹಾಗಲಕಾಯಿ ಗೊಜ್ಜನ್ನದ ಜೊತೆಗೆ ಮೊಸರು ಅವಲಕ್ಕಿಯನ್ನೂ ತಂದು ಬಡಿಸಿ "ನಿಧಾನವಾಗಿ ಉಣ್ರಪ್ಪ ತುಂಬಾ ಹಸಿದಿದ್ದೀರಿ "ಎಂದು ಉಪಚರಿಸಿದರು. ನಂಜ ಲೊಟ್ಟೆ ಹೊಡೆಯುತ್ತ ಸುತ್ತಲೂ ನೋಡಿದ. ಗೋಡೆಯ ಸುತ್ತಲೂ ಮರದ ಹಲಗೆಯ ಬಡುಗಳು. ಅದರ ಮೇಲೆಲ್ಲಾ ಕಲ್ಲು ಮರಿಗೆ, ಜಾಡಿಗಳು, ಮಸಿ ಹಿಡಿದ ಡಬ್ಬಗಳು, ಮಣ್ಣಿನ ಗುಡಾಣಗಳು, ದೊಡ್ಡ ದೊಡ್ಡ ಹಿತ್ತಾಳೆ, ತಾಮ್ರದ ಪಾತ್ರೆಗಳು, ನಾಲ್ಕಾರು ನೆಲುವಿನ ಮೇಲೂ ಏನೇನೋ ಇವೆ.

"ಉಪ್ಪಿನಕಾಯಿ ಭೋ ಚೆಂದಾಗಿದೆ" ಎಂದ ಇನ್ನೊಬ್ಬ." ಇನ್ನೂ ಹಾಕ್ಲೆನಪ್ಪ?" ಎಂದರು ಪುಟ್ಟಮ್ಮ." ಕೇಳೂದ್ಯಾಕೆ? ಹಾಕು ಜಲ್ದಿ" ಎಂದ ನಂಜ. ಎಡಗೈಲಿ ಬುಡ್ಡಿ ಹಿಡಿದು ಬಲಗೈಯಲ್ಲಿ ಮಾವಿನ ಮಿಡಿ ಉಪ್ಪಿನಕಾಯಿ ಬಡಿಸಿದರು. ಇದ್ದಕ್ಕಿದ್ದಂತೆ ಬುಡ್ಡಿ ದೀಪ ಆರಿಹೋಯಿತು ನಂಜ ಅಬ್ಬರಿಸಿದ.

"ಏ ಮುದ್ಕಮ್ಮಾ ಯಾಕೆ ಆರಸ್ದೆ ದೀಪಾನಾ?"

ಪುಟ್ಟಮ್ಮ ಮರಳಿನಂತೆ ಮಾತಾಡಿದರು. "ಅಯ್ಯೋ ನನ್ನಪ್ಪಾ, ನಾನ್ಯಾಕೆ ಆರಿಸ್ಲಿ. ಇದ್ದಕ್ಕಿದ್ದ ಹಾಗೆ ಆರಿಹೋತು.ತುಸು ತಡೀರಿ ಈಗ ಹಚ್ಚಿಕೊಂಡು ಬರ್ತೀನಿ ಕಾಲ್ದೀಪದಾಗೆ."

ಅವರಿಗೆ ಕಾಣದ ಹಾಗೆ ತಾನೇ 'ಉಫ್' ಎಂದು ಹಗುರವಾಗಿ ಊದಿ ಆರಿಸಿದ ದೀಪವನ್ನ ಮತ್ತೆ ಹಚ್ಚುವ ನೆವದಿಂದ ಪುಟ್ಟಮ್ಮ ಹಿಂದಿರುಗುವಾಗ ಅದೇನು ಮಾಡಿದಳೆಂದು ಕತ್ತಲೆಯಲ್ಲಿ ಅವರಿಗೆ ತಿಳಿಯಲಿಲ್ಲ. "ಏ ಮುದ್ಕೀ ನಿನ್ನ ಸಾಯಿಸ್ಬಿಡ್ತೀನಿ " ಎಂದು ನಂಜ ಪಕ್ಕದಲ್ಲಿದ್ದ ತನ್ನ ಮಚ್ಚನ್ನು ತಡವರಿಸುವುದರಲ್ಲಿ ಪುಟ್ಟಮ್ಮ ಬುಡ್ಡಿ ಸಮೇತ ಹೊರಗೆ ದಾಟಿ ಇದ್ದ ಒಂದೇ ಬಾಗಿಲನ್ನು ಎಳೆದುಕೊಂಡು ದೊಡ್ಡ ಚಿಲಕಕ್ಕೆ ಸೇರಿಸಿದಳು.

ಅವರಿಬ್ಬರ ಕಣ್ಣುಗಳೂ ಬೆಂಕಿ ಹೊತ್ತಿಸಿದಂತೆ ಉರಿಯತೊಡಗಿದ್ದವು. ಆಗಲೇ ಅವರಿಗೆ ನೆನಪು ಬಂದಿತು. ಬೆಂಕಿಪೊಟ್ಟಣ ದೊಂದಿ ಹಿಡಿದು ಕೊಂಡವನು ಹಿತ್ತಲ ಬಾಗಿಲಲ್ಲೇ ಕಾದು ನಿಂತಿದ್ದಾನೆನ್ನುವುದು. ನಾನು ಕರೆದಾಗ ಒಳಗೆ ಬಾ ಎಂದು ನಂಜ ಹೇಳಿದ್ದರೂ ಒಳಗೆ ಬೆಳಕಿನ ಅವಶ್ಯಕತೆ ಇರಲಿಲ್ಲವಾದ್ದರಿಂದ ಅವನನ್ನು ಕರೆಯಲೇ ಇಲ್ಲ, ಒಳಗೆ ಇವರು ಆಡುವ ಮಾತುಗಳು ಮಾತ್ರ ಅಸ್ಪಷ್ಟವಾಗಿ ಅವನಿಗೆ ಕೇಳಿಸುತ್ತಿತ್ತು. ಇವರು ಉಗ್ರಾಣಕ್ಕೆ ಬಂದ ಮೇಲೆ ಅದೂ ಕೇಳಿಸಲಿಲ್ಲ. ಅವನು ಮಳೆಯಲ್ಲಿ ನೆನೆಯುತ್ತ ಅಲ್ಲೇ ನಿಂತಿದ್ದಾನೆ.

ಅವರಿಬ್ಬರ ಕಣ್ಣಿಗೆ ಸಾರಿನ ಪುಡಿ ಎರಚಿ ಬುಡ್ಡಿ ಆರಿಸಿದ ಪುಟ್ಟಮ್ಮ ಅವರಿಬ್ಬರನ್ನೂ ಉಗ್ರಾಣದಲ್ಲೇ ಕೂಡಿ ಹಾಕಿ ಬಾಗಿಲ ಚಿಲಕ ಹಾಕಿಕೊಂಡು ಸೀದಾ ಬೀದಿ ಬಾಗಿಲು ತೆಗೆದು ಪೊಲೀಸಿನವರನ್ನು ಎಬ್ಬಿಸಿದರು. ಗಾಢ ನಿದ್ರೆಯಿಂದ ಎಚ್ಚೆತ್ತ ಅವರಿಬ್ಬರೂ ಗಾಬರಿ -ತಬ್ಬಿಬ್ಬುಗಳಿಂದ ಎದ್ದು ನಿಂತು.

"ಏನ್ರಮ್ಮಣ್ಣಿ! ಏನ್ರಮ್ಮಣ್ಣಿ!" ಎಂದು ಕಂಗಾಲಾದರು. ಆದರೆ ಈಗ ಪುಟ್ಟಮ್ಮನಿಗೇನೂ ಗಾಬರಿ ಇರಲಿಲ್ಲ. ಆಕೆ ನಿಧಾನವಾಗಿಯೇ ಹೇಳಿದರು. "ಸರಿಯಾಗಿ ಕಣ್ಣು ಬಿಡ್ರಪ್ಪ. ಸಬ್ ಇನ್‌ಸ್ಪೆಕ್ಟರ್ ಮನೆಗೆ ಯಾರಾದರೂ ಒಬ್ಬರು ಹೋಗಿ ಹೇಳಿ, ಸಾಹೇಬರ ಮನೆಗೆ ಕಳ್ಳರು ಬಂದಿದ್ದಾರೆ ಅಂತ. ಅವರಿಬ್ಬರನ್ನೂ ಕೋಣೇಲಿ ಕೂಡಿ ಹಾಕಿದೀವಿ. ಬೇಗ ಬರಹೇಳು ಅವರನ್ನ."

ಯಾವುದೂ ಸರಿಯಾಗಿ ಅರ್ಥವಾಗದ ಸ್ಥಿತಿಯಲ್ಲಿರಲಿಲ್ಲವಾದರೂ ಒಬ್ಬ ಹೊರಟ ಸಬ್ ಇನ್ ಸ್ಪೆಕ್ಟರ ಮನೆಗೆ. ಅವನಿಗೂ ಆ ಕತ್ತಲೆ ಮಳೆಯಲ್ಲಿ ಹೋಗಲೂ ಹೆದರಿಕೆಯೇ. ಮಳೆಯಿಂದಾಗಿ ಬೀದಿಯ ಲಾಂದ್ರ ಕಂಬದ ದೀಪಗಳೂ ನಂದಿಹೋಗಿದ್ದವು. ಅಂತೂ ಹೇಗೋ ಹತ್ತು ನಿಮಿಷದಲ್ಲಿ ಸಬ್ ಇನ್ ಸ್ಪೆಕ್ಟರ್ ಪೊಲೀಸಿನವರೊಂದಿಗೆ ಕೈಕೋಳ ಸಮೇತರಾಗಿ ಬಂದರು. ಸಂಕ್ಷಿಪ್ತ ವರದಿ ಕೊಟ್ಟರು ಪುಟ್ಟಮ್ಮ.

ಉಗ್ರಾಣದಲ್ಲಿ ನಂಜನ ಆರ್ಭಟ ನಡೆದಿತ್ತು. ಮೆಣಸಿನ ಪುಡಿ ತುಂಬಿಕೊಂಡ ಕಣ್ಣುಗಳನ್ನು ಬಿಡುವಂತೆಯೇ ಇರಲಿಲ್ಲ. ಅವನ ಕೂಗಾಟದಿಂದ ಹಿತ್ತಲ ಬಾಗಿಲಲ್ಲಿ ದೊಂದಿ, ಬೆಂಕಿಪೊಟ್ಟಣ ಮತ್ತು ಮಚ್ಚು ಹಿಡಿದ ಮತ್ತೊಬ್ಬ ಕಳ್ಳನಿದ್ದಾನೆ ಎಂದು ಇವರಿಗೆ ತಿಳಿಯಿತಾದರೂ ಅವನಿಗೆ ಒಳಗಿನ ಸಂದರ್ಭ ತಿಳಿದು ಅವನಾಗಲೇ ಪಲಾಯನ ಸೂಕ್ತ ಹೇಳಿದ್ದ. ಸಬ್ ಇನ್ ಸ್ಪೆಕ್ಟರು ಬರುವಾಗಲೇ ಹಿಲಾಲು ಹತ್ತಿಸಿಕೊಂಡೇ ಬಂದಿದ್ದರು. ಒಳಗೆ ಸಿಕ್ಕಿ ಬಿದ್ದಿರುವವನು ಕಿಕ್ಕೇರಿ ನಂಜ ಎಂದು ತಿಳಿದ ಕೂಡಲೇ ಅವರಿಗೆ ಹತ್ತು ಭುಜ ಬಂದಂತಾಗಿದ್ದರೂ ತಮ್ಮಂಥ ಘಟಾನುಘಟಿಗಳು ಹತ್ತಾರು ವರ್ಷಗಳಿಂದ ಹೆಣಗುತ್ತಿದ್ದರೂ ಸಾಧ್ಯವಾಗದ ಈ ಮಹಾ ಸಾಹಸದ ಕೆಲಸವನ್ನು ಯಃಕಶ್ಚಿತ್ ಹೆಂಗಸು ಲೀಲಾಜಾಲವಾಗಿ ಮಾಡಿಬಿಟ್ಟಿದ್ದಾಳಲ್ಲಾ ಎನ್ನುವ ಅಳುಕು ತಲೆದೋರಿದರೂ, ಕಡೆಗೂ ನಮ್ಮ ಡಿವಿಜನ್ನಿನವರೇ ನಂಜನನ್ನು ಹಿಡಿದಂತಾಯಿತಲ್ಲಾ ಎನ್ನುವ ಸಮಾಧಾನದೊಡನೆ ಹುರುಪಿನಿಂದ ಕೆಲಸ ಮಾಡಿದರು. ಹೆಬ್ಬುಲಿಯಂಥ ನಂಜನನ್ನು ಸುಂಡಲಿಯಂತೆ ಬೋನಿನಲ್ಲಿ ಹಿಡಿದು ಹಾಕಿದ್ದರು ಪುಟ್ಟಮ್ಮ.

ಬಾಗಿಲು ತೆಗೆದ ಕೂಡಲೇ ಕಳ್ಳರು ತಮ್ಮ ಕೈಲಿದ್ದ ಮಚ್ಚನ್ನು ಬೀಸಿದರು. ಆದರೆ ಅವರು ಕಣ್ಣು ಬಿಡುವಂತಿರಲಿಲ್ಲವಾದ್ದರಿಂದ ಇಬ್ಬರದೂ ಗುರಿ ತಪ್ಪಿ ಮಚ್ಚು ದೂರ ಬಿದ್ದು ಅವರ ಕೈಗಳಿಗೆ ಬಲವಾದ ಕೋಳಗಳು ಬಿದ್ದವು.

ಬೆಳಗಾಗುವುದರೊಳಗೆ ಅರಸಿಕೆರೆಯ ತುಂಬಾ ಪುಟ್ಟಮ್ಮನ ಸಾಹಸದ ಸುದ್ದಿಯೇ. ಇನ್ ಸ್ಪೆಕ್ಟರು ಅಂದೆ ಸಂಜೆ ಊರಿಗೆ ಬಂದರು. ಯಥಾ ಪ್ರಕಾರ ತಮ್ಮ ಒಡವೆಗಳನ್ನೆಲ್ಲಾ ಇಟ್ಟುಕೊಂಡೆ ಆಕೆ ಗಂಡನನ್ನು ಇದಿರ್ಗೊಂಡರು. ನಷ್ಟವಾದದ್ದು ಪುಟ್ಟಮ್ಮನ ಉಗ್ರಾಣದ ಮಡಿ ಸಾಮಾನುಗಳು ಮಾತ್ರ. ಅಲ್ಲೆಲ್ಲಾ ನಂಜನ ಎಂಜಲಿನ ರಂಪ. ಅದನ್ನೆಲ್ಲಾ ಪೊಲೀಸಿನವರೇ ಶುದ್ಧಗೊಳಿಸಿದರು.

ಅಂತೂ ಅಂದಿನ ಮಹಾಪಿಡುಗಾಗಿದ್ದ ಕಿಕ್ಕೇರಿ ನಂಜ ಲೀಲಾಜಾಲವಾಗಿ ಕೈಸೆರೆ ಸಿಕ್ಕಿದ. ಅವನ ಹಿಂದಿನ ಅನೇಕ ಅಪರಾಧಗಳು ಕೃತವಾಗಿ ಅವನಿಗೆ ಗಲ್ಲಿನ ಶಿಕ್ಷೆಯಾಯಿತು. ಆ ಸುದ್ದಿ ಕೇಳಿದಾಗ ನಿಜವಾಗಿ ಪುಟ್ಟಮ್ಮ ಬೇಜಾರು ಪಟ್ಟುಕೊಂಡರು. "ಪಾಪ, ನಾನೇ ಹೊಟ್ಟೆ ತುಂಬ ತಿಂಡಿ ಕೊಟ್ಟು, ನಾನೇ ಅವನ ಕಣ್ಣಿಗೆ ಮೆಣಸಿನ ಪುಡಿ ಹಾಕಿದೆ, ನಾನೇ ಅವನ್ನ ಸಾಯಿಸಿದ ಹಾಗಾಯ್ತು!" ಎಂದು ನಿಜವಾಗಿ ಆಕೆಯ ಮನ ನೊಂದಿತು. ನರಸಿಂಗರಾಯರು ಮಾತ್ರ ಹೆಂಡತಿಯನ್ನು "ಯಾವ ಗಳಿಗೇಲಿ ನಿನಗೆ ಪೊಲೀಸು ಪುಟ್ಟಮ್ಮ ಅನ್ನೋ ಹೆಸರು ಇಟ್ಟರೋ! ಅಂತೂ ನೀನು ಆ ಬಿರುದನ್ನು ಶಾಶ್ವತ ಮಾಡಿಕೊಂಡುಬಿಟ್ಟೆ" ಎಂದು ವಿನೋದ ಮಾಡಿದರು.

## ಲೇಖಕಿಯ ಪರಿಚಯ



ಎಂ.ಕೆ. ಇಂದಿರಾ ೧೯೧೭ ಜನವರಿ ೫ ರಂದು ತೀರ್ಥಹಳ್ಳಿಯಲ್ಲಿ ಜನಿಸಿದರು. ಅವರ ತಂದೆ ಹೆಸರು ತರೀಕೆರೆ ಸೂರ್ಯನಾರಾಯಣರಾವ್, ತಾಯಿ ಬನಶಂಕರಮ್ಮ. ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ತೀರ್ಥಹಳ್ಳಿಯಲ್ಲಿ ಪಡೆದರು. ೧೯೬೩ ರಲ್ಲಿ ಅವರು ಪ್ರಥಮವಾಗಿ ತುಂಗಭದ್ರ ಎಂಬ ಕಾದಂಬರಿಯನ್ನು ರಚಿಸಿದರು. ಮಲೆನಾಡಿನ ಸಹ್ಯಾದ್ರಿ ಶ್ರೇಣಿ, ಭೀಮವೃಕ್ಷರಾಜಿ, ಹಕ್ಕಿಗಳ ಇಂಚರ, ಹಸಿರು ಅವರ ಇತರ ಕಾದಂಬರಿಗಳಾಗಿವೆ. ದಶಾವತಾರ, ಅಂಬರದ ಅಪ್ಸರೆ, ನವರತ್ನ, ನವ ಜೀವನ ಮತ್ತು ಪೌರ್ಣಮಿ ಅವರ ಪ್ರಸಿದ್ಧ ಕಥಾಸಂಕಲನಗಳು. ಅನುಭವ ಕುಂಜ ಎಂಬ ಪ್ರವಾಸ ಕಥನವನ್ನು ಬರೆದಿದ್ದಾರೆ. ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇಜಗೌ ಪ್ರಶಸ್ತಿಗಳು ಲಭಿಸಿವೆ. 'ಸುರಗಿ' ಎಂಬುದು ಅವರ ಅಭಿನಂದನ ಗ್ರಂಥ. ಇದಲ್ಲದೆ ಹಲವಾರು ಗೌರವ, ಪ್ರಶಸ್ತಿಗಳು ಇವರಿಗೆ ಸಂದಿವೆ. ೧೯೯೪ ಮಾರ್ಚ್ ೧೫ ರಂದು ಅವರು ನಿಧನರಾದರು.

ಪ್ರಸ್ತುತ ಕತೆಯನ್ನು ಡಾ. ಎನ್. ಗಾಯತ್ರಿ ಅವರು ಸಂಪಾದಿಸಿದ 'ಎಂ.ಕೆ.ಇಂದಿರಾ ಸಾಹಿತ್ಯ ವಾಚಿಕೆ' ಎಂಬ ಪುಸ್ತಕದಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಪುಟ್ಟಮ್ಮನವರನ್ನು 'ಪೊಲೀಸ್ ಪುಟ್ಟಮ್ಮ'ನೆಂದು ಕರೆಯಲು ಕಾರಣವೇನು?
2. ನಂಜನನ್ನು ನೋಡಿದ ಕೂಡಲೇ ಪೊಲೀಸ್ ಪುಟ್ಟಮ್ಮ ಕಳ್ಳನೆಂದು ತಿಳಿದ ಬಗೆ ಹೇಗೆ?
3. ಕಳ್ಳ ನಂಜನನ್ನು ಪುಟ್ಟಮ್ಮ ಸೆರೆಹಿಡಿದ ರೀತಿಯನ್ನು ತಿಳಿಸಿರಿ.
4. ಯಾವ ಸುದ್ದಿ ಕೇಳಿ ಪುಟ್ಟಮ್ಮ ಬೇಜಾರು ಪಟ್ಟುಕೊಂಡರು?

## ಪಾತ್ರ ಚಿತ್ರಣ ಮಾಡಿರಿ

'ಪೊಲೀಸ್ ಪುಟ್ಟಮ್ಮ' ಕತೆಯಲ್ಲಿ ಬರುವ ಪುಟ್ಟಮ್ಮನ ಪಾತ್ರ ಚಿತ್ರಣವನ್ನು ಬರೆಯಿರಿ.

## ಶಿಷ್ಟರೂಪಕ್ಕೆ ಪರಿವರ್ತಿಸಿರಿ

ಕೆಳಗೆ ನೀಡಲಾದ ಗ್ರಾಮ್ಯರೂಪದಲ್ಲಿರುವ ವಾಕ್ಯಗಳನ್ನು ಶಿಷ್ಟ ರೂಪಕ್ಕೆ ಪರಿವರ್ತಿಸಿರಿ.

ಅಮ್ಮೋ! ನಿನ್ನ ಗಂಡ ಕಿಕ್ಕೇರಿ ನಂಜನ್ನ ಹಿಡಿಯಾಕೆ ಹೋಗವ್ನೆ. ನಾ ಬಲ್ಲೆ. ಎಳ್ಡ್ ಪೊಲೀಸಪ್ಪನ್ನ ಮನೀಗೆ ಕಾವಲು ಹಾಕಿ ಹೋಗವನೆ. ಎಳ್ಡೂ ಗಡದ್ದಾಗಿ ನಿದ್ದೆ ಹೊಡೆದವೆ. ಪಾಪ ಬೆಚ್ಚಗೆ ಮಲಗಿರಲಿ. ನೀನೇನಾರಾ ಕೂಗೀ ಗೀಗೀ ಗಲಾಟೆ ಮಾಡ್ದೆ ಅಂದ್ರೆ ಇತ್ತಾಗಿ ನೋಡು ಮಚ್ಚು!

## ಸಂಭಾಷಣೆ ಬರೆಯಿರಿ

ಸಾಹುಕಾರ ಚೆನ್ನಪ್ಪನವರ ಆಜ್ಞೆಯಂತೆ ಕಳ್ಳನನ್ನು ಹಿಡಿಯಲು ನರಸಿಂಗರಾಯರು ಮನೆಯಿಂದ ಹೊರಡುವ ಸಂದರ್ಭದಲ್ಲಿ ರಾಯರು ಮತ್ತು ಪೊಲೀಸ್ ಪುಟ್ಟಮ್ಮನವರೊಳಗೆ ನಡೆದ ಮಾತುಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

## ಪತ್ರ ಬರೆಯಿರಿ

'ಪೊಲೀಸ್ ಪುಟ್ಟಮ್ಮ' ಕತೆಯನ್ನು ಓದಿರುವಿರಲ್ಲವೇ? ಆ ಕತೆಯನ್ನು ನಿಮ್ಮ ಗೆಳೆಯ ಅಥವಾ ಗೆಳತಿಗೆ ಪತ್ರದ ಮೂಲಕ ಬರೆದು ತಿಳಿಸಿರಿ.

## ಊಹಿಸಿ ಬರೆಯಿರಿ

'ಪೊಲೀಸ್ ಪುಟ್ಟಮ್ಮ' ಕತೆಯಲ್ಲಿ ಪುಟ್ಟಮ್ಮನವರಿಗೆ ಕಳ್ಳನನ್ನು ಹಿಡಿಯಲು ಸಾಧ್ಯವಾಗದೇ ಇರುತ್ತಿದ್ದರೆ ಏನಾಗುತ್ತಿತ್ತು ಎಂಬುದನ್ನು ಊಹಿಸಿ ಕತೆ ಮುಂದುವರಿಸಿ ಬರೆಯಿರಿ. ಅದಕ್ಕೆ ಸೂಕ್ತ ಶೀರ್ಷಿಕೆ ನೀಡಿರಿ.

## ಲೇಖನ ಚಿಹ್ನೆಗಳನ್ನು ಅಳವಡಿಸಿರಿ

ಕೆಳಗೆ ಕೊಡಲಾದ ವಾಕ್ಯಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿರಿ.

ಮಹಾರಾಜರಿಗೆ ಚಾಮರ ಬೀಸುತ್ತಿದ್ದ ಸೇವಕರೊಬ್ಬರು ಮಹಾಸ್ವಾಮಿ ನನ್ನದು ಅಧಿಕ ಪ್ರಸಂಗವೆಂದು ನೀವು ಭಾವಿಸುವುದಿಲ್ಲವಾದರೆ ನಾನು ಪ್ರಶ್ನೆಗೆ ಉತ್ತರಿಸಬಹುದೇ ಎಂದು ಕೇಳಿದರು

## ವಾಕ್ಯ ರಚನೆ ಮಾಡಿರಿ

ಕೆಳಗೆ ಕೊಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಬಳಸಿ ಬೇರೆ ವಾಕ್ಯಗಳನ್ನು ರಚಿಸಿರಿ.

- ನನ್ನ ಮನೆಯ ಹತ್ತಿರವಿರುವ ಗೋದಾಮಿಗೆ ಬೆಂಕಿ ಬಿದ್ದಾಗ ಅಗ್ನಿಶಾಮಕ ದಳದವರು ದೌಡಾಯಿಸಿ ಬಂದರು.
- ಸರ್ಕಸ್ ನಲ್ಲಿ ಹುಡುಗಿಯೊಬ್ಬಳು ತಂತಿಯ ಮೇಲೆ ಲೀಲಾಜಾಲವಾಗಿ ನಡೆಯುತ್ತಿದ್ದಳು.
- ಬೆಳಗ್ಗೆ ಎದ್ದು ಭೂಮಿತಾಯಿಗೆ ವಂದಿಸುವುದು ಜನಪದರ ವಾಡಿಕೆಯಾಗಿತ್ತು.

## ಪ್ರಶ್ನೆ ತಯಾರಿಸಿರಿ

ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ ಪ್ರಧಾನ ಆಶಯಗಳು ಉತ್ತರವಾಗಿ ಬರುವಂತೆ ನಾಲ್ಕು ಪ್ರಶ್ನೆಗಳನ್ನು ತಯಾರಿಸಿರಿ.

ಮನುಷ್ಯನ ಬದುಕಿಗೆ ಅತಿ ಅಗತ್ಯವಾದ ಹಾಗೂ ಪಂಚಭೂತಗಳಲ್ಲೊಂದಾದ ಜೀವಜಲಕ್ಕೆ ಸರಿಸಾಟಿಯಾದುದು ಪ್ರಾಯಶಃ ಈ ಜಗತ್ತಿನಲ್ಲಿ ಯಾವುದೂ ಇಲ್ಲ. ವಿಜ್ಞಾನದ ಪ್ರಕಾರ ನೀರು ದಹನ ಅನಿಲವಾದ ಜಲಜನಕ ಮತ್ತು ದಹನಾನುಕೂಲಿಯಾದ ಆಮ್ಲಜನಕ ಸೇರಿ ಉಂಟಾದ ಏಕೈಕ ವಿಶೇಷವಸ್ತು. ಬೆಂಕಿಯನ್ನು ನಂದಿಸುವ, ಭೌತಿಕವಾಗಿ ಘನ, ದ್ರವ, ಅನಿಲ ಈ ಮೂರು ಸ್ಥಿತಿಯಲ್ಲಿಯೂ ದೊರೆಯುವ ಜೀವನಾಡಿ. ನೀರು ಸಾರ್ವತ್ರಿಕ ದ್ರಾವಕವೂ ಹೌದು. ತನ್ನಲ್ಲಿ ಹೆಚ್ಚಿನ ವಸ್ತುಗಳನ್ನು ಕರಗಿಸಿಕೊಳ್ಳುವ ಗುಣ ಅದರಲ್ಲಿದೆ. ನಮ್ಮ ಭೂಮಿಯಲ್ಲಿ ನೆಲದ ಭಾಗಕ್ಕಿಂತ ನೀರಿರುವ ಭಾಗವೇ ಹೆಚ್ಚು. ಒಟ್ಟು ನೀರಿನ ೯೭ ಶೇಕಡಾ ಉಪ್ಪು ನೀರು. ಇನ್ನುಳಿದ ಶೇಕಡ ೩ ರಲ್ಲಿ ೨.೫ (ಎರಡೂವರೆ) ಶುದ್ಧ ನೀರು. ಕೆರೆ, ಬಾವಿ, ನದಿ ಮುಂತಾದವುಗಳು ಕುಡಿಯುವ ನೀರಿನ ಆಕರಗಳಾಗಿವೆ. ಇವುಗಳನ್ನು ಮಲಿನವಾಗದಂತೆ ಸಂರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ.

## ಓದಿರಿ

ಎಂ.ಕೆ. ಇಂದಿರಾರವರ ಇತರ ಸಣ್ಣ ಕಥೆಗಳನ್ನು ಗ್ರಂಥಾಲಯದ ಸಹಾಯದಿಂದ ಓದಿ ತಿಳಿಯಿರಿ.

# 3. ಕಾಯಕವೇ ಕೈಲಾಸ

ಉದ್ಯೋಗವೆನ್ನುವುದು ಪ್ರತಿಯೊಬ್ಬರಿಗೂ ಅನಿವಾರ್ಯ. ಯಾವುದೇ ಕೆಲಸ ಮೇಲೂ ಅಲ್ಲ; ಕೀಳೂ ಅಲ್ಲ. ಕೆಲಸದಲ್ಲಿ ಪ್ರಾಮಾಣಿಕತೆ, ಗೌರವ, ನಿಷ್ಠೆ ಇರಬೇಕು. ಸ್ತ್ರೀ-ಪುರುಷ ಭೇದವಿಲ್ಲದೆ ಎಲ್ಲರೂ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ದೊರೆತ ಉದ್ಯೋಗದಲ್ಲಿ ಸಂತೃಪ್ತಿಯನ್ನು ಕಾಣಬೇಕು. ತಾಳ್ಮೆ, ಸಹನೆ ಹಾಗೂ ಜಾಣ್ಮೆಯಿಂದ ಕೆಲಸ ನಿರ್ವಹಿಸುವ ಚಮತ್ಕಾರ ನಮ್ಮಲ್ಲಿರಬೇಕು. 'ಕಾಯಕವೇ ಕೈಲಾಸ' ಎಂಬ ಆಶಯದಂತೆ ದುಡಿಮೆಯ ಮಹತ್ವವನ್ನು ಅರಿತು ಬಾಳಬೇಕು.



ಘಟಕದ ಆರಂಭದಲ್ಲಿ ಬರುವ ಪ್ರವೇಶ ಚಟುವಟಿಕೆಯಾದ 'ಸಂತೃಪ್ತಿ'ಯು ದುಡಿಮೆಯಲ್ಲಿ ಸಂತೃಪ್ತಿಗೊಳ್ಳಬೇಕೆಂಬ ವಿಚಾರವನ್ನು ತಿಳಿಸುತ್ತದೆ. ಡಾ. ಸಿದ್ಧಲಿಂಗಯ್ಯನವರು 'ಅಗ್ನಿಶಾಮಕರು' ಕವನದಲ್ಲಿ ವೈಷಮ್ಯವೆಂಬ ಬೆಂಕಿಯನ್ನು ನಂದಿಸುವ ಅಗ್ನಿಶಾಮಕರು ನಾವಾಗಬೇಕೆಂದು ಕರೆ ನೀಡಿದ್ದಾರೆ.

'ಕಲ್ಲಪ್ಪದ ಹೋಟೆಲು' ಎಂಬ ಲಲಿತ ಪ್ರಬಂಧವು ಪ. ರಾಮಕೃಷ್ಣ ಶಾಸ್ತ್ರಿಯವರ ರಚನೆಯಾಗಿದೆ. ಇಲ್ಲಿ ಕಲ್ಲಪ್ಪದ ಹೋಟೆಲ್ ನಡೆಸುವ ಷೇಕಬ್ಬನ ಕಾಯಕನಿಷ್ಠೆಯ ಜೊತೆಗೆ ಅವನ ಸನ್ನಡತೆ ಮತ್ತು ಸದ್ಗುಣ ಅನಾವರಣಗೊಳ್ಳುತ್ತದೆ.

ಪ್ರಖ್ಯಾತ ನಾಟಕಕಾರ ಶೇಕ್ಸ್‌ಪಿಯರ್‌ನ ಪ್ರಸಿದ್ಧ ನಾಟಕಗಳಲ್ಲೊಂದಾದ 'ಮರ್ಚೆಂಟ್ಸ್ ಆಫ್ ವೆನಿಸ್'ನ್ನು ಕಾರ್ಕಡ ರಾಮಚಂದ್ರ ಉಡುಪರು 'ನ್ಯಾಯದ ತಕ್ಕಡಿ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಈ ನಾಟಕವು ಸದ್ಗುಣಿಯಾದ ವ್ಯಕ್ತಿಯ ಮೇಲೆ ಆರೋಪ ಬಂದಾಗ ಸರಿಯಾದ ತೀರ್ಪಿನ ಮೂಲಕ ಆ ವ್ಯಕ್ತಿಯ ಜೀವವನ್ನು ಉಳಿಸಿದ ಘಟನೆಯನ್ನು ಚಿತ್ರಿಸಿದೆ.

# ಸಂತೃಪ್ತಿ

ತಾನು ಮಾಡುವ ಕೆಲಸದಲ್ಲಿ ಪ್ರತಿಯೊಬ್ಬರೂ ಆನಂದವನ್ನು ಕಂಡುಕೊಳ್ಳಬೇಕು. ತನ್ನ ವೃತ್ತಿಯಲ್ಲಿ ಸುಖವನ್ನು ಕಾಣದೇ ಇರುವ ಮನುಷ್ಯನು ಅದನ್ನು ಬೇರೆ ಇನ್ನೆಲ್ಲಿಯೂ ಕಾಣುವುದು ಸಾಧ್ಯವಿಲ್ಲ. ತನ್ನ ಕೆಲಸದಲ್ಲಿಯೇ ಸಂತೋಷಪಟ್ಟುಕೊಳ್ಳುವ ಮನುಷ್ಯನು, ತನ್ನ ಆಯುಷ್ಯವನ್ನು ವೃದ್ಧಿ ಮಾಡಿಕೊಳ್ಳುತ್ತಾನೆ.

ಜೀವನದಲ್ಲಿ ಸುಖವನ್ನು ಪಡೆಯಬೇಕೆನ್ನುವ ಮನುಷ್ಯನು ತನ್ನ ಕೆಲಸದಲ್ಲಿ ಹೆಚ್ಚಿನ ಸಂತೋಷವನ್ನು ಕಂಡುಕೊಳ್ಳುತ್ತಾನೆ. ಸಂತೋಷವೆನ್ನುವುದು ಮನಸ್ಸಿನ ಒಂದು ಸ್ಥಿತಿ. ಸ್ವರ್ಗ ಎನ್ನುವುದು ಬೇರೆ ಎಲ್ಲಿಯೂ ಇಲ್ಲ. ಅದು ಸುಖೀ ಮನಸ್ಸಿನಲ್ಲಿಯೇ ಇದೆ. ಒಬ್ಬ ಮನುಷ್ಯನ ಸಂತೋಷವು ಅವನ ಪ್ರಸನ್ನ ಮುಖಮುದ್ರೆಯಿಂದ ಅವನ ಸುತ್ತಲೂ ಇರುವ ಜನರ ಮನಸ್ಸಿನಲ್ಲಿ ಕೂಡ ಸಂತೋಷದ ಅಲೆಯನ್ನು ಎಬ್ಬಿಸುತ್ತದೆ.

ಪ್ರಸನ್ನಚಿತ್ತದಿಂದ ಕೆಲಸ ಮಾಡುವವನು ಹೆಚ್ಚು ಕೆಲಸಮಾಡುತ್ತಾನೆ.ತನ್ನಕೆಲಸವನ್ನುಸಂತೋಷದಿಂದ ಮಾಡುವ ಮನುಷ್ಯನು ಸವೆದು ಹೋಗುವುದಿಲ್ಲ. ಸಂತೋಷವು ಮನಸ್ಸಿನ ಸವಕಳಿಯನ್ನು ತೊಡೆದು ಹಾಕುತ್ತದೆ. ಕೆಲಸದಲ್ಲಿ ಹೊರಸೂಸುವ ಆನಂದವು ಮನುಷ್ಯನ ಆಯುಷ್ಯವನ್ನು ಗಟ್ಟಿ ಮಾಡುತ್ತದೆ. ಹೆಚ್ಚು ಕಾಲ ಸುಖದಿಂದ ಬದುಕಬೇಕೆನ್ನುವವರು ನಸುನಗುತ್ತಾ ಕೆಲಸ ಮಾಡಬೇಕು. ಸಂತೋಷದಿಂದ ಮಾಡುವ ಕೆಲಸದಲ್ಲಿ ಜೀವದಾಯಕ ಶಕ್ತಿ ಇದೆ.

ಈ ಜಗತ್ತು ಮನುಷ್ಯನ ಸುಖವನ್ನು ಹೆಚ್ಚಿಸಿ ಮನುಷ್ಯನ ವಾಸಕ್ಕೆ ಅನುಕೂಲವೆನಿಸುವ ಸ್ಥಳವೆನಿಸಬೇಕಾದರೆ ಪ್ರತಿಯೊಬ್ಬ ಮನುಷ್ಯನೂ ತನ್ನ ಸುಖವನ್ನು ತನ್ನ ಕೆಲಸದಲ್ಲಿಯೇ ಕಂಡುಕೊಳ್ಳಬೇಕು. ನಾವು ಮನಸ್ಸುಕೊಟ್ಟು ಮಾಡುವ ಕೆಲಸವು ನಮಗೆ ಅನೇಕ ಸದ್ಗುಣಗಳನ್ನು ಕಲಿಸಿಕೊಡುತ್ತದೆ. ಕೆಲಸದಲ್ಲಿರುವ ನಮ್ಮ ಮನಸ್ಸು ಬೇರೆ ಯಾವುದರ ಕಡೆಗೂ ಹರಿಯುವುದಿಲ್ಲ. ಕೆಲಸ ಮಾಡುವವನು,ತಾನು ಸುಖಪಡುತ್ತಾ, ಲೋಕದ ಸಂತೋಷಕ್ಕೂ ಕಾರಣನೆನಿಸುತ್ತಾನೆ.

- ಪಾಟೀಲ ಪುಟ್ಟಪ್ಪ

- ಮೇಲಿನ ಲೇಖನವನ್ನು ಓದಿ ನಿಮ್ಮ ಅಭಿಪ್ರಾಯಗಳನ್ನು ತರಗತಿಯಲ್ಲಿ ಮಂಡಿಸಿರಿ.

# ಅಗ್ನಿಶಾಮಕರು

- ಡಾ. ಸಿದ್ಧಲಿಂಗಯ್ಯ



ಧರೆ ಹತ್ತಿ ಉರಿದಾಗ ಗಂಗೆಯನು ತಂದವರು
ಕಟ್ಟಡವು ಕುಸಿದಾಗ ಹೆಗಲು ಕೊಟ್ಟವರು
ಕೆರೆಗೆ ಬಿದ್ದವನನ್ನು ಬಿಗಿದಪ್ಪಿ ತಂದವರು
ಅಗ್ನಿಶಾಮಕರು ನಮ್ಮ ಸೋದರರು.

ಹಗಲು ಸುಡುತ್ತಿದ್ದರೂ ನಡುರಾತ್ರಿಯಿದ್ದರೂ
ಕರೆಬಂದ ಕೂಡಲೇ ಮಡದಿ ಮಕ್ಕಳ ಬಿಟ್ಟು
ಓಡೋಡಿ ಬರುವವರು
ತಂಗಳೂಟವನುಂಡು ಹೊಗೆಯ ಕಾಡಿಗೆ ನುಗ್ಗಿ
ಹೋರಾಡುವವರು
ಹಲವು ದಿನಗಳಿಗೊಮ್ಮೆ ಕರುಳ ಕುಡಿಗಳ ಕಂಡು
ನಗೆ ಚೆಲ್ಲುವವರು
ಅಗ್ನಿಶಾಮಕರು ನಮ್ಮ ಸೋದರರು.

ಜಾತಿವೈರದ ಜ್ವರವು ಏರುತಿಹುದಣ್ಣ
ಕೋಮು ದ್ವೇಷದ ಬೆಂಕಿ ಉರಿಯುತಿಹುದಣ್ಣ
ಈ ಬೆಂಕಿಯಾರಿಸಲು ಪ್ರೀತಿಗಂಗೆಯು ಬೇಕು.
ಎಲ್ಲರೂ ಅಗ್ನಿಶಾಮಕರಿಂದು ಆಗಬೇಕು.

## ಕವಿ ಪರಿಚಯ



ಡಾ. ಸಿದ್ದಲಿಂಗಯ್ಯನವರು ಕನ್ನಡದ ಪ್ರಸಿದ್ಧ ಲೇಖಕರಲ್ಲಿ ಒಬ್ಬರು. ೧೯೫೪ ರಲ್ಲಿ ಬೆಂಗಳೂರಿನ ಮಾಗಡಿಯಲ್ಲಿ ಜನಿಸಿದ ಇವರು ದಲಿತ ಕವಿ ಎಂದೇ ಪ್ರಸಿದ್ಧರು. ಹೊಲೆ ಮಾದಿಗರ ಹಾಡು ಇವರ ಮೊದಲ ಕವನ ಸಂಕಲನ. ಮೆರವಣಿಗೆ, ಸಾವಿರಾರು ಹಾಡು, ಆಯ್ದ ಕವಿತೆಗಳು ಇವರ ಇತರ ಕವನ ಸಂಕಲನಗಳು. ಗ್ರಾಮ ದೇವತೆಗಳು ಅವರ ಪಿಎಚ್ ಡಿ ಮಹಾ ಪ್ರಬಂಧ. ಏಕಲವ್ಯ, ಪಂಚಮ ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಕರ್ನಾಟಕ ಸರಕಾರದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸಿದ್ದಾರೆ. ೨೦೧೫ ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ೮೧ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವು ಇವರಿಗೆ ಸಂದಿದೆ. ರಾಜ್ಯೋತ್ಸವ ಪ್ರಶಸ್ತಿ, ಅಂಬೇಡ್ಕರ್ ಶತಮಾನೋತ್ಸವ ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ. ಇವರು ೨೦೨೧ ಜೂನ್ ೧೧ ರಂದು ನಿಧನರಾದರು. ಪ್ರಸ್ತುತ ಕವನವನ್ನು ಇವರ "ನನ್ನ ಜನಗಳು" ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

1. ಆಪತ್ತು ಒದಗಿದಾಗ ಅಗ್ನಿಶಾಮಕರು ನಮ್ಮನ್ನು ಹೇಗೆ ರಕ್ಷಿಸುತ್ತಾರೆ?
2. 'ಅಗ್ನಿಶಾಮಕರು' ಕವನದಲ್ಲಿ ಅಗ್ನಿಶಾಮಕರ ಸ್ವಾರ್ಥರಹಿತ ಬದುಕನ್ನು ಹೇಗೆ ಚಿತ್ರಿಸಲಾಗಿದೆ?
3.' ಯಾವ ಬೆಂಕಿಯನ್ನು ಆರಿಸಲು ಪ್ರೀತಿ ಗಂಗೆ ಬೇಕು ಎಂದು ಕವಿ ಹೇಳಿದ್ದಾರೆ?
4. 'ಎಲ್ಲರೂ ಅಗ್ನಿಶಾಮಕರಿಂದು ಆಗಬೇಕು' ಎಂದು ಹೇಳುವಲ್ಲಿ ಕವಿ ನೀಡುವ ಸಂದೇಶವೇನು?

## ಆಶಯ ಬರೆಯಿರಿ

'ಅಗ್ನಿಶಾಮಕರು' ಕವನದ ಆಶಯವನ್ನು ಬರೆಯಿರಿ.

## ಸಾಲು ಗುರುತಿಸಿರಿ

ಕವನದಲ್ಲಿ ನಿಮಗಿಷ್ಟವಾದ ಸಾಲುಗಳನ್ನು ಗುರುತಿಸಿ ಇಷ್ಟವಾಗಲು ಕಾರಣವೇನೆಂದು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಈ ಕೆಳಗಿನ ಕವನದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಜಾತಿ ವೈರದ ಜ್ವರವು ಏರುತಿಹುದಣ್ಣ
ಕೋಮುದ್ವೇಷದ ಬೆಂಕಿ ಉರಿಯುತಿಹುದಣ್ಣ
ಈ ಬೆಂಕಿಯಾರಿಸಲು ಪ್ರೀತಿ ಗಂಗೆಯು ಬೇಕು
ಎಲ್ಲರೂ ಅಗ್ನಿಶಾಮಕರಿಂದು ಆಗಬೇಕು.

## ವಾಕ್ಯ ರಚಿಸಿರಿ

ಕೆಳಗೆ ನೀಡಲಾದ ಪದಗಳಿಗೆ ಪರ್ಯಾಯ ಪದಗಳನ್ನು ಬರೆದು ಅವುಗಳನ್ನು ಉಪಯೋಗಿಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿರಿ.

ಧರೆ - .................

ಬೆಂಕಿ - .................

## ಪ್ರಬಂಧ ಬರೆಯಿರಿ

'ರಾಷ್ಟ್ರೀಯ ಭಾವೈಕ್ಯ' ಎಂಬ ವಿಷಯದ ಕುರಿತು ಪ್ರಬಂಧವೊಂದನ್ನು ಬರೆಯಿರಿ.

## ವಿಶ್ಲೇಷಣಾ ಟಿಪ್ಪಣಿ ಬರೆಯಿರಿ

ಹಗಲು ಸುಡುತ್ತಿದ್ದರೂ ನಡುರಾತ್ರಿಯಿದ್ದರೂ
ಕರೆಬಂದ ಕೂಡಲೇ ಮಡದಿ ಮಕ್ಕಳ ಬಿಟ್ಟು
ಓಡೋಡಿ ಬರುವವರು.

ಈ ಮೇಲಿನ ಸಾಲುಗಳ ಆಧಾರದಲ್ಲಿ ಅಗ್ನಿಶಾಮಕರ ದುಡಿಮೆ, ಶ್ರಮ, ಕೆಲಸದ ಮೇಲಿನ ನಿಷ್ಠೆಗಳ ಕುರಿತು ವಿಶ್ಲೇಷಣಾ ಟಿಪ್ಪಣಿ ಬರೆಯಿರಿ.

## ಕವನವನ್ನು ಸಂಗ್ರಹಿಸಿ ಬರೆಯಿರಿ

ಕಿತ್ತಳೆ ಹಣ್ಣಲ್ಲ ಎನ್ನುವ ಕವನವನ್ನು ಕೆಳಗೆ ಕೊಡಲಾಗಿದೆ. ಇದೇ ರೀತಿಯಲ್ಲಿ 'ಅಗ್ನಿಶಾಮಕರು' ಕವನದ ಸಮಾನ ಆಶಯವನ್ನು ಹೊಂದಿರುವ ಕವನಗಳನ್ನು ಸಂಗ್ರಹಿಸಿ ಬರೆಯಿರಿ.

## ಕಿತ್ತಳೆ ಹಣ್ಣಲ್ಲ

ಹಣ್ಣು ಮಾರುವ ಹರೇಕಳ ಹಾಜಬ್ಬರಿಗೆ
ಕಿತ್ತಳೆ ಬರಿಯ ಹಣ್ಣಲ್ಲ

ಅವರು ಮಾರುವುದು ಕಿತ್ತಳೆ ಹಣ್ಣು
ಕಿತ್ತಳೆ ಹೊತ್ತು ಹೊತ್ತು ಮಾರಿದರೂ
ಮನೆಯ ಮೇಲೊಂದು ಸೂರು ತನ್ನದೆ ಸಂಸಾರಕ್ಕೆ
ಸ್ವಂತ ಮಕ್ಕಳಿಗೆ ಶಾಲೆ ಸುಣ್ಣ ಬಣ್ಣ ಗೋಡೆ ನೆಲಕ್ಕೆ
ಏನಿಲ್ಲ ಏಕೆಂದರೆ ಅವರಿಗೆ ಕಿತ್ತಳೆ ಹಣ್ಣಲ್ಲ

ಹಣ್ಣು ಮಾರುವ ಹರೇಕಳ ಹಾಜಬ್ಬರಿಗೆ
ಕಿತ್ತಳೆ ಬರಿಯ ಹಣ್ಣಲ್ಲ

ಅಕ್ಷರ ಸಂತನಿಗೆ ಓದು ಬರಹ ಕಿತ್ತಳೆ ಹಣ್ಣು
ಮಕ್ಕಳ ಕಣ್ಣ ಬೆಳಕು ಬುಟ್ಟಿ ಕಿತ್ತಳೆ ಹಣ್ಣು
ಕೈಯಲ್ಲಿ ಅರ್ಜಿ ಕಣ್ಣಲ್ಲಿ ಮಾತಿನ ಈ ತಬರ
ಸೋತಿಲ್ಲ ತೇಜಸ್ವಿ ಹಾಜಬ್ಬರಿಗೆ ಕಿತ್ತಳೆ ಹಣ್ಣಲ್ಲ

ಹಣ್ಣು ಮಾರುವ ಹರೇಕಳ ಹಾಜಬ್ಬರಿಗೆ
ಕಿತ್ತಳೆ ಬರಿಯ ಹಣ್ಣಲ್ಲ

ಹಾಜಬ್ಬ ಕಟ್ಟಿದ ಶಾಲೆಗೆ ನೆಲಗೋಡೆ  ಕಿತ್ತಳೆ ಹಣ್ಣು
ಕಿಟಿಕಿ ಬಾಗಿಲು ಮಕ್ಕಳ ಬಟ್ಟಲ ಅನ್ನ ಕಿತ್ತಳೆ ಹಣ್ಣು
ಆಟದ ಬಯಲು ತೋಟದ ಹೂವು ಕಿತ್ತಳೆ ಹಣ್ಣು
ಮನಸು ಕನಸು ಹಾಜಬ್ಬರಿಗೆ ಅದೆ ಕಿತ್ತಳೆ ಹಣ್ಣು

ಹಣ್ಣು ಮಾರುವ ಹರೇಕಳ ಹಾಜಬ್ಬರಿಗೆ
ಕಿತ್ತಳೆ ಬರಿಯ ಹಣ್ಣಲ್ಲ

ನಾವು ನೀವು ಕೊಂಡಿದ್ದೇವೆ ಕಿತ್ತಳೆ ಹಣ್ಣು
ನಮಗೆಲ್ಲಿ ಕಂಡೀತು ಕಿತ್ತಳೆಯ ನಿಜಬಣ್ಣ
ಅದು ಬರೀ ಕಿತ್ತಳೆ ಅಂದವರುಂಟೆ ಮರುಳೆ
ಹಾಜಬ್ಬರಿಗೆ ಅದು ಅರಿವಿನ ಮಂತ್ರ ಅಣ್ಣಾ!

- ಡಾ. ಕೆ. ಚಿನ್ನಪ್ಪ ಗೌಡ

# ಕಲ್ತಪ್ಪದ ಹೋಟೆಲು

- ಪ. ರಾಮಕೃಷ್ಣ ಶಾಸ್ತ್ರಿ

ಇತ್ತೀಚಿಗೆಗುರುವಾಯನಕೆರೆಯಿಂದಕಾರ್ಕಳಕ್ಕೆ ಹೋಗುವ ಇಮ್ಮುಖದ ರಸ್ತೆ ವಿಸ್ತರಣೆಯಾಯಿತಲ್ಲ. ಅದರ ನಿಮಿತ್ತ ರಸ್ತೆ ಅಗಲೀಕರಣವಾಗುತ್ತ ಹೋದಂತೆ ಶತಮಾನಗಳ ಹಿಂದೆ ಯಾರೋ ನೆಟ್ಟು ನೆರಳಿಗೆ ಹೆರಳು ಚಾಚಿದ್ದ ಎಷ್ಟೆಷ್ಟೋ ಮರಗಳು ಧರಾಶಾಹಿಯಾದವು. ಡಾಂಬರು ರಸ್ತೆಯನ್ನೇ ಅಂಗಳವಾಗಿ ಮಾಡಿಕೊಂಡು ಹಪ್ಪಳ ಒಣಗಿಸುತ್ತಿದ್ದ ಅಕ್ರಮದ ಮನೆಯ ಗೋಡೆಗಳು ದೂಳಾಗಿ ಹೋದವು. ಇದಕ್ಕೆಲ್ಲ ಯಾರಿಗೂ ಬೇಜಾರಾಗಿರಲಿಲ್ಲ. ಊರು ಉದ್ಧಾರವಾಗುತ್ತಿದೆ ಎಂದೇ ಖುಷಿಪಟ್ಟವರಿದ್ದರು. ಆದರೆ ಜಾತಿ ಧರ್ಮಗಳ ಎಲ್ಲೆ ಮೀರಿ ಎಲ್ಲರಿಗೂ ದುಃಖವಾದ ಸಂಗತಿಯೆಂದರೆ ಕಟ್ಟೆಯ ಷೇಕಬ್ಬ ಬ್ಯಾರಿಯ ಕಲ್ತಪ್ಪದ ಹೋಟೆಲು ಜೆಸಿಬಿಯ ಬಲವಾದ ಸೊಂಡಿಲಿನ ಘಾತದಿಂದ ಕೆಳಗೆ ಉರುಳಿದ್ದು.

ಹೋಟೆಲು ಅಂದ ಮಾತ್ರಕ್ಕೆ ಅದನ್ನು ಪಂಚತಾರಾ ಹೋಟೆಲು ಅಂತ ಯಾರೂ ವ್ಯಾಖ್ಯಾನಿಸಬಾರದು. ಹಲಸಿನಮರದ ಕೆಳಗೆ ಅಡಕೆಮರದ ಆಳೆತ್ತರದ ತುಂಡುಗಳನ್ನೇ ನೆಲದಲ್ಲಿ ನಾಲ್ಕು ಕಡೆ ಕಂಬಗಳಾಗಿ ಹೂಳಿ, ಬಿದಿರನ್ನೇ ಅಡ್ಡ ತೋಳುಗಳಾಗಿ ಬಳಸಿ ತಗಡಿನ ಷೀಟು ಹೊದಿಸಿ ಅದನ್ನು ಮೇಲಕ್ಕೆಬ್ಬಿಸಲಾಗಿತ್ತು. ಅಡಕೆಮರದ ದಬ್ಬೆಗಳನ್ನು ಒತ್ತೊತ್ತಾಗಿ ಜೋಡಿಸಿ ಮೊಳೆ ಹೊಡೆದು ಅದರ ಗೋಡೆಗಳು ನಿರ್ಮಾಣವಾಗಿದ್ದವೇ ಹೊರತು ಅದೇನೂ ಶಿಲಾಮಯ ಮಂಟಪವಾಗಿರಲಿಲ್ಲ. ಇನ್ನು ಗ್ರಾಹಕರು ಕೂಡಲು ಅಲ್ಲಿ ಸೋಫಾಗಳೇನೂ ಇರಲಿಲ್ಲ. ಹೋಟೆಲಿನ ಒಳಗೆ ತಿಂಡಿ, ಚಹಾ ತಯಾರಾಗುತ್ತಿದ್ರೆ ಹೊರಗೆ ಮಾಡಿನ ಷೀಟನ್ನು ಇಳಿಬಿಟ್ಟು ಖಾಲಿ ಇರುವ ಜಾಗದಲ್ಲಿ ಎರಡು ಕಲ್ಲು ಚಪ್ಪಡಿಗಳ ಮೇಲೆ ಉದ್ದವಾಗಿ ಅಡಕೆಮರಗಳನ್ನು ಹಾಸಲಾಗಿತ್ತು. ಗ್ರಾಹಕರು ಕೂಡಲು ಅದೇ ಸುಖಾಸನಗಳಾಗಿದ್ದವು.

ಬೆಳಗಿನ ಜಾವ ಮಸೀದಿಯಿಂದ ಮುಕ್ರೀ ಬ್ಯಾರಿಯ ಪ್ರಾರ್ಥನೆಯ ಸೊಲ್ಲು ಮಲಗಿದ್ದವರ ನಿದ್ರೆ ಬಡಿದೆಬ್ಬಿಸುವ ಹೊತ್ತಿಗೆ ಷೇಕಬ್ಬನ ಚಹಾ ಹೋಟೆಲಿನಲ್ಲಿ ಚಿಮಣಿ ದೀಪದ ಬೆಳಕು ಹರಡುತ್ತಿತ್ತು. ಮೊನ್ನೆ ಪತನವಾಗುವ ತನಕವೂ ಅದು ವಿದ್ಯುತ್ತಿನ ಸೌಲಭ್ಯ ಹೊಂದಿರಲಿಲ್ಲ. ಬೇಸಗೆ, ಮಳೆಗಾಲಗಳೆಂಬ ಭೇದವಿಲ್ಲದೆ ಕಟ್ಟಿಗೆಯನ್ನೇ ಒಲೆಯುರಿಸಲು ಬಳಸುತ್ತಿದ್ದರೂ ಹೊಗೆ ವಾಸನೆಯಿಂದ ಚಹಾ, ತಿಂಡಿಗಳು ಕೆಟ್ಟುಹೋದ ದಿನಗಳಿರಲಿಲ್ಲ. ಒಲೆಯಲ್ಲಿ ತಾಮ್ರದ ಪುಟ್ಟ ಹಂಡೆಯಲ್ಲಿ ದಿನವಿಡೀ ಕುದಿಯುತ್ತಿರುವ ನೀರು. ನೀರು ಕುದಿಯುತ್ತಲೇ ಇದೆ ಎಂಬುದನ್ನು ಸಾರಲು ಹಂಡೆಯೊಳಗೆ ಹಾಕಿದ ತೂತಿರುವ ಹಳೆಯ ಕಾಲದ ತಾಮ್ರದ ಒಟ್ಟೆ ಮುಕ್ಕಾಲು ಎಂಬ ನಾಣ್ಯದ ಕಣಕಣ ಸದ್ದು ಹೋಟೆಲು ಆರಂಭವಾಗಿದೆ ಎಂಬುದರ ಸಂಕೇತವಾಗಿತ್ತು.

ಹೋಟೆಲು ಅಂದ ಮಾತ್ರಕ್ಕೆ ನೀಟಾಗಿ ನಿಂತು ಇಡ್ಲಿ ,ದೋಸೆ, ವಡೆ, ಪೊಂಗಲ್, ಹಲ್ವ ಎಂದು ಸಹಸ್ರನಾಮದ ಹಾಗೆ ಹೇಳಿಬಿಡುವ ಸರ್ವರ್ ಕಂ ಮಾಣಿ ಷೇಕಬ್ಬನ ಹೋಟೆಲಿನಲ್ಲಿರಲಿಲ್ಲ. ಇಲ್ಲಿ ಮಾಣಿಯೂ ಅವನೇ, ಮಾಲಕನು ಅವನೇ. ಹಿಟ್ಟನ್ನು

ಒರಳು ಕಲ್ಲಿನಲ್ಲಿ ಅರೆದು ತಿಂಡಿ ತಯಾರಿಸುವವನು ಅವನೇ. ಎರಡು ಪಾಟಿಗಳನ್ನು ಹಿಡಿದು ಜಲಪಾತದ ಹಾಗೆ ಒಂದರಿಂದ ಇನ್ನೊಂದಕ್ಕೆ ಭರದಿಂದ ಚಹಾವನ್ನು ಹೊಯ್ಯುವ ಮೂಲಕ ನೊರೆ ನೊರೆ ಉಕ್ಕಿ ಬರುವಂತೆ ಮಾಡುತ್ತಿದ್ದದ್ದೂ ಅವನೇ. ಕಡೆಗೆ ಖಾಲಿ ತಟ್ಟೆ, ಲೋಟಗಳನ್ನು ಎತ್ತಿ ತೊಳೆದಿಡುವುದು, ಗಿರಾಕಿಯಿಂದ ಹಣ ತೆಗೆದುಕೊಳ್ಳುವುದು ಎಲ್ಲವೂ ಅವನೇ ಅವನೇ ಅವನೇ.

ಬೆಳಕು ಹರಿಯುವ ಮೊದಲೇ ಷೇಕಬ್ಬನ ಹೋಟೆಲಿಗೆ ಗ್ರಾಹಕರು ಬರುತ್ತಿದ್ದರು. ಮನೆಯಲ್ಲಿ ಹೆಂಡತಿ ಎಷ್ಟೇ ರುಚಿಗಟ್ಟಿನ ತಿಂಡಿ ಮಾಡಿದರೂ ಷೇಕಬ್ಬನ ಹೋಟೆಲಿನ ಕಲ್ತಪ್ಪ ತಿನ್ನದಿದ್ದರೆ ಅದೇಕೋ ಹಲವರಿಗೆ ಮನಸ್ಸು ಕೇಳುತ್ತಿರಲಿಲ್ಲ. ಅದರ ಪಾಕವಿಶೇಷ ಏನು ಅಂತ ಕೇಳಿದರೆ ಅಂಥಾದ್ದೇನೂ ಇಲ್ಲ ಎನ್ನುತ್ತಿದ್ದ ಷೇಕಬ್ಬ. ಸಾಮಾನ್ಯ ಅಕ್ಕಿ ಎಂಟು ಗಂಟೆಗಳ ಕಾಲ ನೀರಿನಲ್ಲಿ ನೆನೆಸಬೇಕು. ಆಮೇಲೆ ಒರಳಿನಲ್ಲಿ ಹಿಟ್ಟು ಮಾಡಬೇಕು. ದಪ್ಪ ಬಾಣಲೆಗೆ ತಾಳೆ ಎಣ್ಣೆ ಹಾಕಿ ಬಿಸಿ ಮಾಡಬೇಕು. ಕುಮುಟಾದಿಂದ ತಂದ ಗುಲಾಬಿ ಈರುಳ್ಳಿ ಹೆಚ್ಚಿ ಹಾಕಿ, ಎಣ್ಣೆಯಲ್ಲಿ ಬಾಡಿಸಬೇಕು. ಹಿಟ್ಟಿಗೆ ಸ್ವಲ್ಪ ಅಡುಗೆ ಸೋಡಾ ಹಾಕಿ ಕಲಕಬೇಕು. ಬಾಣಲೆಗೆ ಹಿಟ್ಟು ಹಾಕಿ ಮೇಲಿನಿಂದ ಕಬ್ಬಿಣದ ಹೆಂಚು ಮುಚ್ಚಿ ಹೆಂಚಿನ ಮೇಲಿಂದ ಕಟ್ಟಿಗೆ ಇರಿಸಿ ಬೆಂಕಿ ಹಾಕಬೇಕು. ಕೆಳಗೆ ಮತ್ತು ಮೇಲೆ ಎರಡೂ ಕಡೆ ಬೆಂಕಿ ಉರಿಯುತ್ತ ಒಂದು ತಾಸಿನಲ್ಲಿ ಸಿದ್ಧವಾಗುತ್ತಿತ್ತು. ಊರೆಲ್ಲ ಕಂಪು ಬೀರುವ ಕಲ್ತಪ್ಪ ಎಂಬ ಜನಪ್ರಿಯ ತಿಂಡಿ. ಬಾಣಲೆಯಿಂದ ಅದನ್ನು ಎಬ್ಬಿಸಿ, ಅಳತೆ ಪ್ರಕಾರದ ತುಂಡುಗಳಾಗಿ ಕತ್ತರಿಸಿ ಅಲ್ಯುಮಿನಿಯಂ ತಟ್ಟೆಯಲ್ಲಿಟ್ಟು ಗ್ರಾಹಕರಿಗೆ ಕೊಡುತ್ತಿದ್ದ. ಗ್ರಾಹಕರು ತಿಂಡಿ ಏನಿದೆ ಎಂದೂ ಮೆನುವಿನ ಕಡೆಗೆ ನೋಡಲಿಕ್ಕಿಲ್ಲ. ಅಲ್ಲಿ ಸಿಗುವುದು



ಕಲ್ತಪ್ಪ ಮಾತ್ರ.

ಆಗ ಬಾಣಲೆ ಬದಲು ಬಳಪದ ಕಲ್ಲಿನಿಂದ ತಯಾರಿಸಿದ ಪಾತ್ರೆಯಲ್ಲಿ ಕೇರಳದ ಕಲ್ತಪ್ಪ ಎಂಬ ತಿಂಡಿಯನ್ನು ಷೇಕಬ್ಬನ ಮುತ್ತಜ್ಜನೋ ಯಾರೋ ಮಾಡುತ್ತಿದ್ದರಂತೆ. ಕಲ್ಲಿನಲ್ಲಿ ತಯಾರಿಸಿದ ಅಪ್ಪ ಕಲ್ತಪ್ಪವಾಯಿತಂತೆ. ಬಾಣಲೆಯಲ್ಲಿ ತಯಾರಿಸುವಾಗಲೂ ಹೊಸ ಹೆಸರಿಲ್ಲ. ಒಂದು ಸಲ ಸುಲ್ತಾನನೊಬ್ಬ ಜಮಾಲಬಾದ್ ಕೋಟೆಗೆ ಹೋಗಲು ಕೊಲ್ಲೂರಿನಿಂದ ಇದೇ ದಾರಿಯಾಗಿ ಬಂದನಂತೆ. ಸುಲ್ತಾನನಿಗೆ ತಾಳಲಾಗದ ಹಸಿವೆಯಾಗಿತ್ತು. ಆಗ ಷೇಕಬ್ಬನ ಮುತ್ತಜ್ಜನ ಹೋಟೆಲಿನಿಂದ ಕಲ್ತಪ್ಪದ ಘಮಘಮ ಗಾಳಿಯಲ್ಲಿ ತೇಲಿ ಬಂದು ಅವನ ನಾಸಿಕಾಗ್ರಗಳನ್ನು ಅರಳಿಸಿತಂತೆ. ಷೇಕಬ್ಬ ಕಣ್ಣಿಗೆ ಕಂಡವನಂತೆ ಅಂದು ನಡೆದ ಘಟನೆಯನ್ನು ವಿವರಿಸುತ್ತಿದ್ದ. ನೋಡಿ 'ಸುಲ್ತಾನರು' ಬಂದು ಕುದುರೆಯನ್ನು ನಿಲ್ಲಿಸಿದ್ದು ಅಲ್ಲಿ. ಅವನ ಸೇವಕ, ಇಲ್ಲಿ ಬಂದು ಪರಿಮಳ ಬರುತ್ತಿರುವುದು ಏನು ಅಂತ ಕೇಳಿದ್ದು, ಓ ಅಲ್ಲಿ ನಿಂತು. ಬಾಳೆ ಎಲೆಯಲ್ಲಿ ಕಟ್ಟಿಕೊಟ್ಟ ಕಲ್ತಪ್ಪವನ್ನು ಗಬಗಬನೆ ತಿಂದು ಇನ್ನೂ ಉಂಟೋ ಅಂತ ಕೇಳಿ ಮತ್ತೆ ಮತ್ತೆ ತರಿಸಿಕೊಂಡು ತಿಂದದ್ದು ಈ ಹಲಸಿನಮರದ ಮರೆಯಲ್ಲಿ. ಯಾಕೆಂದ್ರೆ ದೊಡ್ಡವರು ಬಡವರ ಹೋಟೆಲಿನ ತಿಂಡಿ ತಿನ್ನುವುದು ಬೇರೆ ಯಾರಾದರೂ ನೋಡಿದರೆ ಅವರ ಮರ್ಯಾದೆ ಏನಾಗಬೇಕು? ಅಷ್ಟೊಂದು ತಿಂಡಿ ತಿನ್ನುವವರನ್ನು ಅಜ್ಜ ಆ ವರೆಗೂ ನೋಡಿರಲಿಲ್ಲವಂತೆ..' ದಿನಕ್ಕೊಂದು ಸಲವಾದರೂ ಈ ಕಥೆಯನ್ನು ಷೇಕಬ್ಬ ಹೇಳದೆ ಉಳಿಯುತ್ತಿರಲಿಲ್ಲ.

ಷೇಕಬ್ಬನ ಅಜ್ಜ, ಅಪ್ಪ ಹೀಗೆ ತಲೆಮಾರಿನಿಂದ ಕಲ್ತಪ್ಪದ ಹೋಟೆಲು ನಡೆಸುವ ಮೂಲಕವೇ ಬದುಕು ಕಟ್ಟಿಕೊಂಡವರು. ಮಗನೂ ಪರವೂರಿಗೆ ಹೋಗಿ ಕಲ್ತಪ್ಪ ಮಾರಿಯೇ ಜೀವನ ಸಾಗಿಸುತ್ತಿದ್ದಾನೆ. ಸಾಧಾರಣ ಅಕ್ಕಿಯ ಕಲ್ತಪ್ಪಕ್ಕೇ ಹೀಗೆ ರುಚಿ ಬರಲು ಹೇಗೆ ಸಾಧ್ಯ? ಅವನು ಯಾರಿಗೂ ತಿಳಿಯದಂತೆ ಬೇರೆ ಏನೋ ಬೆರಕೆ ಮಾಡುತ್ತಾನೆ. ನಮ್ಮಲ್ಲಿ ಅದರ ಗುಟ್ಟು ಹೇಳುವುದಿಲ್ಲ ಎಂದು ಮನೆಯಲ್ಲಿ ಹಾಗೆಯೇ ಅಪ್ಪ ತಯಾರಿಸಲು ಹೋಗಿ ರುಚಿ ಕಾಣದವರು ಹೇಳುವುದುಂಟು. ಅಂಥ ಗುಟ್ಟು ಏನಿಲ್ಲ ಎಂದು ನಗುತ್ತ ಹೇಳುವ ಷೇಕಬ್ಬ 'ಎಲ್ಲ ಅಲ್ಲಾವುಂಡೆ ಕುದ್ರತ್' ಎಂದು ಎರಡೂ ಹಸ್ತಗಳನ್ನು ಜೋಡಿಸಿ ಮೇಲಕ್ಕೊಮ್ಮೆ ನೋಡುತ್ತಾನೆ. ಹೋಟೆಲಿನಲ್ಲಿ ಹಣ ಸಂಪಾದಿಸಿ ಷೇಕಬ್ಬ ಆಸ್ತಿ ಪಾಸ್ತಿ ಮಾಡಿರಲಿಲ್ಲ. ಸುಖವಾಗಿ ಸಂಸಾರ ಮಾಡಿದ್ದಾನೆ, ಒಂದಿಷ್ಟು ಜನಗಳ ಪ್ರೀತಿ ಸಂಪಾದಿಸಿದ್ದಾನೆ, ಅದೇ ಆಸ್ತಿ ಎಂದುಕೊಂಡಿದ್ದಾನೆ.

ಪಟ್ಟಣದ ಹೋಟೆಲು ನೋಡಿದವರಿಗೆ ಷೇಕಬ್ಬನದು ಮುರುಕು ಹೋಟೆಲಾಗಿ ಕಾಣಿಸಿರಬಹುದು. ಆದರೆ ಹಳ್ಳಿಯಲ್ಲಿ ದುಡಿದು ತಿನ್ನುವ ವರ್ಗಕ್ಕೆ ಅದು ಆತ್ಮೀಯ ಬಾಂಧವ್ಯವನ್ನು ಬೆಸೆದಿತ್ತು. ಕಡಿಮೆ ದುಡ್ಡಿನಲ್ಲಿ ಹೊಟ್ಟೆ ತುಂಬ ತಿನ್ನಬಹುದು. ಇವತ್ತು ಹಣ ಇಲ್ಲ ಎಂದು ಹೇಳಿದರೂ ಷೇಕಬ್ಬ ಮಂಡೆ ಬೆಚ್ಚ ಮಾಡದೆ, 'ನಾಳೆ ಕೊಡು ಮಾರಾಯಾ. ನೀನೇನು ಓಡಿ ಹೋಗ್ತೀಯಾ?' ಎಂದು ಕಳುಹಿಸಿ ಕೊಡುತ್ತಿದ್ದ.

ಷೇಕಬ್ಬ ಹೆಚ್ಚು ಓದಿದವನಲ್ಲ. ಕುರಾನ್ ಪುಟಗಳನ್ನು ಬಿಚ್ಚಿದವನಲ್ಲ. ಆದರೂ ನಮಗೆ ಆದ ವ್ಯಾಪಾರದಲ್ಲಿ, ಹತ್ತರಲ್ಲಿ ಒಂದು ಪಾಲು ಬಡಬಗ್ಗರಿಗೆ ಕೊಡಬೇಕು ಅಂತ ತಿಳಿದುಕೊಂಡಿದ್ದ. ಹೆಂಡತಿ ಜೊತೆಗೆ ಮಕ್ಕಾ ಯಾತ್ರೆ ಮಾಡಬೇಕೆಂಬುದು ಅವನ

ಜೀವಮಾನದ ಕನಸಾಗಿತ್ತು. ಅದಕ್ಕಾಗಿ ಹಣವನ್ನು ಹೊಂದಿಸಿಟ್ಟಿದ್ದ. ಅದೇ ಸಮಯ ಅವನ ಹೋಟೆಲಿಗೆ ಬಂದು ದಿನವೂ ಚಹಾ ಕುಡಿದು ನೀಟಾಗಿ ಹಣ ಕೊಟ್ಟು ಹೋಗುತ್ತಿದ್ದ ಸಂಕಣ್ಣ ಇದ್ದಕ್ಕಿದ್ದಂತೆ ಗೊಟಕ್ ಅಂದುಬಿಟ್ಟ. ಅವನ ಮಗಳ ಮದುವೆ ನಿಂತು ಹೋಗುವುದರಲ್ಲಿತ್ತು. ಷೇಕಬ್ಬ ಮಕ್ಕಾಗೆ ಹೋಗಲು ತೆಗೆದಿರಿಸಿದ್ದ ಹಣವನ್ನು ಅವಳಿಗೆ ಸಹಾಯ ಅಂತ ಕೊಟ್ಟುಬಿಟ್ಟ. 'ಬಾಪಕ್ಕಿ ತಜಳ್ ಹೇಳ್ತಿದ್ರಲ್ಲ, ಉರೂಸ್ ಸಮಯ ಮಾಡಿದ ಭಾಷಣದಲ್ಲಿ. ನಿನ್ನ ಮನೆ ಪಕ್ಕದವನು ಉಪವಾಸ ಇದ್ರೆ ನೀನು ಹಬ್ಬ ಮಾಡಬೇಡ ಅಂತ. ಒಬ್ಬ ಹೆಣ್ಮಗಳ ಮದುವೆಗೆ ಸಹಾಯ ಮಾಡಿದ್ರೆ ಮಕ್ಕಾ ಯಾತ್ರೆಗಿಂತ ದೊಡ್ಡ ಪುಣ್ಯ ಬರುತ್ತದೆ ಅಂತ' ಎಂದು ಮಕ್ಕಾಗೆ ಹೊರಡಲು ಸಿದ್ಧಳಾಗಿದ್ದ ಬ್ಯಾರ್ದಿಗೆ ಸಮಾಧಾನ ಹೇಳಿದ್ದ.

ಬ್ರಿಟಿಷರ ಕಾಲದಲ್ಲಿ ಷೇಕಬ್ಬನ ಊರಿನ ಮೂಲಕ ಕಾರ್ಕಳಕ್ಕೆ ಬಂಡಿ ಹೋಗುವ ಕಚ್ಚಾ ರಸ್ತೆ ನಿರ್ಮಾಣವಾಯಿತಂತೆ. ಆಗ ಷೇಕಬ್ಬನ ಅಪ್ಪ ಚಿಕ್ಕ ಮಗುವಿದ್ದನಂತೆ. ರಸ್ತೆ ನೋಡಲು ಬಂದ ಇಂಗ್ಲಿಷ್ ಕಲೆಕ್ಟರ್ ಇದೇ ದಾರಿಯಾಗೆ ಅಳದಂಗಡಿ ತನಕ ಹೋದರಂತೆ. ಮಟಮಟ ಮಧ್ಯಾಹ್ನದ ಬಿಸಿಲು. ಅವರೊಂದಿಗೆ ಶಾನುಭೋಗರ ಉಗ್ರಾಣಿ ತಿಮ್ಮಪ್ಪ ಇದ್ದ. ಸಾಹೇಬರು 'ತುಂಬ ಹಸಿವಾಗ್ತಿದೆ, ಇಲ್ಲಿ ಏನಾದರೂ ತಿಂಡಿ ಸಿಗಬಹುದೇ?' ಎಂದು ಜೊತೆಗಿದ್ದ ದಫೇದಾರನೊಂದಿಗೆ ಕೇಳಿದರು. ದಫೇದಾರ ಉಗ್ರಾಣಿ ತಿಮ್ಮಪ್ಪನನ್ನು ವಿಚಾರಿಸಿದಾಗ ಇಲ್ಲಿ ಬ್ಯಾರಿ ಹೋಟೆಲಿನಲ್ಲಿ ಸಿಗುವ ಕಲ್ತಪ್ಪ ತುಂಬಾ ರುಚಿಕರವಾಗಿದೆಯೆಂದು ಹೇಳಿದ. ಸಾಹೇಬರು ಕಲ್ತಪ್ಪ ತರಿಸಿ ತಿಂದು ಅದರ ರುಚಿಗೆ ಮಾರುಹೋಗಿ,'ವಾಟ್ ಈಸ್ ರುಚಿಕರ ತಿಂಡಿ ನೇಮ್?' ಕೇಳಿದರಂತೆ. ತಿಮ್ಮಪ್ಪ, 'ಅದರ ಪುದರ್ ಕಲ್ತಪ್ಪ' ಎಂದು ತುಳುಮಿಶ್ರಿತ ಕನ್ನಡದಲ್ಲಿ ಹೇಳಿದ್ದು ಕೊಂಚ ಕೊಂಚ ಕನ್ನಡ ಕಲಿತಿದ್ದ ಕಲೆಕ್ಟರ್ ಸಾಹೇಬರಿಗೆ ನಗು ಮೂಡಿಸಿತಂತೆ. 'ಓ ಮೈ ಗಾಡ್, ತುಳುನಾಡಿನ ಹೆಸರು ಟುಂಬ ಚೆನ್ನಗಿದೆ. ಮ್ಯಾನ್ ಗಳಿಗೆ ನೇಮ್ ತಿಮ್ಮಪ್ಪ, ತಿಂಡಿ ನೇಮ್ ಕಲ್ತಪ್ಪ!' ಎಂದು ಹೇಳಿದರಂತೆ. ಷೇಕಬ್ಬನ ಅಪ್ಪ ತಿಂಡಿಯ ದುಡ್ಡು ತೆಗೆದುಕೊಳ್ಳಲು ನಿರಾಕರಿಸಿದರೂ ಒಂದು ಪೆನ್ನಿಯ ನಾಣ್ಯ ಕೊಟ್ಟು ಮುಂದೆ ಹೋದರಂತೆ. ಇದು ಷೇಕಬ್ಬ ಪರಂಪರಾಗತವಾಗಿ ಬಂದ ಭೂತಕಾಲದ ಕತೆಯನ್ನು ಹೇಳುತ್ತಿದ್ದ ಶೈಲಿ.

ಕಲ್ತಪ್ಪದ ಹೋಟೆಲು ಮಳೆಗಾಲದ ಹೊಲದ ವ್ಯವಸಾಯ ಸಮಯದಲ್ಲಿ ಬೆಳಗ್ಗೆ ಖಾಲಿಯಾಗಿ ಕಂಡರೂ ಸಂಜೆ ದುಡಿದು ದಣಿದ ರೈತರಿಂದ ತುಂಬಿಕೊಳ್ಳುತ್ತಿತ್ತು. ಅಲ್ಲಿ ನಡೆಯುವ ಮಾತುಕತೆಗಳಲ್ಲಿ ಸುಖವಿತ್ತು, ಆಕ್ರೋಶವಿತ್ತು, ದುಃಖವಿತ್ತು, ದುಮ್ಮಾನವಿತ್ತು. ಹಾಗೆಯೇ ಕಲ್ತಪ್ಪದ ಹೋಟೆಲ್ ಸಂದೇಶ ರವಾನೆಗೂ ಸೂಕ್ತ ವೇದಿಕೆಯಾಗಿತ್ತು. ಪಟೇಲರ ಮನೆಗೆ ಬುಧವಾರ ಕ್ಷೌರ ಮಾಡಲು ಕ್ಷೌರಿಕ ಹೋಗಬೇಕಿದ್ದರೆ ಷೇಕಬ್ಬನಲ್ಲಿ ಹೇಳಿದರಾಯಿತು. ಯಾವುದೋ ಹೊತ್ತಿಗೆ ಅವನು ಷೇಕಬ್ಬನ ಹೋಟೆಲಿಗೆ ಬರುತ್ತಾನೆ, ಸಂದೇಶ ಸ್ವೀಕರಿಸುತ್ತಾನೆಂಬುದು ಖಚಿತ. ರಾಮಣ್ಣನವರ ಮಗಳ ಮದುವೆಗೆ ೧೦೦ ಲೀಟರ್ ಹಾಲು ಬೇಕಾಗಿದ್ದರೂ ಹೇಳುವುದು ಇಲ್ಲೇ. ಮನೆಮನೆಗೆ ಹಾಲು ಹಾಕುವ ಗೌಳಿ ಗೋಪಣ್ಣ ಇಲ್ಲಿಗೊಂದು ಸಲ ಬರದೆ ಹೋಗುವುದಿಲ್ಲ. ಎಷ್ಟೋ ಮಂದಿ ಅಪರಾಧಿಗಳನ್ನು ಹಿಡಿಯಲು ಷೇಕಬ್ಬನಿಂದ ಸಂಗ್ರಹಿಸಿದ ಮಾಹಿತಿಯೇ ಪೊಲೀಸರಿಗೆ ಸಹಾಯ

ಮಾಡಿತೆಂಬುದನ್ನೂ ಜನ ಪಿಸುಗುಟ್ಟುವುದುಂಟು.

ಮೂರು ತಲೆಮಾರಿಗಿಂತಲೂ ಹಿಂದಿನಿಂದ ದೇಶಿ ತಿಂಡಿ, ಚಹಾ ವ್ಯಾಪಾರಕ್ಕಿಂತಲೂ ಮಾನವೀಯ ಸಂಬಂಧ ಬೆಸೆಯುವ ಸೇತುವೆಯಾಗಿತ್ತು. ಇತ್ತೀಚೆಗೂ ವಿದ್ಯುತ್ ಕಂಬದಲ್ಲಿ ಸಮಸ್ಯೆ ಕಂಡುಬಂದರೆ ಲೈನ್‌ಮೆನ್ ಎಲ್ಲಿದ್ದಾನೆಂದು ಜನ ಹುಡುಕುತ್ತ ಕಾಲ ಕಳೆಯುವುದಿಲ್ಲ. ನೇರವಾಗಿ ಷೇಕಬ್ಬನ ಹೋಟೆಲಿಗೆ ಹೋಗುತ್ತಾರೆ. ಲೈನ್‌ಮೆನ್‌ಗಳು ಕೆಲಸವಿಲ್ಲದಾಗ ಕೂಡುವುದು ಹೋಟೆಲಿನ ಹೊರಭಾಗದ ಅಡಕೆಮರದ ದಬ್ಬೆಯ ಆಸನದಲ್ಲಿ. ಅಲ್ಲಿ ರಾಜಕೀಯ ವಿಮರ್ಶೆ ನಡೆಯುತ್ತದೆ, ಹಿಂದಿನ ದಿನ ರಾತ್ರೆ ಕಂಡ ಯಕ್ಷಗಾನದ ಬಗೆಗೂ ಮಾತುಕತೆ ನಡೆಯುತ್ತದೆ.

ನಾಗರಿಕತೆ ವೃದ್ಧಿಯಾಗುತ್ತ ಹೋದಂತೆ ಬದಲಾವಣೆ ಅನಿವಾರ್ಯವೇನೋ ಹೌದು. ಆದರೆ ಬಹುಕಾಲದಿಂದ ಹಲಸಿನ ಮರದ ನೆರಳಿನಲ್ಲಿದ್ದ ಹೋಟೆಲಿನ ಒಳಗೆ ತುಂಬಿಕೊಂಡಿದ್ದ ಭಾವನೆಗಳ ಮಹಾಪೂರವನ್ನೇ ಬದಿಗೊತ್ತಿ ಜೆಸಿಬಿ ಸೊಂಡಿಲು ಮುಂದೊಡ್ಡಿ ಅದರ ಚಾವಣಿಯನ್ನು ಮುರಿಯಿತು. ಕುಸಿದುಬಿದ್ದ ತೋಳುಗಳನ್ನು ಹುಡಿ ಮಾಡಿ ಮೂಲೆಗೆಸೆಯಿತು. ಕಂಬಗಳನ್ನು ಕಿತ್ತು ಹಾಕಿತು. ಹಲಸಿನಮರವನ್ನು ಬೇರುಸಹಿತ ಕಿತ್ತು ದೂರ ಸರಿಸಿತು. ನೆನಪುಗಳನ್ನು, ಚರಿತ್ರೆಯನ್ನು, ಅದೆಷ್ಟೋ ಜನರ ಹೆಜ್ಜೆ ಗುರುತುಗಳನ್ನು ಕೆತ್ತಿಕೊಂಡಿದ್ದ ನೆಲವನ್ನು ನಿರ್ದಯವಾಗಿ ಅಗೆದು ನೆನಪುಗಳ ಗೋರಿಯ ಮೇಲೆ ಆಧುನಿಕ ರಸ್ತೆಯ ಹಾದಿಯನ್ನು ನಿರ್ಮಿಸಿತು.

ತನ್ನ ಕಲ್ಲಿನ ಒರಳು, ಒಂದಿಷ್ಟು ಪಾತ್ರೆಗಳು, ಲೋಟ, ತಟ್ಟೆ ಇದೆಲ್ಲವನ್ನೂ ರಸ್ತೆಯ ಪಕ್ಕ ಇರಿಸಿಕೊಂಡು ಷೇಕಬ್ಬ ನಿಂತಿದ್ದ. ಅವನು, ಅವನ ಹಿರಿಯರು ಬಾಳಿ ಬದುಕಿದ ಸೌಧ ಕುಸಿದು ಬೀಳುತ್ತಿರುವ ದೃಶ್ಯವನ್ನು ನೋಡುತ್ತ ನಿರ್ಭಾವುಕನಾಗಿ ಎಲ್ಲೋ ನೋಡುತ್ತಿದ್ದ. ಎಷ್ಟೋ ಜನ ಅಂಗಡಿ ಕುಸಿಯುವ ದೃಶ್ಯವನ್ನು ಮೊಬೈಲುಗಳಲ್ಲಿ ಸೆರೆ ಹಿಡಿಯುತ್ತಿದ್ದರು. ಕ್ಷಣಮಾತ್ರದಲ್ಲಿ ಅದರ ಚಿತ್ರಣ ಪತನವಾಯಿತು. ಅದು ಕೇವಲ ಹೋಟೆಲು ಆಗಿ ಅಲ್ಲ, ಹಳ್ಳಿ ಬದುಕಿನ ಭಾವನಾತ್ಮಕ ಕೊಂಡಿಯೇ ಕಳಚಿದಂತಾಯಿತು.

ರಸ್ತೆ ಅಭಿವೃದ್ಧಿಯಾಯಿತು. ಅಗಲವಾಯಿತು. ಆದರೆ, ಹಳ್ಳಿ ಸೊಗಡಿನ ನಂಟು ಬೆಸೆದಿದ್ದ ಒಂದು ಪರಂಪರಾಗತ ಬದುಕು ಮುಗಿದು ಹೋಯಿತು. ಸಂಬಂಧದ ಬೆಸುಗೆ ಕಡಿದು ಹೋಯಿತು!.

**ವಿಶದೀಕರಣ**

ಗುಲಾಬಿ ಈರುಳ್ಳಿ - ಕರ್ನಾಟಕದ ಬೆಂಗಳೂರಿನ ಸುತ್ತಮುತ್ತಲಿನಲ್ಲಿ ಬೆಳೆಯುವ ಈರುಳ್ಳಿ.

ಅಡಕೆ ಮರದ ದಬ್ಬೆ - ಅಡಕೆ ಮರವನ್ನು ಕಡಿದು ಒಂದೇ ರೀತಿಯ ಉದ್ದನೆಯ ತುಂಡುಗಳನ್ನಾಗಿ ಜೋಡಿಸಿಟ್ಟು ಕುಳಿತುಕೊಳ್ಳಲು ಮಾಡಿದ ಆಸನ.

## ಲೇಖಕರ ಪರಿಚಯ



ಮಕ್ಕಳ ಸಾಹಿತಿ ಎಂದೇ ಪ್ರಸಿದ್ಧರಾಗಿರುವ ಪ. ರಾಮಕೃಷ್ಣ ಶಾಸ್ತ್ರಿಯವರು ೧೯೫೩ ಜುಲೈ ೭ ರಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಜನಿಸಿದರು. ಇವರ ತಂದೆ ವೆಂಕಟರಮಣ ಶಾಸ್ತ್ರಿ, ತಾಯಿ ಗುಣವತಿ.

ಹಿಮದ ಹುಡುಗಿ, ಆನೆ ಮತ್ತು ಇರುವೆ, ಚಿನ್ನದ ಸೇಬು, ಚಿನ್ನದ ಗರಿ, ಪ್ರೀತಿಯ ಗುಟ್ಟು ಹಾಗೂ ಹಾಲಿನ ರೊಟ್ಟಿ ಮತ್ತು ಇತರ ಕಥೆಗಳು ಎಂಬ ಮಕ್ಕಳ ಕಥಾ ಸಂಕಲನಗಳನ್ನು ಇವರು ರಚಿಸಿದ್ದಾರೆ. ಅಕ್ಷರ ಕಿರಣ ಯೋಜನೆಯಡಿ ನವ ಸಾಕ್ಷರರಿಗಾಗಿ ದೇವಲೋಕದ ಕುದುರೆ, ವ್ಯಾಪಾರಿ ಸೋತ, ಬದುಕುವ ದಾರಿ, ಬುದ್ಧಿವಂತ ಜಮೀನ್ದಾರ ಮೊದಲಾದ ಒಂಬತ್ತು ಕೃತಿಗಳನ್ನು ರಚಿಸಿದ್ದಾರೆ. ಸುಂದರ ಬದುಕಿಗೆ ಒಂದಷ್ಟು ಸೂತ್ರಗಳು, ಶೌಚಾಲಯ-ಆರೋಗ್ಯ ಮಾತೆಗಿದು ದೇವಾಲಯ, ಉತ್ತಮ ಆರೋಗ್ಯಕ್ಕೆ ಅಂದದ ಕೈದೋಟ ಮುಂತಾದ ಆರೋಗ್ಯದ ಅರಿವು ಮೂಡಿಸುವ ಕೃತಿಗಳನ್ನು ರಚಿಸಿದ್ದಾರೆ. ಬದುಕು ಮತ್ತು ಚಿತ್ರ ಚೋರ ಅವರ ಕಥಾ ಸಂಕಲನಗಳಾಗಿವೆ. ಎಂಕ್ಟೇಸಿಯ ಸಂಕಟ, ಸನ್ಮಾನ ಪ್ರಸಂಗ ಮತ್ತು ಇತರ ಹಾಸ್ಯ ಲೇಖನಗಳು ಅವರ ಹಾಸ್ಯ ಲೇಖನಗಳ ಸಂಕಲನಗಳಾಗಿವೆ. ಪುದ್ವಾರು ಇವರು ತುಳು ಭಾಷೆಯಲ್ಲಿ ರಚಿಸಿದ ಕಾದಂಬರಿಯಾಗಿದೆ. ಇವರು ಅನೇಕ ಚೀನಿ ಜನಪದ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಜಿ.ಪಿ ರಾಜರತ್ನಂ ಪ್ರಶಸ್ತಿ, ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ಪ್ರಶಸ್ತಿ, ತುಳು ಕಾದಂಬರಿಗಾಗಿ ಪಣಿಯಾಡಿ ಪ್ರಶಸ್ತಿ, ಆಶಾ ಸಾಲಿಯಾನ್ ಪ್ರತಿಷ್ಠಾನ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಅವರಿಗೆ ಸಂದಿವೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.

1. ರಸ್ತೆ ವಿಸ್ತರಣೆಯಿಂದ ಉಂಟಾದ ತೊಂದರೆಗಳೇನು?
2. ಷೇಕಬ್ಬನ ಹೋಟೆಲಿನ ಭೌತಿಕ ಚಹರೆ ಹೇಗಿತ್ತು?
3. ಷೇಕಬ್ಬನು ಕಲ್ತಪ್ಪವನ್ನು ಮಾಡುತ್ತಿದ್ದ ವಿಧಾನವನ್ನು ವಿವರಿಸಿರಿ.
4. ಷೇಕಬ್ಬನು ಮಕ್ಕಾ ಯಾತ್ರೆಗೆಂದು ಕೂಡಿಟ್ಟ ಹಣವನ್ನು ಏನು ಮಾಡಿದನು?

## ಪಾತ್ರ ಚಿತ್ರಣ ಮಾಡಿರಿ

ಕಲ್ತಪ್ಪದ ಹೋಟೆಲು ಪಾಠದಲ್ಲಿ ಬಂದಿರುವ ಷೇಕಬ್ಬನ ಪಾತ್ರ ಚಿತ್ರಣವನ್ನು ಮಾಡಿರಿ.

## ದಿನಚರಿ ಬರೆಯಿರಿ

ತನ್ನ ಕಲ್ಲಿನ ಒರಳು ಒಂದಿಷ್ಟು ಪಾತ್ರೆಗಳು ಲೋಟ ತಟ್ಟೆ ಇವೆಲ್ಲವನ್ನು ರಸ್ತೆಯ ಪಕ್ಕ ಇರಿಸಿಕೊಂಡ ಷೇಕಬ್ಬ ತನ್ನ ಹಿರಿಯರು ಬಾಳಿ ಬದುಕಿದ ಸೌಧ ಕುಸಿದು ಬೀಳುತ್ತಿರುವ ದೃಶ್ಯವನ್ನು ನಿರ್ಭಾವುಕನಾಗಿ ನೋಡುತ್ತಾ ನಿಂತಿದ್ದ.

ಈ ಘಟನೆಯನ್ನು ಷೇಕಬ್ಬ ಆ ದಿನ ತನ್ನ ದಿನಚರಿಯಲ್ಲಿ ಹೇಗೆ ಬರೆದಿರಬಹುದು ಎಂದು ಊಹಿಸಿ ದಿನಚರಿ ಬರೆಯಿರಿ.

## ಜಾಹೀರಾತು ತಯಾರಿಸಿರಿ

ಶುಚಿರುಚಿ ಹಾಗೂ ಸ್ವಾದಿಷ್ಟಕರವಾದ ಖಾದ್ಯಗಳನ್ನು ತಯಾರಿಸುವ ಉಪಹಾರ ಮಂದಿರದ ಜಾಹೀರಾತನ್ನು ತಯಾರಿಸಿರಿ.

## ಕತೆ ಮುಂದುವರಿಸಿ ಬರೆಯಿರಿ

ಜೀವನ ನಿರ್ವಹಣೆಯ ಏಕಮಾರ್ಗವಾಗಿದ್ದ ಷೇಕಬ್ಬನ ಹೋಟೆಲು ಪತನಗೊಂಡಿತು. ಆ ಬಳಿಕ ಅವನು ತನ್ನ ಜೀವನವನ್ನು ಹೇಗೆ ಸಾಗಿಸಿರಬಹುದು ಎನ್ನುವುದನ್ನು ಕಲ್ಪಿಸಿಕೊಂಡು ಕತೆಯನ್ನು ಮುಂದುವರಿಸಿ ಬರೆಯಿರಿ.

## ಸಂಚಿಕೆ ತಯಾರಿಸಿರಿ

ಗ್ರಾಮೀಣ ತಿಂಡಿಗಳ ಹೆಸರು ಹಾಗೂ ತಯಾರಿಸುವ ವಿಧಾನಗಳನ್ನು ಬರೆದು ಸಂಚಿಕೆಯೊಂದನ್ನು ತಯಾರಿಸಿರಿ. ಸಂಚಿಕೆಗೆ ಆಕರ್ಷಕವಾದ ಶೀರ್ಷಿಕೆಯನ್ನು ನೀಡಿರಿ.

## ಓದುಗರ ಓಲೆ ತಯಾರಿಸಿರಿ

ರಸ್ತೆ ಅಗಲೀಕರಣದಿಂದಾಗಿ ಷೇಕಬ್ಬನಂತೆ ಉದ್ಯೋಗ ಕಳೆದುಕೊಂಡ ಜನರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ವಿನಂತಿಸಿಕೊಂಡು ಪತ್ರಿಕೆಗೆ ಒಂದು ಓದುಗರ ಓಲೆ ಬರೆಯಿರಿ.

## ಅಭಿಪ್ರಾಯ ಟಿಪ್ಪಣಿ

ಷೇಕಬ್ಬನ ಹೋಟೆಲು ಕೇವಲ ಹೋಟೆಲ್ ಅಲ್ಲ ಅದೊಂದು ಹಳ್ಳಿ ಬದುಕಿನ ಭಾವನಾತ್ಮಕ ಕೊಂಡಿ -

ಷೇಕಬ್ಬನ ಹೋಟೆಲು ಮತ್ತು ಗ್ರಾಮೀಣ ಹೋಟೆಲುಗಳಲ್ಲಿ ನಡೆಯುವ ಸಂಭಾಷಣೆ, ಚರ್ಚೆ ಮೊದಲಾದವುಗಳನ್ನು ಆಧಾರವಾಗಿಟ್ಟುಕೊಂಡು ಗ್ರಾಮೀಣ ಜನರ ಬದುಕು ಅಲ್ಲಿ ಸರಿಯಾಗಿ ಪ್ರತಿಫಲಿಸುತ್ತದೆ ಎನ್ನುವ ಅಭಿಪ್ರಾಯವನ್ನು ಸಮರ್ಥಿಸಿ ಟಿಪ್ಪಣಿ ಬರೆಯಿರಿ.

# ನ್ಯಾಯದ ತಕ್ಕಡಿ

(ಶೇಕ್ಸ್‌ಪಿಯರನ 'ಮರ್ಚೆಂಟ್ ಆಫ್ ವೆನಿಸ್' ನಾಟಕದ ರೂಪಾಂತರ)

**- ಕಾರ್ಕಡ ರಾಮಚಂದ್ರ ಉಡುಪ**

**ಹಿನ್ನೆಲೆ :** ಕುಶನಗರದಲ್ಲಿ ಬಡ್ಡಿ ವ್ಯವಹಾರ ಮಾಡಿಕೊಂಡಿರುವ ಚಮನ್ ಲಾಲ್ ಅತ್ಯಂತ ಜಿಪುಣನಾಗಿದ್ದು ಸಾಲ ಪಡೆದುಕೊಂಡವರಿಗೆ ಮೋಸ ಮಾಡುತ್ತಿದ್ದ. ಅದೇ ಊರಿನಲ್ಲಿ ರಾಜಕುಮಾರನೆಂಬ ವರ್ತಕನಿದ್ದ. ಈತ ಅತ್ಯಂತ ಪ್ರಾಮಾಣಿಕ ಹಾಗೂ ಪರೋಪಕಾರಿಯಾಗಿದ್ದು ಜನಾನುರಾಗಿಯಾಗಿದ್ದ. ಇದರಿಂದಾಗಿ ಚಮನ್ ಲಾಲನಿಗೆ ರಾಜಕುಮಾರನ ಬಗ್ಗೆ ಅಸಮಾಧಾನವಿತ್ತು. ಒಮ್ಮೆ ಈ ರಾಜಕುಮಾರನ ಹಡಗು ಸಮುದ್ರದಲ್ಲಿ ಮುಳುಗಿ ಹೋಗಿ ಅಪಾರ ನಷ್ಟಕ್ಕೆ ಗುರಿಯಾಗುತ್ತಾನೆ. ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ ರಾಜಕುಮಾರ ಚಮನ್ ಲಾಲನ ಬಳಿ ಐದು ಸಾವಿರ ವರಹಗಳನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳುತ್ತಾನೆ. ಚಮನ್ ಲಾಲನಿಗೆ ಬರೆದು ಕೊಟ್ಟ ಕರಾರು ಪತ್ರದಲ್ಲಿ ಮೂರು ತಿಂಗಳೊಳಗೆ ಸಾಲವನ್ನು ಮರುಪಾವತಿ ಮಾಡುವುದಾಗಿಯೂ ತಪ್ಪಿದಲ್ಲಿ ತನ್ನ ಎದೆಯ ಭಾಗದಲ್ಲಿ ಹೃದಯದ ಸಮೀಪದಿಂದ ಒಂದು ಸೇರು ಮಾಂಸವನ್ನು ಚಮನ್ ಲಾಲ್ ಕತ್ತರಿಸಿಕೊಳ್ಳಬಹುದೆಂದೂ ನಮೂದಿಸಿರುತ್ತಾನೆ. ಗ್ರಹಚಾರವಶಾತ್ ರಾಜಕುಮಾರನಿಗೆ ಕ್ಲಪ್ತ ಸಮಯದಲ್ಲಿ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಮೊದಲೇ ರಾಜಕುಮಾರನ ಬಗ್ಗೆ ಅಸಮಾಧಾನ ಹೊಂದಿದ್ದ ಚಮನ್ ಲಾಲ್ ಇದನ್ನೇ ನೆಪ ಮಾಡಿಕೊಂಡು ರಾಜಕುಮಾರನ ವಿರುದ್ಧ ಕುಶನಗರದ ರಾಜನಲ್ಲಿ ದೂರು ಕೊಡುತ್ತಾನೆ. ಪರಿಣಾಮವೇನಾಯ್ತು ಎಂಬುದನ್ನು ಈ ನಾಟಕ ಭಾಗದಲ್ಲಿ ನೋಡಬಹುದು.



## ಪಾತ್ರ ಪರಿಚಯ

ರಾಜ : ಕುಶನಗರದ ಮಹಾರಾಜ

ಚಮನ್ ಲಾಲ್ : ಬಡ್ಡಿ ವ್ಯವಹಾರ ಮಾಡುತ್ತಿರುವ ಜಿಪುಣಾಗ್ರೇಸರ

ರಾಜಕುಮಾರ : ವೃತ್ತಿಯಿಂದ ವರ್ತಕನಾಗಿದ್ದು ದೀನ ದುರ್ಬಲರಿಗೆ ಉಪಕಾರ ಮಾಡುವುದರಲ್ಲೇ ತೃಪ್ತಿ ಕಂಡವನು.

ವಸುಮಿತ್ರ : ಗೋದ್ವಾಲ ಸಂಸ್ಥಾನದ ವಿದ್ವಾಂಸ

ಸೇವಕ : ಕುಶನಗರದ ರಾಜನ ಸೇವಕ

ನಾಗರಿಕರು : ಕುಶನಗರದ ನಾಗರಿಕರು

(ಪರದೆ ಮೇಲೇಳುತ್ತಿರುವಂತೆಯೇ)

(ಕುಶನಗರದ ರಾಜನ ದರ್ಬಾರು]

ರಾಜ : ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯನ್ನುಳಿಸುವುದಕ್ಕಾಗಿ, ಪರಂಪರಾಗತವಾಗಿ ಬಂದಿರುವ ಕಾನೂನಿನ ವಿಧಿಗಳನ್ನು ಕೈಬಿಡುವುದು ಸಾಧ್ಯವಿಲ್ಲ. ನನ್ನ ರಾಜ್ಯದಲ್ಲಿ ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು.

ಚಮನ್ : ಸರಿಯಾದ ಮಾತು. ಸಾರ್ವಭೌಮರು ಚಿರಾಯುಗಳಾಗಲಿ.

ನಾಗರಿಕರು : ಕೂಡದು. ಮಹಾರಾಜರು ಅದಕ್ಕೆಡೆಕೊಡಕೂಡದು. ಪ್ರಜೆಗಳೆಲ್ಲರ ಒಕ್ಕೊರಲಿನ ಪ್ರಾರ್ಥನೆಯಿದು.

ರಾಜ : ಸಾವಧಾನ! ಈ ಮಾತನ್ನು ಕೇಳಲು ಕುಶನಗರದ ರಾಜರು ತಯಾರಿಲ್ಲ.

ಚಮನ್ : (ಕತ್ತಿ ಝಳಪಿಸುತ್ತಾ) ಹಾಗಾದರೆ ತಡವೇಕೆ ನಿಮ್ಮಪ್ಪಣೆಗಾಗಿ ಕಾಯುತ್ತಿದ್ದೇನೆ. ತೀರ್ಮಾನವನ್ನು ಸಾರಿಬಿಡಿರಿ.

ರಾಜಕುಮಾರ : ನಾನು ತಯಾರಿದ್ದೇನೆ. ತೀರಿಸಿಕೋ ನಿನ್ನ ಸೇಡು, ನನ್ನ ದೇಹದ ಒಂದು ಮುದ್ದೆ ಮಾಂಸದಿಂದ ಈ ರಾಜ್ಯದ ಸಂಸ್ಕೃತಿ, ಕೀರ್ತಿ ವಿದೇಶಗಳಲ್ಲಿ ಪ್ರಶಂಸಿಸಲ್ಪಡುವುದಾದರೆ ನಾನು ಬದುಕಿದ್ದು ಸಾರ್ಥಕವಾಯಿತು.

ರಾಜ : ಹಾಂ ತಡೆ ಸಾಹುಕಾರ, ನಮ್ಮ ಆಪ್ತಮಿತ್ರ ಗೋದ್ವಾಲ ಸಂಸ್ಥಾನದ ಮಹಾರಾಜರ ಆಸ್ಥಾನದಲ್ಲಿರುವ ನ್ಯಾಯ ನಿರ್ಣಯ ವಿಶಾರದರಾದ ಪತಾಂಜಲಿಯವರ ಸೇವೆಯನ್ನು ಎರವಲಾಗಿ ಕೇಳಿರುವೆವು. ಸ್ವಲ್ಪ ಕಾಯೋಣ.

ಚಮನ್ : ಮೂರು ತಿಂಗಳೊಳಗಾಗಿ ಹಿಂದಿರುಗಿಸದಿದ್ದರೆ ಹೃದಯದ ಹತ್ತಿರದಿಂದ ಎದೆಯ ಒಂದು ಸೇರು ಮಾಂಸವನ್ನು ಕಿತ್ತುಕೊಳ್ಳುವ ಹಕ್ಕನ್ನು ಕರಾರುಪತ್ರ ಕೊಟ್ಟಿದೆ ನನಗೆ. ಪತ್ರವು ಸನ್ನಿಧಾನದಲ್ಲಿದೆ. ಪತ್ರ ಬರೆದುಕೊಟ್ಟವರಾಗಲೀ ಸಾಕ್ಷಿಯಾಗಲೀ ಅದನ್ನು ನಿರಾಕರಿಸಿಲ್ಲ. ಇನ್ನೇಕೆ ಇದಕ್ಕೆ ಹೊರಗಿನವರು?

ರಾಜ : ನಿನಗೆ ನ್ಯಾಯ ದೊರೆತೇ ದೊರೆಯುವುದು. ಕಾನೂನಿನ ದೃಷ್ಟಿಯಲ್ಲಿ ನೀವಿಬ್ಬರೂ ಸರಿಸಮಾನರು. ನಿನಗೆ ಕೊಲ್ಲುವ ಹಕ್ಕಿದ್ದರೆ ಆರೋಪಿಗೆ ರಕ್ಷಿಸಿಕೊಳ್ಳುವ ಹಕ್ಕೂ ಇದೆ.

ಸೇವಕ : ಮಹಾರಾಜರಿಗೆ ಜಯವಾಗಲಿ, ಗೋದ್ವಾಲ ಸಂಸ್ಥಾನದಿಂದ ವಿದ್ವಾಂಸರೂ ಅವರ ಸಹಾಯಕರೂ ಆಸ್ಥಾನ ಪ್ರವೇಶಕ್ಕೆ ಅಪ್ಪಣೆಯನ್ನು ಕಾಯುತ್ತಿರುವರು.

ರಾಜ : ಒಳ್ಳೇದು, ಬರಮಾಡು (ಸೇವಕ ವಂದಿಸಿ ಹೋಗುತ್ತಾನೆ. ಸಭೆಯಲ್ಲಿ ಗುಜುಗುಜು ಪ್ರಾರಂಭವಾಗುವುದು, ವೇಷಪಲ್ಲಟಗೊಂಡ ಭ್ರಮರಾಂಬೆ ಮತ್ತು ಚಂಪಕಮಾಲಿನಿ ಪ್ರವೇಶಿಸಿ).

ವಸುಮಿತ್ರ : ಮಹಾರಾಜರಿಗೆ ನಮ್ಮ ಸಾಷ್ಟಾಂಗ ನಮಸ್ಕಾರಗಳು

(ಇಬ್ಬರೂ ಮಂಡಿಯೂರಿ ವಂದಿಸುವರು)

ರಾಜ : ಯುವಕರೇ, ನೀವಾರು? ಏಕೆ ಬಂದಿರಿ? ನಾವು ನ್ಯಾಯತಜ್ಞ ಪತಾಂಜಲಿಯವರನ್ನು ನಿರೀಕ್ಷಿಸಿದ್ದೆವು.

ವಸುಮಿತ್ರ : ಪತಾಂಜಲಿಯವರು ಅನಾರೋಗ್ಯದ ಕಾರಣದಿಂದ ಬರಲಾರದಾಗಿದ್ದು ನಮ್ಮನ್ನು ಈ ಪತ್ರದೊಡನೆ ಕಳುಹಿಸಿರುವರು. ಪರಾಂಬರಿಸೋಣವಾಗಲಿ

(ಪತ್ರವನ್ನು ಕೊಡುವನು).

ರಾಜ : (ತನ್ನಲ್ಲಿಯೇ ಓದಿ) ನಿಮ್ಮ ಎಳೆಯ ಪ್ರಾಯವನ್ನು ಗಮನಿಸಿ, ನಾವು ಸ್ವಲ್ಪ ಅನುಮಾನಿಸಿದ್ದೆವು.

ವಸುಮಿತ್ರ : ನಾವು ಈ ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದನ್ನು ದ್ವಿಪಕ್ಷದವರೂ ಸಮ್ಮತಿಸುವಿರಷ್ಟೆ!.

ರಾಜಕುಮಾರ : ನನಗೆ ತಮ್ಮಲ್ಲಿ ವಿಶ್ವಾಸವಿದೆ. ತಮ್ಮ ವಿದ್ವತ್ತಿನಲ್ಲಿ ನಂಬುಗೆ ಇದೆ.

ಚಮನ್ : ನನಗಂತೂ ಈ ಹಗರಣ ಬೇಗ ಮುಗಿಯಬೇಕು. ನನ್ನ ತಾಳ್ಮೆ ಮೇರೆ ಮೀರುತ್ತಿದೆ. ನ್ಯಾಯವಿಚಾರಣೆಗೆ ನನ್ನ ಸಮ್ಮತಿಯಿದೆ.

ವಸುಮಿತ್ರ : ಆಸ್ಥಾನದ ಮುಂದಿರುವ ವಿವಾದವನ್ನು ನಾನೂ ನನ್ನ ಗುರುಗಳೂ ಕೂಡಿಯೇ ಮೂರು ದಿನಗಳ ಪರ್ಯಂತ ಅಭ್ಯಾಸ ಮಾಡಿರುವೆವು. ಕುಶನಗರದ ಕಾನೂನು ಕಟ್ಟಲೆಗಳನ್ನೂ ತಿಳಿದುಕೊಂಡೆವು. ನಾನೊಮ್ಮೆ ಕರಾರು ಪತ್ರವನ್ನು ನೋಡಬಹುದೇ?

| | | |
|---|---|---|
| ಚಮನ್ | : | ಒಳ್ಳೇದು |
| ವಸುಮಿತ್ರ | : | (ರಾಜನಲ್ಲಿಗೆ ತೆರಳಿ ಕರಾರುಪತ್ರವನ್ನು ಪರೀಕ್ಷಿಸಿ) ವರ್ತಕರೇ (ರಾಜಕುಮಾರನಿಗೆ) ಈ ಪತ್ರದಲ್ಲಿ ನಮೂದಿಸಿದ ಮೂರು ತಿಂಗಳು ಕಳೆಯುವುದರೊಳಗಾಗಿ ಹಣ ಮತ್ತು ಬಡ್ಡಿಯನ್ನು ವಾಪಸ್ಸುಕೊಟ್ಟಿರೇನು? |
| ರಾಜಕುಮಾರ | : | ವಿಶಿಷ್ಟ ಕಾರಣಗಳಿಂದಾಗಿ ಅದು ಸಾಧ್ಯವಾಗಿಲ್ಲ. |
| ವಸುಮಿತ್ರ | : | ಕಾರಣವೇನೇ ಇರಲಿ, ಕರಾರು ಮುರಿಯಲ್ಪಟ್ಟಿದೆ. ಕುಶನಗರದ ಕಾನೂನಿನಂತೆ ತಪ್ಪುದಂಡಕ್ಕೆ ನೀವು ಅರ್ಹರಾಗಿದ್ದೀರಿ. |
| ಚಮನ್ | : | ವ್ಹಾರೆ ವ್ಹಾ! ಭೂಮಿಗಿಳಿದು ಬಂದ ಬೃಹಸ್ಪತಿ, ಸಾಕ್ಷಾತ್ ಬೃಹಸ್ಪತಿ.! |
| ವಸುಮಿತ್ರ | : | ವರ್ತಕರೇ ತಮಗೇನಾದರೂ ಹೇಳಿಕೊಳ್ಳುವುದಿದೆಯೇ? |
| ರಾಜಕುಮಾರ | : | ನಾನು ಸಂಪಾದಿಸಿದ ಸಂಪತ್ತನ್ನು ದೀನದಲಿತರ ಕಣ್ಣೀರನ್ನು ಒರೆಸುವುದಕ್ಕಾಗಿ, ನನ್ನ ಸ್ನೇಹಿತರಿಗಾಗಿ ವ್ಯಯಿಸಿರುವೆನು. ಈ ದೇಶದ ನ್ಯಾಯ ಪರಿಪಾಲನೆಗಾಗಿ ನನ್ನ ಬಲಿದಾನವಾಗುತ್ತಿದ್ದರೆ, ನಾನು ಧನ್ಯನೆಂದು ತಿಳಿದುಕೊಳ್ಳುವೆನು. |
| ವಸುಮಿತ್ರ | : | ಸಾಹುಕಾರರೇ, ನಿಮಗೆ ಕಾನೂನು ಕ್ರಮಕ್ಕನುಸಾರವಾಗಿ ರಾಜಕುಮಾರನ ಹೃದಯದ ಸಮೀಪದಿಂದ ಎದೆಯ ಒಂದು ಸೇರು ಮಾಂಸವನ್ನು ತೆಗೆಯುವ ಹಕ್ಕನ್ನು ಮಂಜೂರು ಮಾಡಲಾಗಿದೆ. ತೆಗೆಯಲು ಸನ್ನದ್ಧರಾಗಿದ್ದೀರಾ? |
| ಚಮನ್ | : | ಸನ್ನದ್ಧನಾಗಿದ್ದೇನೆ (ಚೂರಿ ತೋರಿಸುವನು). |
| ವಸುಮಿತ್ರ | : | ಹಾಂ. ಸಾವಧಾನ, ನೀವು ತ್ರಾಸುಪಡಿಗಳನ್ನು ಏರ್ಪಾಡು ಮಾಡಿರುವಿರೇ? ನಿಮ್ಮ ವೈದ್ಯರೆಲ್ಲಿ? |
| ಚಮನ್ | : | ಏಕೆ ವೈದ್ಯರು ? ತ್ರಾಸಿನ ಅಗತ್ಯವೇನು? |
| ವಸುಮಿತ್ರ | : | ಕರಾರು ಪತ್ರದಲ್ಲಿ ನಮೂದಿಸಿರುವುದು ಒಂದು ಸೇರು ಮಾಂಸವಷ್ಟೇ? ಹೆಚ್ಚಾಗಲೂ ಬಾರದು. ಕಡಿಮೆಯಾದರೂ ನ್ಯಾಯಬಾಹಿರವಾಗುತ್ತದೆ. ಅದಕ್ಕೆ ತಕ್ಕಡಿ. |
| ನಾಗರಿಕ | : | ಕೇಳು ಮಾರ್ವಾಡಿ, ಕೇಳು. |
| ವಸುಮಿತ್ರ | : | ಸದ್ದು, ನ್ಯಾಯಾಲಯದ ಗಾಂಭೀರ್ಯಕ್ಕೆ ಭಂಗ ತರಬೇಡಿರಿ. ಕೇಳು ಚಮನ್, ತಕ್ಕಡಿ, ತೂಕದ ಕಲ್ಲುಗಳ ವ್ಯವಸ್ಥೆಯನ್ನು ನ್ಯಾಯಾಲಯ ಮಾಡಬಲ್ಲದು. ಆದರೆ ಯೋಗ್ಯರಾದ ವೈದ್ಯರನ್ನು ನೀನೇ ಕರೆತರಬೇಕು. |
| ಚಮನ್ | : | ಏ........ ಏ....... ಏಕೆ? |

ವಸುಮಿತ್ರ : ಏಕೆಂದರೆ ಮಾಂಸವನ್ನು ತೆಗೆಯುವಾಗ ರಕ್ತಸ್ರಾವವಾಗದಂತೆ ನೋಡಿಕೊಳ್ಳಬೇಕಲ್ಲ!.

ನಾಗರಿಕ : ಕೇಳಿರಿ, ಕೇಳಿರಿ!

ವಸುಮಿತ್ರ : ಏನದು ಸದ್ದು? .ಮಾರ್ವಾಡಿಗಳೇ, ವೈದ್ಯರನ್ನು ತರುವುದು ಅಸಾಧ್ಯವಾದರೆ ನ್ಯಾಯಾಲಯದ್ದೇನೂ ತಕರಾರಿಲ್ಲ. ಆದರೆ ಒಂದು ತೊಟ್ಟು ರಕ್ತ ಹೊರಬರದಂತೆ ಸರಿಯಾಗಿ ಒಂದು ಸೇರು ಮಾಂಸವನ್ನು ತೆಗೆಯಬಹುದು. ಹೂಂ, ಬೇಗ

ನಾಗರಿಕರು : ಶಹಭಾಸ್, ಕೇಳಿರಿ ಭೂಮಿಗಿಳಿದು ಬಂದ ಬೃಹಸ್ಪತಿ, ಸಾಕ್ಷಾತ್ ಬೃಹಸ್ಪತಿ.

ಚಮನ್ : .....ಹಾ..... ಹಾ...... ಗೇನೂ ಕರಾರು ಪತ್ರದಲ್ಲಿ ನಮೂದಿಸಿಲ್ಲ. ರಕ್ತಸ್ರಾವವಾದರೆ ಅದಕ್ಕೆ ನಾನು ಜವಾಬುದಾರನಲ್ಲ.

ವಸುಮಿತ್ರ : ಕಾನೂನು ಎಲ್ಲರಿಗೂ ಸಮಾನ, ರಕ್ತದ ಒಂದು ಬಿಂದುವನ್ನು ತೆಗೆಯುವ ಹಕ್ಕನ್ನೂ ಕರಾರು ಪತ್ರದಲ್ಲಿ ನಮೂದಿಸಿಲ್ಲ. ಒಂದು ತೊಟ್ಟು ರಕ್ತವನ್ನು ಹೊರತೆಗೆದರೂ ಕುಶನಗರದ ಕಾನೂನಿನ '೧೯೮'ನೆಯ ವಿಧಿಪ್ರಕಾರ ವಿನಾಕಾರಣ ನಾಗರಿಕನೊಬ್ಬನ ರಕ್ತ ಚೆಲ್ಲಿದುದಕ್ಕಾಗಿ ನೀನು ಮರಣದಂಡನೆಗೆ ಗುರಿಯಾಗುವಿ.ಹೂಂ, ಬೇಗ.

ನಾಗರಿಕರು : ವಸುಮಿತ್ರರಿಗೆ ಜಯವಾಗಲಿ!

ರಾಜ : ಪ್ರಜಾಜನರೇ, ನಿಮಗಾದ ಸಂತೋಷದಲ್ಲಿ ನಾವೂ ಭಾಗಿಗಳು. ಆದರೆ ಆಸ್ಥಾನದ ಗಾಂಭೀರ್ಯವನ್ನು ಕಾಪಾಡುವುದು ನಿಮ್ಮೆಲ್ಲರ ಕರ್ತವ್ಯ ನೆನಪಿರಲಿ.

ಚಮನ್ : ನನ್ನ ತಲೆ ಸಿಡಿಯುತ್ತಿದೆ. ನನ್ನನ್ನು ಹೋಗಲು ಬಿಡಿರಿ. ನಮಗೆ ಮಾಂಸ ಬೇಕಾಗಿಲ್ಲ. ನನ್ನ ಹಣವನ್ನು ಹಿಂದಿರುಗಿಸಿರಿ

ವಸುಮಿತ್ರ : ಸಾಧ್ಯವಿಲ್ಲ. ಕರಾರುಪತ್ರದಲ್ಲಿ ಹಾಗೆ ನಮೂದಿಸಿಲ್ಲ. ವಾಯ್ದೆ ಕಳೆದ ಅನಂತರ ಹಣ ಸ್ವೀಕರಿಸಲು ಅವನು ಅರ್ಹನಲ್ಲ.

ಚಮನ್ : (ತಲೆಯನ್ನು ಎರಡೂ ಕೈಗಳಿಂದ ಒತ್ತಿ ಹಿಡಿದುಕೊಂಡು) ನನ್ನ ತಲೆ ಸಿಡಿದು ಚೂರಾಗುತ್ತಿದೆ. ನನಗೆ ನಿಮ್ಮ ಹಣವೂ ಬೇಡ. ನಾನಿನ್ನು ಹೋಗುತ್ತೇನೆ

(ಹೊರಡಲು ಸಿದ್ಧನಾಗುತ್ತಾನೆ).

ವಸುಮಿತ್ರ : ಹಾಂ. ಹಾಂ, ಅಷ್ಟು ಸುಲಭವಾಗಿ ಹೋಗುವಂತಿಲ್ಲ. ನಿಲ್ಲು ದುರುದ್ದೇಶದಿಂದ ಕುಶನಗರದ ಸತ್ಪ್ರಜೆಯೊಬ್ಬನ ಜೀವವನ್ನು ಕೊನೆಗಾಣಿಸಲು ನೀನು ಹೊಂಚು ಹಾಕಿರುವ ಸಂಗತಿ, ನ್ಯಾಯಾಸ್ಥಾನದಲ್ಲೀಗ ರುಜುವಾತಾಗಿದೆ. ಇದಕ್ಕೆ ನ್ಯಾಯಾಂಗದ '೨೫೬' ನೆಯ ವಿಧಿ ಪ್ರಕಾರ ಆಜೀವ ಕಾರಾಗೃಹ ಮತ್ತು ನಿನ್ನ ಎಲ್ಲಾ ಚರ ಸ್ಥಿರ ಸ್ವತ್ತುಗಳು

ಮುಟ್ಟುಗೋಲು (ಚಮನ್ ತಲೆಯನ್ನು ಕೈಗಳಲ್ಲಿ ಹಿಡಿದು ಕುಳಿತು ಬಿಡುವನು). ಆದರೆ ಮಹಾರಾಜರ ಕರುಣೆಗಾಗಿ ಪ್ರಾರ್ಥಿಸಿಕೊಂಡಲ್ಲಿ ಶಿಕ್ಷೆಯನ್ನು ಕಡಿಮೆ ಮಾಡಬಹುದು.

ರಾಜ : ನನಗ್ಯಾರ ಕರುಣೆಯ ಅಗತ್ಯವಿಲ್ಲೆಂದು ಸಾರಿ ಹೇಳಿರುವನು. ಆದರೂ ನಮ್ಮ ರಾಜ್ಯದ ಸಂಸ್ಕೃತಿಯ ಮೇಲ್ಮೆಯನ್ನು ತೋರಿಸುವುದಕ್ಕಾಗಿ ನೀನು ಯಾಚಿಸುವ ಮೊದಲೇ ನಾವು ನಿನಗೆ ಕರುಣೆದೋರುವೆವು. ಆದರೆ ನಿನ್ನ ಎಲ್ಲಾ ಸ್ಥಿರ ಚರಾಸ್ತಿಯನ್ನು ಸ್ವಾಧೀನಪಡಿಸಿಕೊಂಡು, ವರ್ತಕ ರಾಜಕುಮಾರರಿಗೆ ಕೊಡಲಾಗುವುದು. ನೀನಿನ್ನು ಹೋಗಬಹುದು.

ಚಮನ್ : ಅಯ್ಯೋ ಏನಾಗಿ ಹೋಯಿತು!! (ವೇಗವಾಗಿ ಹೋಗುತ್ತಾನೆ)

ನಾಗರಿಕರು : ಧಿಕ್ಕಾರ! ಧನಪಿಶಾಚಿಗೆ ಧಿಕ್ಕಾರ!!(ಮೂರುಸಲ ಕೂಗುವರು)

## ಲೇಖಕರ ಪರಿಚಯ



ಸಾಹಿತಿ ನಾಟಕಕಾರ ಶಿಕ್ಷಣ ತಜ್ಞ ಕಾರ್ಕಡ ರಾಮಚಂದ್ರ ಉಡುಪರು ೧೬.೦೪.೧೯೨೧ ರಂದು ಉಡುಪಿ ಜಿಲ್ಲೆಯಲ್ಲಿ ಜನಿಸಿದರು. ಉಡುಪಿ ಜಿಲ್ಲೆಯ ಕೋಟ ವಿವೇಕ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಇವರು ಶ್ರೇಷ್ಠ ಶಿಕ್ಷಕ ಎಂಬ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಸಿದ್ದಾರ್ಥ, ಸತ್ಯವಾನ್ ಸಾವಿತ್ರಿ, ನಸೇರ ಪ್ರತಾಪ (ಈಜಿಪ್ಟಿನ ಅಧ್ಯಕ್ಷ ನಾಸರ ಬಗ್ಗೆ) ಪನ್ನಾದಾಸಿ, ಸಂಯುಕ್ತ ಪೃಥ್ವಿರಾಜ, ಶಕುಂತಲೆ ಯಾರು ಮೊದಲು? ಮಂತರೆ ಮಾಚಮ್ಮನ ಮಂದಿರ (ಇಂಗ್ಲಿಷ್ ಕವಿತೆಯೊಂದರ ನಾಟಕ ರೂಪ) ಬಾಲೆಗೊಲಿದ ಭಗವಂತ (ಕೋಳೂರ ಕೊಡಗೂಸು) ಉಲ್ಟಾ ಪಲ್ಟಾ, ಗಾಂಧಿ ನೆನಪಿರಲಿ (ರಿಮೆಂಬರ್ ಸೀಸನ್ ನಾಟಕದ ರೂಪಾಂತರ) ಭೂಮಿಗೆ ಬಂದ ಬೃಹಸ್ಪತಿ (ಶೇಕ್ಸ್ ಪಿಯರ್ ನ ಮರ್ಚೆಂಟ್ ಆಫ್ ವೆನಿಸ್ ನಾಟಕದ ರೂಪಾಂತರ) ಮುಂತಾದವು ಇವರ ನಾಟಕ ಕೃತಿಗಳಾಗಿವೆ. ಶಿಕ್ಷಣ ಹಾಗೂ ಸಾಹಿತ್ಯಕ್ಷೇತ್ರಕ್ಕೆ ಇವರ ಕೊಡುಗೆ ಗಮನಾರ್ಹವಾದುದು. ಇವರು ೨೬.೧೨.೨೦೦೭ ರಲ್ಲಿ ನಿಧನರಾದರು. ಪ್ರಸ್ತುತ ನಾಟಕವನ್ನು ಅವರ 'ಭೂಮಿಗೆ ಬಂದ ಬೃಹಸ್ಪತಿ ನಾಟಕ ಕೃತಿಯಿಂದ ಆರಿಸಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.

1. ಚಮನ್ ಲಾಲನಿಗೆ ರಾಜಕುಮಾರನ ಮೇಲೆ ಅಸಮಾಧಾನ ಉಂಟಾಗಲು ಕಾರಣವೇನು?
2. ರಾಜಕುಮಾರನು ಚಮನ್ ಲಾಲನ ಬಳಿ ಸಾಲ ಪಡೆದುಕೊಳ್ಳಲು ಕಾರಣವಾದ ಸನ್ನಿವೇಶ ಯಾವುದು?
3. ಚಮನ್ ಲಾಲ್ ರಾಜಕುಮಾರನೊಂದಿಗೆ ಮಾಡಿಕೊಂಡ ಕರಾರು ಏನಾಗಿತ್ತು?
4. ವಸುಮಿತ್ರ ನೀಡಿದ ತೀರ್ಪು ಏನಾಗಿತ್ತು?

## ಪಾತ್ರ ಚಿತ್ರಣ ಮಾಡಿರಿ

'ನ್ಯಾಯದ ತಕ್ಕಡಿ' ನಾಟಕದಲ್ಲಿ ಬಂದಿರುವ ಚಮನ್ ಲಾಲನ ಪಾತ್ರ ಚಿತ್ರಣ ಮಾಡಿರಿ.

## ಸಂದೇಶ ಬರೆಯಿರಿ

ಈ ನಾಟಕವು ನೀಡುವ ಸಂದೇಶವನ್ನು ಬರೆಯಿರಿ

## ಶೀರ್ಷಿಕೆ ನೀಡಿ ಸಮರ್ಥಿಸಿ ಬರೆಯಿರಿ

ಈ ನಾಟಕಕ್ಕೆ ಸರಿಹೊಂದುವ ಬೇರೊಂದು ಶೀರ್ಷಿಕೆಯನ್ನು ನೀಡಿ ಅದು ಹೇಗೆ ಸೂಕ್ತವೆಂದು ಸಮರ್ಥಿಸಿ ಬರೆಯಿರಿ.

## ಭಿತ್ತಿ ಪತ್ರ ರಚಿಸಿರಿ

ನಿಮ್ಮ ತರಗತಿಯ ಸಾಹಿತ್ಯ ಸಭೆಯಲ್ಲಿ 'ನ್ಯಾಯದ ತಕ್ಕಡಿ' ನಾಟಕ ಪ್ರದರ್ಶನ ನಡೆಯಲಿದೆ ಎಂದು ಭಾವಿಸಿ ಅದರ ಪ್ರಚಾರಕ್ಕಾಗಿ ಭಿತ್ತಿ ಪತ್ರವೊಂದನ್ನು ರಚಿಸಿರಿ.

## ರೂಪಾಂತರಿಸಿ ಬರೆಯಿರಿ

'ನ್ಯಾಯದ ತಕ್ಕಡಿ' ನಾಟಕದ ಕತೆಯನ್ನು ಸಂಕ್ಷೇಪವಾಗಿ ನಿಮ್ಮದೇ ಮಾತುಗಳಲ್ಲಿ ಗದ್ಯರೂಪದಲ್ಲಿ ಬರೆಯಿರಿ.

## ಪತ್ರಿಕಾ ವರದಿ ತಯಾರಿಸಿರಿ

ನಿಮ್ಮ ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆದ ಸಭಾ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಕುರಿತು ಪತ್ರಿಕಾ ವರದಿಯೊಂದನ್ನು ತಯಾರಿಸಿರಿ.

## ಅಭಿನಯಿಸಿರಿ

'ನ್ಯಾಯದ ತಕ್ಕಡಿ' ನಾಟಕವನ್ನು ತರಗತಿಯಲ್ಲಿ ಅಭಿನಯಿಸಿರಿ.

## ನಾಟಕ ರಚಿಸಿರಿ

ನಿಮಗಿಷ್ಟವಾದ ಯಾವುದಾದರೂ ಒಂದು ವಿಷಯವನ್ನು ಆಯ್ದುಕೊಂಡು ಕಿರು ನಾಟಕವನ್ನು ರಚಿಸಿರಿ.

# ಅರ್ಥಕೋಶ

| | | |
|---|---|---|
| ಅಗಾಧ | - | ಆಳವಾದ |
| ಅಚಾನಕ್ | - | ಆಕಸ್ಮಿಕ |
| ಅಡ್ಡಿಕೆ | - | ಕೊರಳಾಭರಣ |
| ಅನಾಮತ್ತಾಗಿ | - | ಇದ್ದಕ್ಕಿದ್ದಂತೆ, ಒಮ್ಮಿಂದೊಮ್ಮೆಲೆ |
| ಆಟಿಕೆ | - | ಆಟದ ಸಾಮಾನು |
| ಇಕ್ಕೆಲ | - | ಎರಡು ಬದಿ |
| ಇರಿಚಲು | - | ಗಾಳಿಗೆ ಕಟ್ಟಡದ ಒಳಗಡೆ ಸಿಡಿಯುವ ಮಳೆಯ ನೀರು |
| ಉಗ್ರಾಣ | - | ಸರಕು ಸಂಗ್ರಹ ಸ್ಥಳ |
| ಉಗ್ರಾಣಿ | - | ಪಟೇಲ ಅಥವಾ ಶಾನುಭೋಗರ ಸಹಾಯಕ |
| ಒಟ್ಟೆ ಮುಕ್ಕಾಲು | - | ಹಿಂದೆ ಬಳಕೆಯಲ್ಲಿದ್ದ ಮಧ್ಯದಲ್ಲಿ ತೂತಿರುವ ನಾಣ್ಯ |
| ಒರಳು ಕಲ್ಲು | - | ಅರೆಯುವ ಕಲ್ಲು |
| ಒಸಗೆ | - | ಶುಭ, ಸಂಭ್ರಮ, ಸಂತೋಷ |
| ಓಲೈಸು | - | ಸೇವೆ ಮಾಡು |
| ಕಳೆ | - | ಕಾಂತಿ, ಶೋಭೆ |
| ಕಣಜ | - | ಧಾನ್ಯ ಸಂಗ್ರಹ ಸ್ಥಳ |
| ಕಬಳಿಸು | - | ನುಂಗು |
| ಕಿನ್ನರ ಲೋಕ | - | ಕುದುರೆಯ ಮುಖ ಮತ್ತು ಮನುಷ್ಯನ ಶರೀರವನ್ನು ಹೊಂದಿರುವವರ ಲೋಕ |
| ಕಿಂಕರ | - | ಸೇವಕ |
| ಕುದ್ರತ್ | - | ಲೀಲೆ |
| ಕುಹಕಿ | - | ವಂಚಕ , ಕಪಟಿ |
| ಕುಹರ | - | ಗುಹೆ , ಗವಿ |
| ಕೈಗೂಡು | - | ಈಡೇರು |
| ಕೈಯ ಕಾಪು | - | ದೃಷ್ಟಿ ಬಳೆ |

| | | |
|---|---|---|
| ಕೋಳ | - | ಸಂಕೋಲೆ, ಬೇಡಿ ,ಕೈಕೋಳ |
| ಕಂಗಾಲಾಗು | - | ದಿಕ್ಕುಗೆಡು |
| ಕಂಗಾಲು | - | ಬಡತನ , ದಾರಿದ್ರ್ಯ |
| ಕ್ರಾಂತಿ | - | ಆಂದೋಲನ |
| ಖಳ | - | ದುಷ್ಟ |
| ಖೆಡ್ಡ | - | ಕಾಡಾನೆಗಳನ್ನು ಹಿಡಿಯಲು ತೋಡುವ ಹೊಂಡ |
| ಗಮ್ಯ | - | ತಲುಪಬೇಕಾದ |
| ಗಾಯತ್ರಿ | - | ಮಂತ್ರಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು, ಗಾಯತ್ರಿ ಛಂದಸ್ಸಿನಲ್ಲಿ ರಚಿತವಾದುದು |
| ಗಿಜಿಗಿಡು | - | ಗದ್ದಲದಿಂದ ಕೂಡು, ನಿಬಿಡವಾಗಿರು |
| ಗುಡಾಣ | - | ದೊಡ್ಡ ಹಂಡೆ, ಕೊಪ್ಪರಿಗೆ |
| ಗುಡಾಣ ಬುದ್ಧಿ. | - | ಎಲ್ಲವನ್ನೂ ಕೂಡಿಡುವ ಸ್ವಭಾವ |
| ಗೊಲಸು | - | ಒಂದು ಆಭರಣ (ಸರಪಳಿ) |
| ಗೋರಿ | - | ಸಮಾಧಿ |
| ಗೋಸುಂಬೆ | - | ಓತಿಕ್ಯಾತ, ಆಗಾಗ ಮೈಯ ಬಣ್ಣ ಬದಲಾಯಿಸಬಲ್ಲ ಓತಿಕ್ಯಾತದ ಜಾತಿಗೆ ಸೇರಿದ ಒಂದು ಪ್ರಾಣಿ. |
| ಗೌಳಿ | - | ದನ ಸಾಕಿ ಹಾಲು ಮಾರುವವ |
| ಚಿತ್ತ | - | ಮನಸ್ಸು |
| ಚಿಲುಮೆ | - | ಒರತೆ, ಬುಗ್ಗೆ |
| ಚೇತನ | - | ಚೈತನ್ಯ |
| ಛಾಯೆ | - | ನೆರಳು |
| ಜಖಂ | - | ಗಾಯ |
| ಜೋಮಾಲೆ | - | ತೂಗಾಡುವ ಮಾಲೆ |
| ಝರಿ | - | ಬೆಟ್ಟದಿಂದ ಹರಿದು ಬರುವ ಪ್ರವಾಹ |
| ಡಾಂಬರು | - | ಡಾಮರು |
| ತನು | - | ದೇಹ, ಶರೀರ |
| ತಿಮಿರ | - | ಕತ್ತಲೆ |

| | | |
|---|---|---|
| ತುಳುಕು | - | ಅಲ್ಲಾಡು, ಹೊರಚೆಲ್ಲು, ಸೂಸು. |
| ತೊನೆ | - | ಓಲಾಡು |
| ತ್ರಾಸು ಪಡಿ | - | ತಕ್ಕಡಿ ಮತ್ತು ತೂಕ ಮಾಡುವ ಕಲ್ಲುಗಳು |
| ದಫೇದಾರ | - | ಪೊಲೀಸ್ ಅಧಿಕಾರಿ |
| ದೌಡಾಯಿಸು | - | ಓಡೋಡಿ ಬರು |
| ಧರಾಶಾಹಿಯಾಗು | - | ಭೂಮಿಗೆ ಬೀಳು |
| ನೆರೆ | - | ಪ್ರವಾಹ |
| ನೆಲುವು | - | ಪಾತ್ರಗಳನ್ನು ಇಡುವುದಕ್ಕೆ ಎತ್ತರದಲ್ಲಿ ಇಳಿಬಿಟ್ಟ ಹಗ್ಗದ ಜಾಳಿಗೆ. |
| ನಿಗೂಢ | - | ಗುಟ್ಟು,  ರಹಸ್ಯ |
| ನಿರ್ಭಯ | - | ಭಯವಿಲ್ಲದ |
| ನಿಷಿದ್ಧ | - | ಮಾಡಬಾರದುದು, ನಿಷೇಧಿಸಿದುದು. |
| ನಿಷ್ಕ್ರಿಯ | - | ಕ್ರಿಯೆಯಿಲ್ಲದ |
| ಪಾರ್ಥಸಾರಥಿ | - | ಅರ್ಜುನನ ರಥದ ಚಾಲಕ, ಶ್ರೀಕೃಷ್ಣ |
| ಪುಳಕ | - | ರೋಮಾಂಚನ |
| ಪೂಜಾಪುರಶ್ಚರಣ | - | ಪೂಜಾ ಸಮಯದಲ್ಲಿ  ಪುನರುಚ್ಚರಿಸುವ ಮಂತ್ರಗಳು |
| ಪೊಗರು | - | ಗರ್ವ, ಅಹಂಕಾರ |
| ಪ್ರಭೇದ | - | ವಿಭಾಗ, ಪ್ರಕಾರ ,ತಳಿ |
| ಬಗ್ಗುಬಡಿ | - | ಮೇಲೇಳದಂತೆ ಕೆಡಹು, ಚೆನ್ನಾಗಿ ಪೆಟ್ಟು ಹಾಕು. |
| ಬಾಸುಂದಿ | - | ಒಂದು ಬಗೆಯ ಸಿಹಿತಿನಿಸು |
| ಬಿತ್ತರ | - | ವಿಸ್ತಾರ |
| ಭಕ್ಷೀಸು | - | ಮೆಚ್ಚಿ ಕೊಡುವ ಬಹುಮಾನ |
| ಮಲೆ | - | ಬೆಟ್ಟ, ಪರ್ವತ |
| ಮಹಜರು | - | ಅಪರಾಧ ತಪಾಸಣೆಯ ವಿವರವಾದ ವರದಿ |
| ಮಾರ್ವಾಡಿ | - | ವ್ಯಾಪಾರಿ |
| ಯಮಯಾತನೆ | - | ಸಹಿಸಲಾರದ ನೋವು |
| ಯಶೋಗಾಥೆ | - | ಯಶಸ್ಸನ್ನು ಕುರಿತ ಕಥೆ |

| | | |
|---|---|---|
| ರೂವಾರಿ | - | ಶಿಲ್ಪಿ, ರೂಪ ಕೆತ್ತುವವನು |
| ಲಗಾಮು | - | ಕಡಿವಾಣ, ಕುದುರೆಯನ್ನು ನಿಯಂತ್ರಿಸುವ ಹಗ್ಗ |
| ವಾಣಿ | - | ಮಾತು, ನುಡಿ |
| ವಾಮಮಾರ್ಗ | - | ದುರ್ಮಾರ್ಗ, ಕೆಟ್ಟ ಮಾರ್ಗ, ಅಡ್ಡದಾರಿ |
| ವೈಚಿತ್ರ್ಯ | - | ವಿಚಿತ್ರವಾದ |
| ವಿಸ್ಮಯ | - | ಆಶ್ಚರ್ಯ, ಬೆರಗು. |
| ಶಾನುಭೋಗ | - | ಗ್ರಾಮದ ವ್ಯವಹಾರಗಳಿಗೆ ಸಂಬಂಧಿಸಿದ ಲೆಕ್ಕಗಳನ್ನು ಬರೆಯುವ |
| ಸರಿಗೆ | - | ವಂಕಿ ,ಒಂದು ಬಗೆಯ ಆಭರಣ. |
| ಸಿದ್ಧಿ | - | ಸಾಧನೆ, ಪಾರಂಗತ |
| ಸೇರು | - | ತೂಕ ಮತ್ತು ಅಳತೆಯ ಮಾನ |
| ಹಿಚುಕು | - | ಹಿಸುಕು, ಕಿವುಚು. |
| ಹಿಮಾವೃತ | - | ಹಿಮದಿಂದ ಆವರಿಸಿದ |
| ಹಿಲಾಲು | - | ದೊಡ್ಡ ದೀವಟಿಗೆ |
| ಹೂಟ | - | ಹೂಡುವಿಕೆ, ಸಿದ್ಧತೆ, ಹೊಂದಿಸುವಿಕೆ. |
| ಹೂಡು | - | ಬಾಣ ಪ್ರಯೋಗ ಮಾಡು, ಸೇರಿಸು. |
| ಹೆಣಗು | - | ತುಂಬಾ ಪ್ರಯತ್ನ ಮಾಡು, ಅತಿ ಸಾಹಸ ಮಾಡು. |
| ಹೆರಳು | - | ಜಡೆ |
| ಹೆಳವ | - | ವಿಶೇಷ ಚೇತನ, ಕಾಲು ಊನವಿರುವ ವ್ಯಕ್ತಿ |
| ಹೊಂಬಯಕೆ | - | ಹಿರಿದಾದ ಆಸೆ, ಶ್ರೇಷ್ಠ ಆಸೆ |
| ಹೊಮ್ಮು | - | ಹೊರಸೂಸು, ಹರಡು |
| ಹೊರೆ | - | ಪೊರೆ, ಕಾಪಾಡು , ಜೋಪಾನ ಮಾಡು |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in